ಸಂಪುಟ: 33
ಸಂಚಿಕೆ: 29
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ
www.sanmarga.com

# ಸನ್ಮಾರ್ಗ ವಾರಪತ್ರಿಕೆ

2010 ಅಕ್ಟೋಬರ್ 03 – 09
1431 ಶವ್ವಾಲ್ 24 – 30







ಸೌಜನ್ಯ: ಪ್ರಜಾವಾಣಿ

● ಡಾ| ಏ.ತರುವನ

# ‘ನನ್ನ ರಾಮನನ್ನು ಸಣ್ಣ ಪಟ್ಟಣಕ್ಕೇಕೆ ಸೀಮಿತಗೊಳಿಸುತ್ತೀರಿ?’

**ಬಾ**ಬರಿ ಮಸೀದಿಯಿದ್ದ ಸ್ಥಳದ ಒಡೆತನ ಹಕ್ಕಿಗೆ ಸಂಬಂಧಿಸಿ ಅಲಹಾಬಾದ್ ಹೈಕೋರ್ಟಿನ ಲಕ್ನೋ ಪೀಠದ ತೀರ್ಪು ಇನ್ನೇನು ಪ್ರಕಟವಾಗುವ ಸಾಧ್ಯತೆ ಇರುವುದರಿಂದ ತೀರ್ಪು ನಮಗೆ ವಿರುದ್ಧವಾದರೆ ಒಪ್ಪಿಕೊಳ್ಳುವುದಿಲ್ಲ. ಅದು ನಂಬಿಕೆಯ ಪ್ರಶ್ನೆಯೆಂದು ಸಂಘಪರಿವಾರ ವಲಯಗಳು ಘಂಟಾಘೋಷವಾಗಿ ಸಾರಿವೆ. ಅಯೋಧ್ಯೆಯ ಬಾಬರಿ ಮಸೀದಿಯಿದ್ದ ಸ್ಥಳದಲ್ಲಿಯೇ ಶ್ರೀರಾಮನ ಜನ್ಮಸ್ಥಳವಿತ್ತೆಂದು ಅದು ವಾದಿಸುತ್ತಿದೆ. ರಾಮನನ್ನು ಓರ್ವ ಇತಿಹಾಸ ಪುರುಷನೆಂದು ಸಾಬೀತು ಪಡಿಸುವ ಐತಿಹಾಸಿಕ ದಾಖಲೆಗಳು ಇಲ್ಲದಿರುವುದರಿಂದ ವಸ್ತುನಿಷ್ಠ ಸಾಕ್ಷ್ಯಗಳನ್ನು ಮಾತ್ರ ಗಮನಿಸಿ ತೀರ್ಪು ಕೊಡಬೇಕಾದ ಅನಿವಾರ್ಯತೆಯಿರುವ ನ್ಯಾಯಾಲಯಗಳಿಂದ ಒಂದು ಪುರಾಣ ಕಥೆಯಿಂದ ರಾಮನ ಜನ್ಮಸ್ಥಾನವನ್ನು ನಿರ್ಣಯಿಸಲು ಸಾಧ್ಯವಿಲ್ಲವೆಂಬುದು ಇತರೆಲ್ಲರಿಗಿಂತ ಪರಿವಾರ ಮೂಲಗಳಿಗೆ ಚೆನ್ನಾಗಿಯೇ ತಿಳಿದಿದೆ. ನ್ಯಾಯಾಲಯಗಳ ತೀರ್ಪಿಗಿಂತ ನಂಬಿಕೆಯೇ ಮೇಲೆಂದು’ ವಾದಿಸುವವರಿಗೆ ಅಂಥ ವಾದಕ್ಕೆ ನಿಜವಾಗಿಯೂ ನಂಬಿಕೆಯೇ ಕಾರಣವೇ? ಅಲ್ಲಿಯೇ ಜನ್ಮಸ್ಥಾನವಿತ್ತೆಂಬ ನಂಬಿಕೆ ಇರುವುದು ಸತ್ಯವೇ? ಇದು ಸಮಸ್ಯೆಯ ಮೂಲ ಪ್ರಶ್ನೆ. ಯಾಕೆಂದರೆ, ಒಂದೇ ರಾಮಾಯಣ ಇರುವುದಲ್ಲ ಅಥವಾ ಅದಕ್ಕೆ ಸಂಬಂಧಿಸಿದ ಏಕಶಿಲಾ ಸಂಸ್ಕೃತಿಯು ಅಸ್ತಿತ್ವದಲ್ಲಿಲ್ಲ. ನಿಜವಾಗಿ ಒಂದು ‘ರಾಮಾಯಣ’ವಲ್ಲ, ಹಲವು ‘ರಾಮಾಯಣಗಳು’ ಅಸ್ತಿತ್ವದಲ್ಲಿವೆ. ರಾಮಾಯಣವು ಕೇವಲ ಭಾರತದ ಸೊತ್ತಲ್ಲ, ಅದು ಏಶ್ಯನ್ ರಾಷ್ಟ್ರಗಳ ಸಾಮೂಹಿಕ ಸೊತ್ತು. ಇಂಡೋನೇಶ್ಯ, ಮಲೇಶ್ಯ, ಥೈವಾನ್, ಭೂತಾನ್, ಶ್ರೀಲಂಕಾ, ಚೈನಾ, ಟಿಬೇಟ್, ಪಾಕಿಸ್ತಾನ ಮುಂತಾದ ಏಶ್ಯದ ಎಲ್ಲ ರಾಷ್ಟ್ರಗಳಲ್ಲಿಯೂ ರಾಮಾಯಣಗಳು ಬಹುವಂಶ ಉಳಿದಿವೆ. ಹಿಂದುಗಳಂತೆಯೇ, ಬೌದ್ಧ, ಜೈನ, ದಲಿತ ಮತ್ತು ಆದಿವಾಸಿಗಳಲ್ಲಿ ಬಹಳ ಭಿನ್ನವಾದ ಮತ್ತು ರೋಚಕವಾದ ರಾಮಾಯಣಗಳಿವೆ. ಲಿಖಿತ ಸಾಹಿತ್ಯಗಳಂತೆಯೇ ಜಾನಪದ ಸಾಹಿತ್ಯಗಳಲ್ಲಿಯೂ ಅನೇಕ ರಾಮಾಯಣಗಳಿವೆ. ರಾಮಾಯಣ ಪಂಡಿತ ರಾಮಾನುಜಮ್‌ರು ‘ಮುನ್ನೂರು ರಾಮಾಯಣಗಳು’ ಎಂಬ ಲೇಖನವನ್ನು ಬರೆದಿದ್ದರು. ಅವರು ಆ ಲೇಖನದ ಆರಂಭದಲ್ಲಿ ‘ಎಷ್ಟು ರಾಮಾಯಣಗಳಿವೆ, ಮುನ್ನೂರೋ ಅಥವಾ ಮೂರು ಸಾವಿರವೋ’ ಎಂದು ಪ್ರಶ್ನಿಸಿದ್ದರು. ರಾಮಾಯಣಕ್ಕೆ ಕೇವಲ ಹತ್ತು ಯಾ ನೂರು ಮಾತ್ರವಲ್ಲ, ಸಹಸ್ರಾರು ವಿಭಿನ್ನ ಪಾಠಬೇಧಗಳಿವೆ. ಅವೆಲ್ಲವೂ ವಾಲ್ಮೀಕಿ ರಾಮಾಯಣದ ಪಾಠಾಂತರಗಳಲ್ಲ, ಬದಲಾಗಿ ಅವುಗಳಲ್ಲಿ ಹೆಚ್ಚಿನವು ಸ್ವತಂತ್ರ

(3ನೇ ಪುಟಕ್ಕೆ)

## ತೀರ್ಪು ಏನೇ ಆದರೂ..

❑ ಏ.ಪಿ.ವಿ.

**ಭಾ**ರತದ ಇತಿಹಾಸವು ಇನ್ನೊಂದು ನಿರ್ಣಾಯಕ ತಿರುವಿನಲ್ಲಿ ಬಂದು ನಿಂತಿದೆ. ಅಯೋಧ್ಯೆಯ ವಿವಾದಿತ ಭೂಮಿ ಒಡೆತನದ ತೀರ್ಪು ಇನ್ನೇನು ಪ್ರಕಟವಾಗುವ ಸಾಧ್ಯತೆಯಿದೆ. ಸುದೀರ್ಘ ಕಾಲದಿಂದ ಸಾಗಿ ಬಂದ ಪ್ರಕರಣದ ತೀರ್ಪು ಏನೇ ಆದರೂ ಭಾರತದ ಮುಂದಿನ ಇತಿಹಾಸದಲ್ಲಿ ಅದೊಂದು ನಿರ್ಣಾಯಕ ಮೈಲುಗಲ್ಲಾಗಲಿದೆ.

ನಿಜವಾಗಿ ಇಂಥ ಉಸಿರು ಬಿಗಿಹಿಡಿದಿರುವ ಈ ಘಟನೆಗೆ ಸಮಾನವಾದ ಮೂರು ಘಟನೆಗಳಿಂದ ದೇಶವು ಹಾದು ಬಂದಿದೆ. ಒಂದನೆಯದು, ಸ್ವಾತಂತ್ರ್ಯ ಗಳಿಕೆಯ ಬೆನ್ನಲ್ಲೇ ಸಂಭವಿಸಿದ ಭಾರತ ಪಾಕ್ ವಿಭಜನೆ. ಮುಂದೆ ಎರಡೂ ರಾಷ್ಟ್ರಗಳಲ್ಲಿ ಸ್ಫೋಟವಾದ ಕೋಮು ಗಲಭೆ. ಅದರ ಬೆಂಕಿ ನಂದಿಸಲಿಕ್ಕಾಗಿ ಗಾಂಧೀಜಿ ನಡೆಸಿದ ಉಪವಾಸದಿಂದ ಕುಪಿತರಾದವರಿಂದ ಗಾಂಧೀಜಿಯ ಹತ್ಯೆ. ಮೂರನೆಯದು, ವಿವಾದಾಸ್ಪದ ಭೂಮಿಯಲ್ಲಿ ಸಾಂಕೇತಿಕ ಕರಸೇವೆ ನಡೆಸುವುದಾಗಿ ಸಾರಿ ಬಿ.ಜೆ.ಪಿ. ಮತ್ತು ವಿಹಿಂಪ ಮಾಡಿದ ಬಾಬರಿ ಮಸೀದಿ ಧ್ವಂಸ ಮತ್ತು ಅದರ ದುರಂತ.

ಇವು ಮೂರಕ್ಕೂ ಪರಸ್ಪರ ಸಂಬಂಧವಿದೆ. ದೇಶದ ಪ್ರಜಾತಂತ್ರ ಮತ್ತು ಧಾರ್ಮಿಕ ಸೌಹಾರ್ದದ ಬುನಾದಿಯನ್ನು ಹಾಳುಗೆಡಹಿ, ಕಣ್ಣೀರು ಮತ್ತು ರಕ್ತ ಹರಿಸಿದ ಇತಿಹಾಸದ ಹಾದಿ. ಇಷ್ಟಕ್ಕೂ ದೇಶವು ಪುನಃ ಒಂದು ಹೊಸ ತಿರುವಿನಲ್ಲಿದೆಯೆನ್ನುವಾಗ ಆ ಹಿಂದಿನ ಆಘಾತಗಳ ಪುನರಾವರ್ತನೆಯಾಗಬೇಕಾಗಿಲ್ಲ. ಈ ಮಹಾನ್ ದೇಶದ 115 ಕೋಟಿ ಪ್ರಜೆಗಳು



(ಕೊನೆಯ ಪುಟಕ್ಕೆ)

## ಭಲೇ...

ವಿಶೇಷ ಪತ್ರ

‘ಸನ್ಮಾರ್ಗ’ ಈದ್ ವಿಶೇಷಾಂಕ ಸಿಕ್ಕಿತು. ಮೊದಲು ಪುಟ ತಿರುವಿ, ನಿಧಾನವಾಗಿ ಓದಿ ಓದಿನ ನಿಜವಾದ ಸುಖ ಅನುಭವಿಸಲೆಂದು ಪಕ್ಕಕ್ಕೆ ಸರಿಸಿದೆ. ಇಂದು ಬಿಡುವು ದೊರೆಯಿತು. ಓದತೊಡಗಿದೆ. ಒಳ್ಳೆಯ ಲೇಖನಗಳನ್ನು ಓದಿದಾಗ ಆಗುವ ಸಂತಸ, ತೃಪ್ತಿ ಏನು ಅನ್ನುವುದನ್ನು ಅಕ್ಷರಗಳಲ್ಲಿ ಮೂಡಿಸಬಲ್ಲ ಶಕ್ತಿ ಇನ್ನು ನನಗಿಲ್ಲ. ನಿಜವಾಗಿ ಹಲವು ಲೇಖನಗಳು ಅದ್ಭುತವಾಗಿದ್ದುವು. ದೀರ್ಘಕಾಲದಿಂದ ಸನ್ಮಾರ್ಗದ ಬಳಗವಾಗಿದ್ದುದರಿಂದಲೋ ಏನೋ ಇವತ್ತಿಗೂ ಈ ಗಾಢ ಸಂಬಂಧದಿಂದ ಮುಕ್ತನಾಗಲು ನನಗೆ ಸಾಧ್ಯವಾಗಲೇ ಇಲ್ಲ. ನೀವೆಲ್ಲ ನನ್ನವರು ಎಂದು ಅನ್ನಿಸಿದೆ ಸದಾಕಾಲ. ಮುಖಪುಟ ಸಾಟಿ ಇಲ್ಲದಷ್ಟು ಅನನ್ಯ... ಆಗ ತಾನೇ ಗಿಡದಿಂದ ಕಿತ್ತ ಹಸಿರು ಎಲೆ? ಇನ್ನೂ ಎಳತು. ನೀಲಿ ಹಿನ್ನೆಲೆ. ‘ಬಾಡದಿರಲಿ’ ಈ ಐದು ಅಕ್ಷರದ ಸಿಂಗಾರ ದೊಡ್ಡ ಕಾದಂಬರಿ ಇಲ್ಲವೇ ಸಾಹಿತ್ಯ ಸಂಪುಟ ಹೇಳಲಾರದ್ದನ್ನೂ ಈ ಮುಖಪುಟ ಹೇಳಿದೆ. ಸರಳ ಸುಂದರ ಎನ್ನುವುದು ಇದಕ್ಕೆ. ‘ವಿದಾಯ ಉಪವಾಸಕ್ಕಲ್ಲ’ ಎನ್ನುವ ನಿಮ್ಮ ಸಂಪಾದಕೀಯ ಮುಖಪುಟದ ಜೊತೆ ಹಾಲು ಜೇನಿನಷ್ಟು ಹೊಂದಿಕೆ ಆಗುತ್ತದೆ. ನಾವು ಬಿಡಬೇಕಾದದ್ದು ಏನನ್ನು ಎನ್ನುವ ಮೂಲಭೂತ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಓದಿ ಪತ್ರಿಕೆಯನ್ನು ಬದಿಗಿರಿಸಿದ ಬಹಳ ಕಾಲದ ಬಳಿಕವೂ ಅನ್ವರ್ ಅವರ ಕವನ, ಸತ್ಯದರ್ಶನದ ಹುಡುಕಾಟದ ಲೇಖನ... ಹೀಗೆ ಎಲ್ಲವೂ ಚೆನ್ನಾಗಿತ್ತು. ನನ್ನ ಆತ್ಮೀಯ ಕುಕ್ಕಿಲರು ಮತ್ತು ಅವರ ಬರಹಗಾರರ ಬಳಗ ಬೆಳೆಯುತ್ತಿದ್ದಾರೆ. ಸತ್ಯವನ್ನು ಯಾವ ಮುಲಾಜೂ ಇಲ್ಲದೆ ಹೇಳುತ್ತಿದ್ದಾರೆ. ನನಗೆ ಅದಕ್ಕಿಂತ ಸಂತಸದ ವಿಚಾರ ಬೇರಿಲ್ಲ. ನಾನು ಬಯಸುವುದು ಇದನ್ನೇ.

ಅಭಿನಂದನೆಗಳು ಸನ್ಮಾರ್ಗಕ್ಕೆ, ಅದನ್ನು ಅರ್ಥಪೂರ್ಣವಾಗಿ ರೂಪಿಸಿದ ನಿಮಗೆ ಮತ್ತು ನಿಮಗೆ ನೆರವಾದ ನಿಮ್ಮ ಗೆಳೆಯರಿಗೆ. ಸುಧಾದಲ್ಲಿ ಪ್ರಕಟವಾದ ನಿಮ್ಮ ಲೇಖನವನ್ನೂ ಓದಿದ್ದೇನೆ. ಭಲೇ... ಅಂದಿದ್ದೇನೆ.

ಪ್ರಾ. ಸಂಜೀವ ಬೋಳಾರ
(ಸನ್ಮಾರ್ಗದ ಅಂಕಣಗಾರರು ಮತ್ತು ನಿವೃತ್ತ ಪ್ರಾಂಶುಪಾಲರು)

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಬಿಜೆಪಿ: 1990 - 2010

ಅಯೋಧ್ಯೆ ಮತ್ತೆ ಸುದ್ದಿಯಲ್ಲಿದ್ದರೂ ಬಿಜೆಪಿ ಗಾಢ ಮೌನದಲ್ಲಿದೆ. 1991-92ರಲ್ಲಿ ದಿನಾ ಒಂದಿಲ್ಲೊಂದು ಹೇಳಿಕೆಯ ಮೂಲಕ ಪತ್ರಿಕೆಗಳ ಮುಖಪುಟದಲ್ಲಿ ಕಾಣಿಸಿಕೊಳ್ಳುತ್ತಿದ್ದ ಅದರ ನಾಯಕರ್ಯಾರೂ ಇವತ್ತು ಕೊನೆಪುಟದಲ್ಲೂ ಕಾಣಿಸಿಕೊಳ್ಳುತ್ತಿಲ್ಲ. ಅಡ್ವಾಣಿ, ಉಮಾಭಾರತಿ, ಕಲ್ಯಾಣ್ ಸಿಂಗ್, ಋತುಂಬರಾ, ಕಟಿಯಾರ್, ಮುರಳಿ ಮನೋಹರ ಜೋಶಿ... ಇವೆಲ್ಲ 20 ವರ್ಷಗಳ ಹಿಂದೆ ಕೇವಲ ಹೆಸರುಗಳಷ್ಟೇ ಆಗಿರಲಿಲ್ಲ. ರಾಮಮಂದಿರದ ಹೆಸರಲ್ಲಿ ಇವರೊಂದು ವರ್ಚಸ್ಸು, ತೂಕವನ್ನು ಗಳಿಸಿಕೊಂಡಿದ್ದರು. ಮಾಧ್ಯಮದ ಮಂದಿ ಗಂಟೆಗಟ್ಟಲೆ ಇವರ ಹೇಳಿಕೆಗಾಗಿ ಮೈಕ್ರೋಫೋನ್ ಹಿಡಿದು ಕಾಯುತ್ತಿದ್ದರು. ಜೋಶಿಯ ಬೆನ್ನಲ್ಲಿ ಹಾರಿ ಕುಳಿತು ಖುಷಿ ಹಂಚಿಕೊಂಡ ಉಮಾಭಾರತಿ ಅಂದಿನ ಬ್ರೇಕಿಂಗ್ ನ್ಯೂಸ್. 'ಇನ್ನೊಂದು ಹೊಡೆತ ಕೊಡು' (ಏಕ್ ಧಕ್ಕಾ ಔರ್ ದೋ) ಎಂದ ಋತುಂಬರ ಮಾಧ್ಯಮ ಸೆನ್ಸೇಶನ್. ಅಡ್ವಾಣಿ, ಕಲ್ಯಾಣ್ ಸಿಂಗ್‌ರಿಗೆ ಪತ್ರಿಕೆಗಳು ದೇಶದಾದ್ಯಂತ 'ಹೀರೋ' ವರ್ಚಸ್ಸು ಕೊಟ್ಟು ಮೆರವಣಿಗೆ ನಡೆಸಿದ್ದುವು. ಹೀಗಿರುತ್ತಾ ಅಂದಿನ ನಾಯಕರೆಲ್ಲಾ ಇವತ್ತು, ಅದೂ ಅತ್ಯಂತ ಅಗತ್ಯದ ಸಂದರ್ಭದಲ್ಲೇ ನಾಪತ್ತೆಯಾಗಲು ಕಾರಣವೇನು? ಮಾಧ್ಯಮದ ಮಂದಿ ಅವರನ್ನು ಬೆನ್ನಟ್ಟಿ ಕಾಡುವುದು ಬಿಡಿ, ಕನಿಷ್ಠ ಹೇಳಿಕೆಯನ್ನು ಪಡಕೊಳ್ಳುವುದಕ್ಕೂ ಮುಂದಾಗದಷ್ಟು ಅವರ ವರ್ಚಸ್ಸು ಇಳಿದು ಹೋದದ್ದೇಕೆ? ಇಷ್ಟಕ್ಕೂ ಅಂದಿನ ಚಳುವಳಿಯಲ್ಲಿ ಗುರುತಿಸಿಕೊಂಡ ಬಹುತೇಕರು ಈಗಲೂ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ಆರೋಗ್ಯಪೂರ್ಣರಾಗಿದ್ದಾರೆ. ಹಾಗಿದ್ದೂ ಅವರು ಅಪ್ರಸ್ತುತರಾದದ್ದೇಕೆ?

1991ರಲ್ಲಿ ಬಾಬರಿ ಮಸೀದಿಯಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಕಲ್ಯಾಣ್ ಸಿಂಗ್ ಮುಖ್ಯಮಂತ್ರಿಯಾಗಿದ್ದರು. ಅದಾಗಿ 19 ವರ್ಷಗಳೇ ಕಳೆದು ಹೋಗಿವೆ. ರಾಮಮಂದಿರಕ್ಕಾಗಿ ಚಳುವಳಿ ನಡೆಸಿದ, ಬಾಬರಿಯನ್ನು ಉರುಳಿಸಿದ 'ಇಮೇಜು' ಇದ್ದ ಹೊರತಾಗಿಯೂ ಆ ಬಳಿಕ ಅಲ್ಲಿ ಬಿಜೆಪಿಗೆ ಜನರು ಓಟು ಹಾಕಲಿಲ್ಲ. 'ಬಾಬರಿ ಧ್ವಂಸ'ದ ಹೀರೋ ಕಲ್ಯಾಣ್ ಸಿಂಗ್‌ರೇ ಬಿಜೆಪಿಯನ್ನು ತೊರೆದರು. 1998ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಅಡ್ವಾಣಿಯ ನೇತೃತ್ವವಿದ್ದೂ ಬಿಜೆಪಿ ತಳಮಟ್ಟವನ್ನು ಮುಟ್ಟಿತು. ವಿದೇಶಿ ಮಹಿಳೆ ಸೋನಿಯಾರ ಮುಂದೆ ಅಪ್ಪಟ ದೇಶೀ ಸೊಗಡಿನ, ಮಂದಿರ ಇಮೇಜಿನ ಅಡ್ವಾಣಿಗೆ ಅಥವಾ ಅವರ ಪಕ್ಷಕ್ಕೆ ಸತತ ಸೋಲಾಗುತ್ತಿದೆ. ಮಸೀದಿ ಧ್ವಂಸದ ಬಳಿಕ ಮಿತ್ರಪಕ್ಷಗಳು ಒಂದೊಂದಾಗಿ ಬಿಜೆಪಿಯನ್ನು ಕೈಬಿಡುತ್ತಾ ಹೋಗಿ, ಇವತ್ತು ಅದು ಬಹುತೇಕ ಒಂಟಿಯಾಗಿದೆ. ಇನ್ನೊಂದು ಚಳುವಳಿಯ ನೇತೃತ್ವವನ್ನು ವಹಿಸಿ ದೇಶದಾದ್ಯಂತ ಸಂಚರಿಸುವ ಉಮೇದನ್ನಾಗಲೀ, ಧೈರ್ಯವನ್ನಾಗಲೀ ಬಿಜೆಪಿ ತೋರಿಸುತ್ತಲೇ ಇಲ್ಲ. ಒಂದು ರೀತಿಯಲ್ಲಿ ಮಸೀದಿ ಧ್ವಂಸದ ಬಳಿಕ ಮಿತ್ರರನ್ನು ಮಾತ್ರ ಬಿಜೆಪಿ ಕಳಕೊಂಡದ್ದಲ್ಲ, ಈ ದೇಶದ ಜನರ ವಿಶ್ವಾಸವನ್ನೂ ಕಳಕೊಳ್ಳುತ್ತಾ ಹೋಯಿತು. ಈ ಆಘಾತದಿಂದ ಪಕ್ಷ ಇವತ್ತು ಯಾವ ಹಂತಕ್ಕೆ ತಲುಪಿ ಬಿಟ್ಟಿದೆಯೆಂದರೆ, ಮಸೀದಿ ಉರುಳುವಾಗ ಸಂಭ್ರಮಪಟ್ಟ, ವಿಜಯೋತ್ಸವ ಆಚರಿಸಿದ ಅದರ ಪ್ರಮುಖ ನಾಯಕರೆಲ್ಲಾ, ಸುದ್ದಿ ಮಾಡಲೇಬೇಕಾದ ಈ ಸಂದರ್ಭದಲ್ಲಿ ತಲೆ ಮರೆಸಿ ಓಡಾಡುತ್ತಿದ್ದಾರೆ.

ಬಿಜೆಪಿ ಏನೇ ಹೇಳಿಕೊಳ್ಳಲಿ, ಮಂದಿರ ಚಳವಳಿಯಿಂದ ಅದು ಅಂತಿಮವಾಗಿ ಪಡಕೊಂಡದ್ದು ದೊಡ್ಡದೊಂದು ಸೊನ್ನೆಯನ್ನು. ನಿಜವಾಗಿ ಈ ದೇಶದ ದೊಡ್ಡದೊಂದು ಯುವಸಮೂಹ 1992ರ ಬಳಿಕ ಹುಟ್ಟಿಕೊಂಡಿದೆ. ಅವು ಅಡ್ವಾಣಿಯ ರಥಯಾತ್ರೆಯನ್ನು ನೋಡಿಲ್ಲ. ಉರುಳುವ ಬಾಬರಿಯನ್ನಾಗಲಿ, ಗಲಭೆಗೆ ಕರಟಿಹೋದ ಜೀವಗಳನ್ನಾಗಲಿ ನೋಡಿಲ್ಲ. ಕಾಲೇಜಿಗೆ ಹೋಗುವಾಗಲೇ ಭವಿಷ್ಯದ ಬಗ್ಗೆ, ಉದ್ಯೋಗದ ಬಗ್ಗೆ ಚರ್ಚಿಸುತ್ತಿರುವ ಈ ಯುವ ಸಮೂಹಕ್ಕೆ ಅಯೋಧ್ಯೆಗಿಂತ ಕುಸಿಯುತ್ತಿರುವ ಅರ್ಥವ್ಯವಸ್ಥೆ, ಸೆನ್ಸೆಕ್ಸ್‌ನ ಏರುಪೇರು, ದುಬಾರಿಯಾಗುತ್ತಿರುವ ಜೀವನ ವಿಧಾನವೇ ಮುಖ್ಯವಾಗುತ್ತಿದೆ. ಇಷ್ಟಕ್ಕೂ 1992ರಲ್ಲಿದ್ದ ಕೌಟುಂಬಿಕ ಕಲ್ಪನೆ, ಜೀವನಮಟ್ಟ ಈಗಿದೆಯೇ? ಕುಟುಂಬಗಳು ಸಣ್ಣದಾಗಿವೆ. ಇರುವ ಒಬ್ಬರೋ ಇಬ್ಬರೋ ಮಕ್ಕಳನ್ನು ರಾಜಕೀಯ ಪಕ್ಷಗಳಿಗೆ 'ಬಲಿಕೊಟ್ಟು' ದೇಶಪ್ರೇಮಿಯಾಗಿ ಗುರುತಿಸಿಕೊಳ್ಳುವ ಬಯಕೆ, ಉಮೇದು ಇವತ್ತು ಯಾವ ಹೆತ್ತವರಲ್ಲೂ ಇಲ್ಲ. ಇತರೆಲ್ಲರಿಗಿಂತ ಭಿನ್ನ ಎಂಬೊಂದು ಸ್ಲೋಗನ್ನಿನೊಂದಿಗೆ ಜನರ ಬಳಿಗೆ ಧಾವಿಸಿದ ಬಿಜೆಪಿ, ಅಧಿಕಾರ ಸಿಕ್ಕ ಬಳಿಕ 'ಇತರೆಲ್ಲರಿಗಿಂತ ಕೆಟ್ಟ'ದಾಗಿ ಮಾರ್ಪಾಟುಗೊಂಡದ್ದನ್ನು 92ರ ಬಳಿಕದ ಹೆತ್ತವರು ಚೆನ್ನಾಗಿ ಅರಿತುಕೊಂಡಿದ್ದಾರೆ. ಟ್ವೀಟರು, ಫೇಸ್‌ಬುಕ್ಕು, ಬ್ಲಾಗು ಎಂದೆಲ್ಲಾ ಮಾತಾಡುವ, ದಿನದ ಹೆಚ್ಚಿನ ಸಮಯವನ್ನು ಕಂಪ್ಯೂಟರಲ್ಲಿ ಕಳೆಯುವ ಯುವ ಪಡೆಗೆ, ಭೂಮಿಯನ್ನು ಅಗೆದು ಅದು ನೂರಾರು ವರ್ಷಗಳ ಹಿಂದೆ ಏನಾಗಿತ್ತು ಎಂಬುದನ್ನು ಪತ್ತೆ ಹಚ್ಚುವುದು ಮತ್ತು ಅದನ್ನೇ ಈ ದೇಶದ ಪ್ರಮುಖ ಸಮಸ್ಯೆ ಎಂದು ಬಿಂಬಿಸುವುದು ಅರ್ಥವಾಗುತ್ತಿಲ್ಲ. ಉದ್ಯೋಗ ಹೊರಗುತ್ತಿಗೆಗೆ ಅಡ್ಡಗಾಲಿಕ್ಕುವ ಒಬಾಮಾ ಆಡಳಿತದ ಬಗ್ಗೆ ತಮ್ಮ ಬ್ಲಾಗ್‌ನಲ್ಲಿ, ಟ್ವೀಟರ್‌ನಲ್ಲಿ ಅಭಿಪ್ರಾಯ ಹಂಚಿಕೊಳ್ಳುತ್ತಿರುವ '92ರ ಬಳಿಕದ ಪೀಳಿಗೆಗೆ', ಬಿಜೆಪಿ ಎಂಬುದು ಅಪ್ರಸ್ತುತ ಅಜೆಂಡಾ ಇರುವ, ಒಂದಿಷ್ಟು ಭಾವನೆಗಳನ್ನೇ ಸಮಸ್ಯೆಯಾಗಿ ಬಿಂಬಿಸುತ್ತಿರುವ ದಾರಿ ತಪ್ಪಿದ ಪಕ್ಷವಾಗಿ ಕಾಣಿಸುತ್ತಿದೆ. ಇಷ್ಟಕ್ಕೂ ಭಾವನೆಗಳನ್ನು ಸಂಗ್ರಹಿಸಿ ತಿನ್ನುವುದಕ್ಕಾಗುತ್ತದೆಯೇ? ಮಂದಿರ ಚಳವಳಿಯಲ್ಲಿ ಭಾಗವಹಿಸಿದ ಬಿಜೆಪಿ ಮತ್ತು ಅದರ ನಾಯಕರಿಗಿಂತ ಇನ್ಫೋಸಿಸ್, ವಿಪ್ರೋ, ಬಿಲ್‌ಗೇಟ್ಸ್, ಅಂಬಾನಿ ಬಗ್ಗೆ ಈ ಪೀಳಿಗೆಗೆ ಹೆಚ್ಚು ಗೊತ್ತಿದೆ. ಇನ್ಫೋಸಿಸ್ ಕಟ್ಟಲು ನಾರಾಯಣ ಮೂರ್ತಿ ಹರಿಸಿದ ಬೆವರನ್ನು, ಕಾಲೇಜು ಹಂತದಲ್ಲಿ ಫೇಲ್ ಆದ ಹುಡುಗನೊಬ್ಬ ಬಳಿಕ ಬಿಲ್‌ಗೇಟ್ಸ್ ಆದದ್ದನ್ನು ಈ ಯುವ ಸಮೂಹ ತಮಗೆ ಮಾದರಿ ಅಂದುಕೊಳ್ಳುತ್ತದೆಯೇ ಹೊರತು, ಕಾನೂನನ್ನು ಉಲ್ಲಂಘಿಸಿ ಮಸೀದಿ ಉರುಳಿಸಿದ್ದನ್ನಲ್ಲ. ಆಧುನಿಕ ಪೀಳಿಗೆಯ ಮೇಲೆ ಅದು ಅಂಥ ಪ್ರಭಾವಿ ಅನ್ನಿಸಿಕೊಳ್ಳುವ ಸಾಧ್ಯತೆಯೂ ಇಲ್ಲ. ಆದ್ದರಿಂದಲೇ 92ರಲ್ಲಿ ಬಿಜೆಪಿ ಯಾವ ಧಾಟಿಯಲ್ಲಿ ಮಾತಾಡುತ್ತಿತ್ತೋ ಬರಬರುತ್ತಾ ಅದರ ಭಾಷೆ, ವಾದಗಳು ಬದಲಾಗುತ್ತಲೋ ತಣ್ಣಗಾಗುತ್ತಲೋ ಬಂತು. ನಾಯಕರು ಮಸೀದಿ ಉರುಳಿಸಿದವರೇ ಆಗಿದ್ದರೂ ಈ ದೇಶದ ಯುವ ಪೀಳಿಗೆಯನ್ನು ಎದುರಿಸುವಲ್ಲಿ ಅವರು ನಿಧಾನವಾಗಿ ವೈಫಲ್ಯವನ್ನು ಕಾಣತೊಡಗಿದರು. ಉರುಳಿಸುವಾಗ ಇದ್ದ ಅದೇ ಉತ್ಸಾಹ, ಬಳಿಕ ಕಾಣೆಯಾಗತೊಡಗಿತು. ಬಿಜೆಪಿಯ ಕೈಯಲ್ಲಿ ತಾವು ಮೋಸ ಹೋದೆವು ಎಂಬೊಂದು ಭಾವನೆ ಚಳವಳಿಯನ್ನು ಮುಗ್ಧವಾಗಿ ಬೆಂಬಲಿಸಿದ ಮಂದಿಯಲ್ಲಿ ಗಟ್ಟಿಯಾಗತೊಡಗಿತು. ಸದ್ಯ ಬಿಜೆಪಿಯಲ್ಲಿ ಹತಾಶೆ, ಕೀಳರಿಮೆ ಮತ್ತು ವಂಚಿಸಿದ ಭಾವನೆ ದಟ್ಟವಾಗಿ ಕಾಣಿಸುತ್ತಿದೆ. ನಿಜವಾಗಿ ಇದು ಧರ್ಮವನ್ನು ದುರುಪಯೋಗಿಸಿದುದಕ್ಕಾಗಿ ಬಿಜೆಪಿಗೆ ಸಿಕ್ಕ ಶಿಕ್ಷೆಯೆಂದೇ ಹೇಳಬೇಕು.

ಏನೇ ಆಗಲಿ, 20 ವರ್ಷಗಳ ಹಿಂದೆ ಬಾಬರಿಯನ್ನು ಸುದ್ದಿಗೆ ತಂದ ಬಿಜೆಪಿ ಸದ್ಯ ಮಲಗಿದೆ. ದೇಶ ಎಚ್ಚೆತ್ತುಕೊಂಡಿದೆ. ಈ ಎಚ್ಚರ ಸದಾ ಇರಲಿ.

## ವಿ ಚಾ ರ ಮ ಣಿ

ನಿಮಗೆ ಕೆಲವು ನಿದರ್ಶನಗಳನ್ನು ತೋರಿಸಿ ಕೊಡಲಿಕ್ಕಾಗಿ ನಾವೆಯು ಸಮುದ್ರದಲ್ಲಿ ಅಲ್ಲಾಹನ ಅನುಗ್ರಹದಿಂದ ಚಲಿಸುತ್ತಿರುವುದನ್ನು ನೀವು ನೋಡುವುದಿಲ್ಲವೇ? ವಾಸ್ತವದಲ್ಲಿ ಸಹನಶೀಲನೂ ಕೃತಜ್ಞನೂ ಆಗಿರುವ ಪ್ರತಿಯೊಬ್ಬನಿಗೂ ಇದರಲ್ಲಿ ಅನೇಕ ದೃಷ್ಟಾಂತಗಳಿವೆ. (ಸಮುದ್ರದಲ್ಲಿ) ಒಂದು ಅಲೆಯು ಇವರ ಮೇಲೆ ಚಪ್ಪರದಂತೆ ಆವರಿಸಿದಾಗ ಇವರು ತಮ್ಮ ಧರ್ಮವನ್ನು ಸಂಪೂರ್ಣವಾಗಿ ಅಲ್ಲಾಹನಿಗೇ ಮೀಸಲಾಗಿಸಿ ಅವನನ್ನು ಪ್ರಾರ್ಥಿಸುತ್ತಾರೆ. ತರುವಾಯ ಅವನು ಇವರನ್ನು ರಕ್ಷಿಸಿ ದಡದ ವರೆಗೆ ತಲಪಿಸಿದಾಗ ಅವರಲ್ಲೊಬ್ಬನು ಸುಮಧ್ಯ ನೀತಿಯನ್ನನುಸರಿಸುತ್ತಾನೆ ಮತ್ತು ನಮ್ಮ ದೃಷ್ಟಾಂತಗಳನ್ನು ನಿಷೇಧಿಸುವುದಿಲ್ಲ. ಆದರೆ ವಿದ್ರೋಹಿ ಮತ್ತು ಕೃತಘ್ನರು ಇದಕ್ಕೆ ಹೊರತಾಗಿದ್ದಾರೆ.

(ಪವಿತ್ರ ಕುರ್‌ಆನ್: 31: 31-32)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಈದ್ ವಿಶೇಷಾಂಕ

ಈದ್ ವಿಶೇಷಾಂಕದ ಮುಖಪುಟದಲ್ಲಿ ಆಗ ತಾನೇ ಮರದಿಂದ ಬೇರ್ಪಡಿಸಿದ ಜೀವಂತ ಹಚ್ಚ ಹಸಿರು ಎಲೆಯನ್ನು ನಮೂದಿಸಿ ತಾವು ವಿಶಾಲವಾದ, ಗಮನಾರ್ಹವಾದ ಮತ್ತು ಉತ್ತಮವಾದ ಒಂದು ಸಂದೇಶವನ್ನು ನೀಡಿದ್ದೀರಿ. ಈಗ ತಾನೇ ಕಳೆದು ಹೋದ ರಮಝಾನಿನಲ್ಲಿ ದಾಸನು ಸಂಪಾದಿಸಿದ ಅಲ್ಲಾಹನ ಸಂಪ್ರೀತಿಯನ್ನು ಮುಂದಿನ 11 ತಿಂಗಳು ಯಾವ ರೀತಿ ಉಳಿಸಿ ಬೆಳೆಸಬೇಕು ಎಂಬ ಸಂಕೇತವನ್ನು ಆ ಎಲೆಯ ಮೂಲಕ 'ಸನ್ಮಾರ್ಗ' ನಮ್ಮನ್ನು ಜಾಗೃತಗೊಳಿಸಿದೆ. 'ಬಾಡದಿರಲಿ' ಎಂಬ ನಿಮ್ಮ ಮನದಾಳದ ಬೋಧನೆ ನಮ್ಮೆಲ್ಲರ ಪಾಲಿಗೆ ಎಚ್ಚರಿಕೆಯ ಸೋಪಾನವಾಗಲಿ ಎಂದು ಪ್ರಾರ್ಥಿಸುವೆ.

**ಉಮ್ಮರ್ ಉಸ್ತಾದ್ ತೋನ್ಸೆ**

ಅಲ್ಪಕಾಲೀನ ಅತಿಥಿಯಾಗಿ ಬಂದು ಸತ್ಯ ವಿಶ್ವಾಸಿಗಳ ಕಲ್ಯಾಣಕ್ಕೆ ಉತ್ತಮ ಬುನಾದಿ ಹಾಕಿ ಕೊಟ್ಟ ಪವಿತ್ರ ರಮಝಾನ್ ಮಾಸಕ್ಕೆ 'ಅಲ್ವಿದಾ' ಹೇಳುವ ಮುಖ್ಯ ಘಟ್ಟವಾದ 'ಈದ್-ಉಲ್-ಫಿತ್ರ್' ಬಗೆಗಿನ ಮಹತ್ವವನ್ನು ಈದ್ ವಿಶೇಷಾಂಕದ ಸಂಪಾದಕೀಯವು ಚೆನ್ನಾಗಿ ಬಿಂಬಿಸಿದೆ. ಮುಖ್ಯವಾಗಿ ಮುಂದಿನ ರಮಝಾನ್ ವರೆಗೆ ನಾವು ಸತ್ಯ ವಿಶ್ವಾಸಿಗಳ ಅಸಲಿ ರೂಪವನ್ನು ಕಾಯ್ದುಕೊಂಡು ಹೋಗಬೇಕಾಗಿದೆ.

'ಇಂದು ಜೀವನ-ನಾಳೆ ಮರಣ' ಎಂಬ ಪದ್ಯವು ಸಮಯೋಚಿತವಾಗಿದೆ. ಅಲ್ಲದೇ 'ಹಬ್ಬದ ಸಂವಾದ' ಎಂಬ ಕವನವು ಉತ್ತಮವಾಗಿದೆ. ಬಾಲಪಂಕ್ತಿಯಲ್ಲಿ ಪ್ರಕಟವಾದ ಮನಃಪರಿವರ್ತನೆ ಕಥೆಯು ಬಹಳ ಚೆನ್ನಾಗಿತ್ತು.

**ಮುಹಮ್ಮದ್ ಸಾದಿಕ್ ಬಿ.ಇ. ಬ್ಯಾಡಗಿ**

### ಸಂಪಾದಕೀಯ

'ರಮಝಾನ್ ವಿಶೇಷಾಂಕ'ದ ಸಂಪಾದಕೀಯವು ಬದುಕಿನ ಸತ್ಯವನ್ನು ತಿಳಿಸುವುದರೊಂದಿಗೆ ಉಪವಾಸಿಗರನ್ನು ಸಂಸ್ಕರಿಸಿ ಸತ್ತಂತಿಹರನು ಬಡಿದೆಚ್ಚರಿಸಿದೆ.

ಪ್ರತಿಯೊಂದು ಲೇಖನವೂ ಉತ್ತಮವಾಗಿದ್ದು ಓದುಗರ ಜ್ಞಾನ ಭಂಡಾರವನ್ನು ದ್ವಿಗುಣಗೊಳಿಸಿ ಪುಣ್ಯ ಸಂಪಾದಿಸಲು ಪ್ರೇರೇಪಿಸಿದೆ. ಮಹಿಳಾ ವೇದಿಕೆಯ ಲೇಖನ 'ಬುರ್ಖಾ ಧರಿಸಿದ ಮಾತ್ರಕ್ಕೇ...?' ವ್ಯಾಪಕ ಚರ್ಚೆಗೊಳಗಾಗಿರುವ ಬುರ್ಖಾದ ಮಹತ್ವವನ್ನು ಮತ್ತು ಯುವ ಸಮುದಾಯದ ದೃಷ್ಟಿಕೋನವನ್ನು ಪರಿಚಯಿಸಿ ನಮ್ಮೆಲ್ಲರ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಸಿತು. ಪವಿತ್ರ ಪುಣ್ಯಗಳ ಮಾಸದಲ್ಲಿ ಪುನೀತರಾಗುವಂತೆ ಮಾಡಿದ 'ಸನ್ಮಾರ್ಗ' ಬಳಗಕ್ಕೆ ಅಲ್ಲಾಹನು ಸಕಲ ಪುಣ್ಯಗಳನ್ನು ದಯಪಾಲಿಸಲಿ.

**ಎಂ. ಹಿಫ್‌ಝುರ್ರಹ್ಮಾನ್ ಸೂರಿ ಬಾದಾಮಿ**

### ಸಂಬಳ ಹೆಚ್ಚಳ

ಸಂಚಿಕೆ 25ರಲ್ಲಿ ಪ್ರಕಟವಾದ ಬಿ.ಎ. ಸಲೀಮ್‌ರವರ "ಸಂಬಳ ಹೆಚ್ಚಳಕ್ಕೆ ಅರ್ಹತೆ ಬೇಡವೇ" ಲೇಖನ ಅರ್ಥಗರ್ಭಿತವಾಗಿತ್ತು. ಯಾರಿಗೆ ಸಾಲುತ್ತೆ ಸಂಬಳ ಎಂದು ತಮ್ಮ ಸಂಬಳವನ್ನು ತಾವೇ ಏರಿಸಿಕೊಂಡರು ನಮ್ಮ ಸಂಸದರು.

ಸಂಸದರಲ್ಲಿ ಕೆಲವರು ಹಲವು ಕೋಟಿಗಳು, ಇನ್ನೂ ಕೆಲವರು ಹತ್ತಾರು ಕೋಟಿಗಳು, ಸಾವಿರಾರು ಕೋಟಿಗಳ ಕುಬೇರರೇ ಹೆಚ್ಚು. ಇವರು ಸಂಬಳ ಹೆಚ್ಚು ತೆಗೆದುಕೊಂಡ ಮೇಲೆ ಸರಿಯಾಗಿ ಸದನಗಳ ಒಳಗೆ ಹಾಗೂ ಹೊರಗೆ ಕೆಲಸ ನಿರ್ವಹಿಸುತ್ತಾರಾ? ಮೊನ್ನೆ ನಡೆದ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಎಷ್ಟು ಮಂದಿ ಸಂಸದರು ಹಾಜರಿದ್ದರು? 100% ಹಾಜರಿ ಹೊಂದಿರುವ ಸದಸ್ಯರು ಕೇವಲ 61 ಮಂದಿ. ಇದು 542 ಮಂದಿಯಿರುವ ಲೋಕಸಭೆಯಲ್ಲಿ. ರಾಜ್ಯ ಸಭೆಯ 253 ಸದಸ್ಯರಲ್ಲಿ 29 ಮಂದಿ ಮಾತ್ರ 100% ಹಾಜರಿದ್ದರು. ಈ ಅಧಿವೇಶನ ನಡೆದದ್ದು 26 ದಿನಗಳ ಕಾಲ. ಬೆಲೆ ಏರಿಕೆ ಕುರಿತು ಯಾವ ನಿಯಮಾವಳಿ ಅಡಿ ಚರ್ಚಿಸಬೇಕು ಎಂಬ ಆಡಳಿತ- ಪ್ರತಿಪಕ್ಷಗಳ ಹಗ್ಗ ಜಗ್ಗಾಟದಲ್ಲಿ ನಾಲ್ಕೈದು ದಿನಗಳೇ ಸರಿದು ಹೋದವು. ಸದನದಲ್ಲಿ ನಿದ್ರೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಂಸದರಿಗೆ ಸಂಸತ್ತು ಒಂದು ರೀತಿಯ ವಿಶ್ರಾಂತಿ ಧಾಮವಾಗಿದೆ. ಇವರು ನಮ್ಮ ನಾಯಕರು!

**ಮುಹಮ್ಮದ್ ಇಲ್ಯಾಸ್ ಜೋಗ್‌ಫಾಲ್ಸ್**

### ಹಾಗೆ ಮಾಡಬೇಡಿ

ರಾಮದುರ್ಗ ಗ್ರಂಥಾಲಯದಲ್ಲಿ ಸನ್ಮಾರ್ಗ ಪತ್ರಿಕೆ ಓದಿ ಸಂತೋಷವಾಯಿತು. ಆಗ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಮುಸ್ಲಿಮ್ ಸಹೋದರರರಿಗೆ ಈ ವಿಷಯ ಹೇಗೆ ಹೇಳಬೇಕು, ಅವರನ್ನು ಹೇಗೆ ಈ ವಿಚಾರವಾಗಿ ಚಿಂತಿಸಲು ತೊಡಗಿಸಬೇಕು ಎಂಬುದಕ್ಕೆ ಸನ್ಮಾರ್ಗ ಪತ್ರಿಕೆ ಓದಿ ವಿಚಾರ ಹೊಳೆಯಿತು. ಪತ್ರ ಮೂಲಕ ಮುಸ್ಲಿಮ್ ಬಂಧುಗಳಿಗೆ ಮನದಟ್ಟು ಆಗುವಂತೆ ತಿಳಿಸುವ ಅಂತ ಈ ವಿಚಾರ ಇಡುತ್ತಿದ್ದೇನೆ. ತಾವು ತಪ್ಪು ಗ್ರಹಿಕೆ ಮಾಡದೇ ಈ ವಿಚಾರದ ಬಗ್ಗೆ ಬರೆಯಿರಿ.

ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರಿಗಳನ್ನು ಮುಸ್ಲಿಮ್ ಬಂಧುಗಳು ಉಪಯೋಗ ಮಾಡಿ ಕೊನೆಗೆ ಕಲ್ಲು, ಮಣ್ಣು, ಹೆಂಟೆ ಇನ್ನು ಯಾವುದೋ ವಸ್ತುವಿನಿಂದ ಸ್ವಚ್ಛ ಮಾಡಿದ ಬಳಿಕ ಆ ಮೂತ್ರ ಹೋಗುವ ಜಾಗದಲ್ಲಿ ಅದನ್ನು ಎಸೆದು ಬಿಡುತ್ತಾರೆ. ಆದ್ದರಿಂದ ಮುಸ್ಲಿಮ್ ಜನಾಂಗ ಇದಕ್ಕೆ ಬೇರೆ ಯಾವುದಾದರೂ ಉಪಾಯ ಮಾಡಿ ಅಂತಹ ಸ್ಥಳಗಳನ್ನು ಸ್ವಚ್ಛವಾಗಿ ಇಡಲು ಸಹಕರಿಸಬೇಕು. ಅಲ್ಲದೆ ಸಾರ್ವಜನಿಕ ಸ್ಥಳ ಅಂದರೆ ದೇವರು ವಾಸವಾಗುವ ಸ್ಥಳವೆಂದು ತಿಳಿದು ಸಮಾಜಕ್ಕೆ ಸಹಕಾರಿಯಾಗುವಂತೆ ವರ್ತಿಸಬೇಕು. ಮುಸ್ಲಿಮ್ ಬಂಧುಗಳು ತಮ್ಮನ್ನು ಬದಲಿಸಿಕೊಳ್ಳುವರೆಂದು ನಂಬುತ್ತೇನೆ.

**ಶಿವರುದ್ರಪ್ಪ ಕರವಿನಕೊಪ್ಪ ಹುಬ್ಬಳ್ಳಿ**
**ಮಾಜಿ ಸೈನಿಕರು**

# ‘ನನ್ನ ರಾಮನನ್ನು ಸಣ್ಣ ಪಟ್ಟಣಕ್ಕೇಕೆ ಸೀಮಿತಗೊಳಿಸುತ್ತೀರಿ?’

(ಮುಖಪುಟದಿಂದ)

ಹೇಳಿಕೆ(telling)ಗಳೆಂದು ರಾಮಾನುಜಮ್ ಸ್ಪಷ್ಟಪಡಿಸಿದ್ದಾರೆ.

ಈ ವೈವಿಧ್ಯತೆಯ ಸಂಕ್ಷಿಪ್ತ ರೂಪವನ್ನು ಕಾಮಿಲ್ ಬುಕೆ ಬರೆದಿರುವ ‘ರಾಮಕಥೆ: ಹುಟ್ಟು ಮತ್ತು ಬೆಳವಣಿಗೆ’ ಎಂಬ ಕೃತಿಯಲ್ಲಿ ಮತ್ತು ಪೌಲ್ ರಿಚ್ ಮೆನ್ ಸಂಪಾದಿಸಿದ ‘ಅನೇಕ ರಾಮಾಯಣಗಳು’ (Many Ramayana’s) ಎಂಬ ಗ್ರಂಥದಲ್ಲಿಯೂ ನೋಡಬಹುದು. ಶ್ರೀರಾಮದಾಸ ಗೌಡರ್ ತಮ್ಮ ‘ಹಿಂದುತ್ವ’ವೆಂಬ ಕೃತಿಯಲ್ಲಿ ಬಹಳ ಪೌರಾಣಿಕವಾದ ಮತ್ತು ಮಹರ್ಷಿಗಳು ರಚಿಸಿದ ಅಂಥ 19 ರಾಮಾಯಣಗಳ ಕುರಿತು ವಿವರವಾಗಿ ಪ್ರತಿಪಾದಿಸಿದ್ದಾರೆ. ಅವು ಇಂತಿವೆ: ಮಹಾರಾಮಾಯಣ, ಸಂವೃತ ರಾಮಾಯಣ, ಲೋಮೇಶ ರಾಮಾಯಣ, ಅಗಸ್ತ್ಯ ರಾಮಾಯಣ, ಮಂಜುಳ ರಾಮಾಯಣ, ಸೌಪದ್ಮ ರಾಮಾಯಣ ಮಹಾಮಾಲ, ಸೌಹಾರ್ದ ರಾಮಾಯಣ, ರಾಮಾಯಣ ಮಣಿರತ್ನ, ಸೌರ್ಯ ರಾಮಾಯಣ, ಚಂದ್ರ ರಾಮಾಯಣ, ಮೈಂದ ರಾಮಾಯಣ, ಸ್ವಯಂಭು ರಾಮಾಯಣ, ಸುಬ್ರಹ್ಮ ರಾಮಾಯಣ, ಸುವರ್ಚ ರಾಮಾಯಣ, ವೇದ ರಾಮಾಯಣ, ಸುವರ್ಣ ರಾಮಾಯಣ, ದುರಂತ ರಾಮಾಯಣ ಮತ್ತು ಚಂಪ ರಾಮಾಯಣ.

ಬೌದ್ಧರಲ್ಲಿ ಪ್ರಚಾರದಲ್ಲಿರುವ ‘ಬೌದ್ಧ ದಶರಥ ಜಾತಕ’ ಮತ್ತು ‘ಅನಾಮಕ ಜಾತಕ’ ಇತ್ಯಾದಿ ಬಹಳ ಪ್ರಸಿದ್ಧವಾಗಿವೆ. ದಶರಥ ಜಾತಕದಲ್ಲಿರುವ ರಾಮ ಕಥಾ ರೂಪವೇ ರಾಮಾಯಣ ಕಥೆಯ ಮೂಲ ರೂಪವೆಂದು ಸಂಶೋಧಕ ಡಾ। ವೆಬರ್‌ರಿಂದ ಹಿಡಿದು ದಿನೇಶ್ ಚಂದ್ರಸೇನ್‌ರಂಥ ವಿದ್ವಾಂಸರೂ ಅಭಿಪ್ರಾಯ ಪಟ್ಟಿದ್ದಾರೆ. ವಿಮಲಾ ಸೂರಿ ರಚಿಸಿದ ಪವುಮ ಚರಿಯಂ (ಪದ್ಮ ಚರಿತಂ) ಎಂಬುದು ಜೈನ ಧರ್ಮಿಯರ ರಾಮಾಯಣ ಗ್ರಂಥವಾಗಿದೆ. ಅರ್ಥಾತ್, ವಾಲ್ಮೀಕಿ, ತುಳಸಿದಾಸ್ ಅಥವಾ ಕಂಬರರಿಂದ ರಚಿತವಾದದ್ದು ಮಾತ್ರ ರಾಮಾಯಣವಲ್ಲ. ಅದು ಸಹಸ್ರಾರು ಪಾಠಾಂತರಗಳ ಸಮುಚ್ಛಯವಾಗಿದೆ. ಹಿಂದುಗಳಲ್ಲಿರುವ ಅನೇಕ ವೈರುಧ್ಯಮಯ ವಿಶ್ವಾಸ ಮತ್ತು ಕಲ್ಪನೆಗಳಂತೆಯೇ ಅದರಲ್ಲಿ ಅಹಿಂದವೂ ಸೇರಿದೆ. ಸ್ವಾರಸ್ಯವೆಂದರೆ ರಾಮಾಯಣದ ಯಾವ ಅಂಶವೂ ಖಚಿತವಲ್ಲ. ಎಲ್ಲ ವಿಷಯಗಳಿಗೂ ಅನೇಕ ಪಾಠಬೇಧಗಳಿವೆ. ವಾಲ್ಮೀಕಿ ರಾಮಾಯಣದಂತೆ ರಾಮನು ಅಯೋಧ್ಯೆಯ ರಾಜ. ಆದರೆ ಇತರ ರಾಮಾಯಣಗಳು ಅದನ್ನು ಒಪ್ಪುವುದಿಲ್ಲ. ರಾಮಾಯಣವು ಭಾರತದಲ್ಲಿ ಸಂಭವಿಸಿದ ಕಥೆಯೆಂಬುದನ್ನು ವಿದೇಶಿ ರಾಮಾಯಣಗಳು ನಿರಾಕರಿಸುತ್ತಿವೆ. ಅಯೋಧ್ಯೆಯ ಇಂದಿನ ಸ್ಥಳದಲ್ಲಿ ರಾಮನು ‘ನಿಖರ’ವಾಗಿ ಜನಿಸಿರುವನೆಂದು ಹೇಳುವವರು, ವಾಲ್ಮೀಕಿ ರಾಮಾಯಣದಂತೆ ಯಾವಾಗ ಜನಿಸಿದ್ದೆಂದು ಹೇಳುವುದಿಲ್ಲ. ಐತಿಹಾಸಿಕವಾಗಿ ಕ್ರಿ.ಪೂ.7ನೇ ಶತಮಾನದ ಬಳಿಕ ವಾಲ್ಮೀಕಿ ರಾಮಾಯಣವನ್ನು ರಚಿಸಲಾಗಿದೆಯೆಂದು ಅನೇಕ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಹಾಗಿದ್ದರೂ ನಂಬಿಕೆಯಂತೆ (ವಾಲ್ಮೀಕಿ ರಾಮಾಯಣದ ‘ಯುಗ ಲೆಕ್ಕಾಚಾರದಂತೆ) ರಾಮಾಯಣವು 1,81,49,115 ವರ್ಷಗಳ ಹಿಂದೆ ವಿರಚಿತ ಕೃತಿ! (ಡಾ। ಕೆ.ಆರ್. ರಾಮನ್ ನಂಬೂದರಿ ರಚಿಸಿದ ‘ವೇದ ಹೃದಯ’ವೆಂಬ ಕೃತಿಯಿಂದ) ಅಂದು ಭೂಮಿಯಲ್ಲಿ ಮಾನವರಿದ್ದರೇ ಎಂದು ಕೇಳಬಾರದು. ‘ಅದು ನಂಬಿಕೆಯ ಪ್ರಶ್ನೆ!’

ಉತ್ತರ ಪ್ರದೇಶದ ಅಯೋಧ್ಯೆಯಲ್ಲಿಯೇ ರಾಮನು ಜನಿಸಿದ್ದೆಂದು ನ್ಯಾಯಾಲಯ ತೀರ್ಪು ನೀಡಿದರೂ ಅದು ವಿವಿಧ ನಂಬಿಕೆಗಳ ಮೇಲೆ ಹಸ್ತಕ್ಷೇಪಿಸಿದಂತಾದೀತು. ಯಾಕೆಂದರೆ ರಾಮನ ಜನ್ಮಸ್ಥಾನವು ಫೈಝಾಬಾದ್‌ನ ಅಯೋಧ್ಯೆಯಲ್ಲ ಮತ್ತು ಅದು ಆತನ ರಾಜಧಾನಿಯಾಗಿರಲಿಲ್ಲವೆಂದು ನಂಬುವ ಅನೇಕ ರಾಮಾಯಣಗಳು ಭಾರತದಲ್ಲಿಯೇ ಲಭ್ಯವಿವೆ. ಬೌದ್ಧ ಧರ್ಮಿಯರ ‘ಬೌದ್ಧ ದಶರಥ ಜಾತಕ’ದಂತೆ ರಾಮನು ಅಯೋಧ್ಯೆಯ ರಾಜನಾಗಿರದೆ ವಾರಣಾಸಿಯ ರಾಜನಾಗಿದ್ದನು. ವಾರಣಾಸಿಯೇ ರಾಮನ ರಾಜಧಾನಿ. ಇದೇ ರಾಮಾಯಣದಂತೆ ಸೀತೆ ರಾಮನ ಸಹೋದರಿ. ಸಹೋದರಿಯನ್ನು ರಾಮನು ವಿವಾಹವಾದನು.



ಹಳೆಯ ತುರ್ಕಿಸ್ತಾನದ ಪೂರ್ವಭಾಗದ ಪ್ರದೇಶಗಳು ಸೇರಿರುವ ಖೊತಾನ್ ದೇಶದಲ್ಲಿ ಪ್ರಚಾರದಲ್ಲಿರುವ ರಾಮಾಯಣದಂತೆ ರಾಮಾಯಣ ಕಥೆಗಳು ಖೊತಾನ್ ಮತ್ತು ಟಿಬೇಟ್‌ಗಳಲ್ಲಿ ಸಂಭವಿಸಿವೆ. ಖೊತಾನ್‌ನಲ್ಲಿ ಬಹುಪತಿತ್ವ ರೂಢಿಯಲ್ಲಿತ್ತು.

ಥ್ಯಾಲೆಂಡ್‌ನ ‘ರಾಮ ಕಿಯೇನ’ (ರಾಮ ಕೀರ್ತಿ) ಎಂಬ ರಾಮಾಯಣದಂತೆ ಆ ಕಥೆಯು ಥ್ಯಾಲೆಂಡ್‌ನಲ್ಲಿ ನಡೆದಿದೆ. ರಾಮ ಮತ್ತು ಸೀತೆ ಎಲ್ಲರೂ ಆ ದೇಶದವರು.

ರಾಮ ಮತ್ತು ರಾವಣ ಪಿತೃ ಸಹೋದರ ಪುತ್ರರು. ಥ್ಯಾಲೆಂಡ್‌ನ ಈಗಿನ ರಾಜ ವಂಶವಾಗಿರುವ ಚಾಕ್ರಿ ವಂಶದ ಸ್ಥಾಪಕ ಪ್ರಾಬುದ್ಧ ಶೋಡ್‌ಫಾ ಚೂಲಾಲೋಕ ಮಹಾರಾಜನು ಅಧಿಕೃತವಾಗಿ ‘ರಾಮ ಪ್ರಥಮ’ ಎಂಬ ಹೆಸರನ್ನು ಅಂಗೀಕರಿಸಿದ್ದನು. ಚಾಕ್ರಿ ವಂಶದ ತನಕ ಸುಮಾರು 417 ವರ್ಷಗಳ ಕಾಲ ‘ಅಯುಧ್ಯ’ (ಅಯೋಧ್ಯ) ಥ್ಯಾಲೆಂಡ್‌ನ ರಾಜಧಾನಿಯಾಗಿತ್ತು. (ಎಂ.ಪಿ. ವೀರೇಂದ್ರ ಕುಮಾರ್, ರಾಮನ ದುಃಖ’ ಪುಟ: 85,86). ಕಿಷ್ಕಿಂದ, ಲವಪುರಿ, ಅಯೋಧ್ಯ ಮುಂತಾದ ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಸ್ಥಳನಾಮಗಳು ಥ್ಯಾಲೆಂಡ್‌ನಲ್ಲಿವೆಯೆಂದು ಏ.ಕೆ. ರಾಮಾನುಜಮ್ ‘3000 ರಾಮಾಯಣ’ದಲ್ಲಿ ಹೇಳಿದ್ದಾರೆ.

ಇಂಡೋಚೀನಾದಲ್ಲಿ ಪ್ರಚಾರದಲ್ಲಿರುವ ಜಾನಪದ ರಾಮಾಯಣದಂತೆ, ರಾಮನು ಅಲ್ಲಿನ ವಿಂಟೇಯಿನ್ ಎಂಬ ದೇಶದ ಶೂರ ರಾಜನಾಗಿದ್ದನು. ರಾವಣನನ್ನು ಕೊಂದ ಬಳಿಕ ರಾಮನು ಥ್ಯಾಲೆಂಡ್ ದಾರಿಯಾಗಿ ವಿಂಟೇಯಿನ್‌ಗೆ ಬಂದನೆಂದು ಆ ವಿವರಣೆಯಲ್ಲಿದೆ. ಫಿಲಿಪೈನ್ಸ್‌ನ ಕಥೆಯಂತೆ ‘ತಾಂಜೋಮ್ ಬಂಕ್ ಎಂಬ ಪ್ರದೇಶವೇ ಅಲ್ಲಿನ ಅಯೋಧ್ಯೆ ಮತ್ತು ಕಚ್ಚಾಪುರಿಯು ಲಂಕಾವೆಂದು ನಂಬಲಾಗುತ್ತಿದೆ. (‘ರಾಮಾಯಣಗಳ ಅಧ್ಯಯನ’ ಎನ್.ವಿ. ಉಣ್ಣಿತ್ತಿರಿ.)

ಪ್ರಾಚ್ಯ ವಸ್ತು ಸಂಶೋಧಕ ಮತ್ತು ಇತಿಹಾಸಗಾರ ಸಂಕಾಲ್ಯರು, ಇಂದಿನ ಲಂಕಾ ಮತ್ತು ವಾಲ್ಮೀಕಿಯ ಲಂಕಾಗಳಿಗೆ ಯಾವುದೇ ಸಂಬಂಧವಿಲ್ಲ, ವಾಲ್ಮೀಕಿಗೆ ವಿಂಧ್ಯಾ ಪರ್ವತದ ಆಚೆಗಿನ ದಕ್ಷಿಣ ಭಾರತದ ಬಗ್ಗೆ ಏನೂ ತಿಳಿದಿರಲಿಲ್ಲವೆಂದು ಪುರಾವೆ ಸಮೇತ ಸಮರ್ಥಿಸಿದ್ದಾರೆ (‘ರಾಮಾಯಣ ಅಧ್ಯಯನಗಳು’ ಎಂಬ ಕೃತಿಯಲ್ಲಿ). ಅದೇ ವೇಳೆ ಇಂದಿನ ಶ್ರೀಲಂಕ ಕೂಡ ಇತರ ದೇಶಗಳಂತೆಯೇ ರಾಮಾಯಣದ ಸಾಹಿತ್ಯಗಳಿಂದ ಸಂಪನ್ನವಾಗಿದೆ. ಅಲ್ಲಿನ ರಾಮ ಕಥೆಯಂತೆ ರಾವಣನು ಸೀತೆಯನ್ನು ಶ್ರೀಲಂಕಾದ ‘ಸೀತಾವಕ’ ಎಂಬಲ್ಲಿಗೆ (ಭಾರತದಲ್ಲಲ್ಲ) ಅಪಹರಿಸಿದ್ದನು. ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಸ್ಥಳಗಳು ಶ್ರೀಲಂಕಾದಲ್ಲಿವೆ.

ರಾಮಾಯಣ ಕಥೆಗಳು ಭಾರತದ ಬಳಿಕ ಮುಸ್ಲಿಮ್ ರಾಷ್ಟ್ರವಾಗಿರುವ ಇಂಡೋನೇಶ್ಯದಲ್ಲಿ ಅತ್ಯಧಿಕ ಪ್ರಚಾರದಲ್ಲಿವೆ. ಅಲ್ಲಿನ ರಾಮಾಯಣಗಳಲ್ಲಿ ‘ಹಿಕಾಯತ್ ಸೆರಿರಾಮ’ (ಶ್ರೀರಾಮ ಕಥೆ) ಎಂಬ ಕೃತಿಯು ಬಹಳ ಪ್ರಸಿದ್ಧವಾಗಿದೆ. ಪ್ರಸ್ತುತ ಕೃತಿಯಂತೆ ರಾಮಾಯಣ ಕಥೆಯು ಇಂಡೋನೇಶ್ಯದಲ್ಲಿ ನಡೆದಿದೆ. ರಾಮನು ಭಾರತದಲ್ಲಿ ಹುಟ್ಟಿ ಬೆಳೆದನೆಂಬ ವಾದವನ್ನು ಇಂಡೋನೇಶ್ಯದ ರಾಮಕಥಾ ಸಾಹಿತ್ಯವು ಸಂಪೂರ್ಣವಾಗಿ ತಿರಸ್ಕರಿಸುತ್ತದೆ.

ಮುಸ್ಲಿಮ್ ಬಹುಸಂಖ್ಯಾತ ರಾಷ್ಟ್ರವಾಗಿರುವ ಮಲೇಶ್ಯದ ರಾಮಾಯಣಕ್ಕೆ ಭಾರತೀಯ ರಾಮಾಯಣದೊಂದಿಗೆ ಸಾಮ್ಯತೆಯಿದ್ದರೂ ಅದರಲ್ಲಿ ಮಲೇಶ್ಯದ ಮಣ್ಣಿನ ವಾಸನೆಯಿದೆ. ಅಲ್ಲಿನ ಕಥೆಗಳು, ಭಾರತವು ರಾಮಾಯಣದ ಭೂಮಿಕೆಯೆಂದು ಒಪ್ಪುವುದಿಲ್ಲ. ರಾಮಾಯಣವು ಅವರಿಗೆ ಪಂಚತಂತ್ರದಂತೆ ಕೇವಲ ಕಥೆಗಳಾಗಿವೆ.

ಹೌದು, ಪ್ರತಿಯೊಂದು ರಾಷ್ಟ್ರ ಮತ್ತು ಜನತೆಯು ರಾಮಾಯಣವನ್ನು ವಿಭಿನ್ನ ರೂಪ ಮತ್ತು ಅರ್ಥಗಳಲ್ಲಿ ಸ್ವೀಕರಿಸಿದ್ದಾರೆ. ಅದು ಏಶ್ಯನ್ ರಾಷ್ಟ್ರಗಳಲ್ಲಿ ಉದ್ದಕ್ಕೂ ವ್ಯಾಪಿಸಿರುವ ಮಹಾ ಸಂಸ್ಕೃತಿಯಾಗಿದೆ. ಅದನ್ನು ನಿರ್ದಿಷ್ಟ ಸ್ಥಳದಲ್ಲಿ ಬಂಧಿಸಿಟ್ಟರೆ, ರಾಮಾಯಣದ ಆತ್ಮವನ್ನೇ ಪ್ರಶ್ನಿಸಿದಂತಾದೀತು. ಬಾಬರಿ ಮಸೀದಿಯ ಧ್ವಂಸದ ಬಳಿಕ ಪಾಕಿಸ್ತಾನಿ ಕಾದಂಬರಿಗಾರ ಇಂತಿಝಾರ್

■ ಡಾ। ಏ. ತರುವನ

ಹುಸೈನ್ ಹೇಳಿದ ಒಂದು ಮಾತನ್ನು ರೋಮ್‌ನ ಥಾಪರ್ ಹೀಗೆ ಸ್ಮರಿಸಿದ್ದಾರೆ: “ಅಂದಿನ ತನಕ ಕೇವಲ ನನ್ನ ಭಾವನೆಯಲ್ಲಿದ್ದ ಒಂದು ಸ್ಥಳ ಮತ್ತು ಒಂದು ಐತಿಹಾಸಿಕ ಸಾಮ್ರಾಜ್ಯ ಹಾಗೂ ಅನೇಕ ಸ್ಮರಣೆಗಳನ್ನು ಜಾಗೃತಗೊಳಿಸುವ ಒಂದು ಧ್ವನಿಯಾಗಿದ್ದ ಆಯೋಧ್ಯೆಯು ಈಗ, ಕೇವಲ ಭಾರತ ಭೂಪಟದ ಸಣ್ಣ ಸ್ಥಳವಾಗಿ ಸಂಕುಚಿತಗೊಂಡಿದೆ. ರಾಮ ಜನ್ಮಸ್ಥಾನವನ್ನು ಒಂದು ಸಣ್ಣ ಪಟ್ಟಣವೆಂದು ಪರಿಗಣಿಸಲು ನನ್ನಿಂದ ಸಾಧ್ಯವಾಗುತ್ತಿಲ್ಲ.

ನಿಜವಾಗಿ ರಾಮನು ಒಂದು ಪುರಾಣ ಪುರುಷ. ಸಂಘಪರಿವಾರವು ಪುರಾಣವನ್ನು ಇತಿಹಾಸಗೊಳಿಸಲು ಪ್ರಯತ್ನಿಸುತ್ತಿದೆ. ಇಷ್ಟಕ್ಕೂ ಪುರಾಣವನ್ನು ಇತಿಹಾಸವೆಂದು ನಂಬುವ ಹಕ್ಕು ಸಂಘಪರಿವಾರಕ್ಕೆ ಖಂಡಿತವಾಗಿಯೂ ಇದೆ. ಆದರೆ ನ್ಯಾಯಾಲಯ ಮತ್ತು ಪಾರ್ಲಿಮೆಂಟ್, ಭಾರತೀಯ ಪ್ರಾಚ್ಯ ಸಂಶೋಧನಾ ಇಲಾಖೆ ಮತ್ತು ಭಾರತದ ಇತಿಹಾಸ ಮಂಡಳಿಯು ಅವರ ನಂಬಿಕೆಯನ್ನು ಅಂಗೀಕರಿಸಬೇಕೆಂಬ ವಾದವೇ ನಿಜವಾದ ಸಮಸ್ಯೆ. ಇದು ಜಾತ್ಯತೀತ ನ್ಯಾಯ ಪ್ರಜ್ಞೆಯನ್ನು ನಾಶಪಡಿಸೀತು.


**ಜಾಹೀರಾತು ದರ**

| | | |
|---|---|---|
| ಒಂದು ಪುಟ | ರೂ. | 3,500/- |
| 1/2 ಪುಟ | ರೂ. | 1,850/- |
| 1/4 ಪುಟ | ರೂ. | 1,050/- |
| ಪ್ರತಿ Cm. ಕಾಲಂ | ರೂ. | 32/- |
| Back Pannel | ರೂ. | 450/- |

**Extra Charges**

| | |
|---|---|
| Front Page | 100% |
| Back Page | 50% |
| Particular Position | 25% |





# ಅಫಘಾನ್ ಚುನಾವಣೆ



ಸೆಪ್ಟೆಂಬರ್ 18ರಂದು ಅಫಘಾನ್‌ನಲ್ಲಿ ನಡೆದ ಚುನಾವಣೆಯು ಕಳೆದ ವರ್ಷದ ಅಧ್ಯಕ್ಷೀಯ ಚುನಾವಣೆಯ ಪುನರಾವರ್ತನೆಯಾಗಿತ್ತೆಂದು ವರದಿಗಳು ಸ್ಪಷ್ಟಪಡಿಸುತ್ತಿವೆ. ಪಾರ್ಲಿಮೆಂಟಿನ ಕೆಳಮನೆಗೆ ನಡೆದ ಚುನಾವಣೆಯಲ್ಲಿ 249 ಸೀಟುಗಳಿಗೆ 2500 ಮಂದಿ ಸ್ಪರ್ಧಿಸಿದ್ದರು. 1.20 ಕೋಟಿ ಮತದಾರರಲ್ಲಿ ಕೇವಲ 36 ಲಕ್ಷ ಮಂದಿ ಮತ ಚಲಾಯಿಸಿದ್ದರು. ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ 40 ಲಕ್ಷ ಮಂದಿ ಭಾಗವಹಿಸಿದ್ದರು. ಚುನಾವಣೆಯನ್ನು ವೀಕ್ಷಿಸುವುದಕ್ಕಾಗಿ ಫ್ರೀ ಏಂಡ್ ಫೇರ್ ಇಲೆಕ್ಷನ್ ಫೌಂಡೇಶನ್ ಓಫ್ ಅಫಘಾನಿಸ್ತಾನ್ (FEFA) 7000 ವೀಕ್ಷಕರನ್ನು ದೇಶದಾದ್ಯಂತ ನೇಮಿಸಿತ್ತು. ಅವರ ಅಂಕಿ ಅಂಶಗಳಂತೆ ಒಟ್ಟು 5355 ಮತಗಟ್ಟೆಗಳಲ್ಲಿ 1208 ಮತಗಟ್ಟೆಗಳನ್ನು ಭದ್ರತಾ ಕಾರಣಗಳಿಗಾಗಿ ಮುಚ್ಚಲಾಗಿತ್ತು. 352 ಕೇಂದ್ರಗಳಲ್ಲಿ ನಕಲಿ ಮತದಾರ ಚೀಟಿಗಳು ವ್ಯಾಪಕವಾಗಿದ್ದುವು. 1220 ಕೇಂದ್ರಗಳಲ್ಲಿ ಎರಡೆರಡು ಮತಗಳನ್ನು ಚಲಾಯಿಸಿದ ಘಟನೆಗಳೂ ಸಂಭವಿಸಿವೆ. 1229 ಬೂತ್‌ಗಳಲ್ಲಿ ಅಪ್ರಾಪ್ತ ವಯಸ್ಕರೂ ಮತ ಚಲಾಯಿಸಿದ್ದಾರೆ. 10 ಲಕ್ಷ ನಕಲಿ ಓಟುಗಳನ್ನು ಯಾದಿಯಿಂದ ತೆಗೆದ ಬಳಿಕದ ಸ್ಥಿತಿ ಇದು. ಮತದಾನದಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆಯೆಂದು ಬೆಟ್ಟು ಮಾಡಿರುವ ಎಫ್.ಇ.ಎಫ್.ಎ. ಅದರ ಪ್ರಾಮಾಣಿಕತೆಯ ಕುರಿತು ಗಂಭೀರ ಶಂಕೆ ವ್ಯಕ್ತಪಡಿಸಿದೆ. ಅದೇ ವೇಳೆ ಚುನಾವಣೆಯು ವಿಜಯವಾಗಿದ್ದು, ಪ್ರಜಾಪ್ರಭುತ್ವಕ್ಕೆ ಸರಿಯಾದ ಹೆಜ್ಜೆಯೆಂದು ಅಧ್ಯಕ್ಷ ಕರ್ಝಾಯಿ ಪ್ರತಿಕ್ರಿಯಿಸಿದ್ದಾರೆ. ಈ ಹಿಂದೆಯೂ ಅವರು ಅಪವಿತ್ರ ಮತ್ತು ಭ್ರಷ್ಟಾಚಾರ ತುಂಬಿದ ಚುನಾವಣಾ ಪ್ರಹಸನದಿಂದಲೇ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದರು. ಅವರಿಗೆ ಅಮೇರಿಕದ ಸಂಪೂರ್ಣ ಬೆಂಬಲವೂ ಇತ್ತು. ಕಳೆದ ಅಧ್ಯಕ್ಷೀಯ ಚುನಾವಣೆಯು ಭ್ರಷ್ಟಾಚಾರ ಮತ್ತು ವ್ಯಾಪಕ ಅರಕ್ಷಿತ ಸ್ಥಿತಿಯಿಂದಾಗಿ ಕರ್ಝಾಯಿಯವರು ಕಳೆದುಕೊಂಡ ಜನಬೆಂಬಲವನ್ನು ಮರಳಿ ಗಳಿಸಲು ಪಾರ್ಲಿಮೆಂಟ್ ಚುನಾವಣೆ ಸಹಾಯಕವಾದೀತೆಂದು ಅಮೇರಿಕ ಭಾವಿಸಿದೆ.

ಅಂತಿಮ ಫಲಿತಾಂಶವು ಅಕ್ಟೋಬರ್ ಕೊನೆಯಲ್ಲಿ ಪ್ರಕಟವಾಗುವ ನಿರೀಕ್ಷೆಯಿದೆ. ತಾಲಿಬಾನರು ಚುನಾವಣೆಯನ್ನು ಬಹಿಷ್ಕರಿಸಬೇಕೆಂದು ಕರೆ ನೀಡಿರುವುದರಿಂದ ಆತಂಕಿತರಾದ ಬಹುಮಂದಿ ನಾಗರಿಕರು ಮತ ಹಾಕಲಿಲ್ಲ.

ಅದೇನೇ ಕಾರಣಗಳಿದ್ದರೂ ಬಹುಸಂಖ್ಯಾತ ಜನರು ಭಾಗವಹಿಸದಿರುವ ಚುನಾವಣೆಯು ಜನಾಭಿಪ್ರಾಯವನ್ನು ಪ್ರತಿಬಿಂಬಿಸುವುದಿಲ್ಲ. ನ್ಯಾಟೋದ 1.50 ಲಕ್ಷ ಸೈನಿಕರು ಅಫಘಾನ್‌ನಿಂದ ಹಿಂತಿರುಗಿ, ಮುಕ್ತ ಮತ್ತು ನಿಷ್ಪಕ್ಷ ಚುನಾವಣೆ ನಡೆದರೆ ಮಾತ್ರ ದೇಶದಲ್ಲಿ ಅಂತಿಮವಾಗಿ ಶಾಂತಿ ನೆಲೆಸೀತು. ಆದರೆ ನಿಕಟ ಭವಿಷ್ಯದಲ್ಲಿ ಅದರ ಸಾಧ್ಯತೆ ಕಾಣಿಸುತ್ತಿಲ್ಲ. ಈಗ ಸ್ಪರ್ಧಿಸುತ್ತಿರುವ ಉಮೇದ್ವಾರರಲ್ಲಿ ಹೆಚ್ಚಿನವರು ತೀರಾ ಅಯೋಗ್ಯರೆಂಬ ವಾಸ್ತವಿಕತೆಯನ್ನು ಗಮನಿಸಿದರೆ,ಹೊಸ ಪಾರ್ಲಿಮೆಂಟ್‌ನ ಬಗ್ಗೆ ಕಿಂಚಿತ್ತೂ ಶುಭ ನಿರೀಕ್ಷೆಗೆ ಅವಕಾಶವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ನಿರಂತರ ಸೋಲಿನ ನಿಮಿತ್ತ ನ್ಯಾಟೋ ಮೈತ್ರಿಸೇನೆಯು ದೇಶ ತೊರೆಯಲು ನಿರ್ಬಂಧಿತವಾದರೂ ತಾಲಿಬಾನ್ ಮತ್ತು ಗೋತ್ರ ವರ್ಗವು ಹಂಚಿಕೊಳ್ಳುವ ಅಫಘಾನಿಸ್ತಾನವು ಸಂಪೂರ್ಣ ಅರಾಜಕತೆಗೆ ಸಿಲುಕಬಹುದೆಂಬ ಆಶಂಕೆ ಬಾಲಿಶವಲ್ಲ.

ವಿದೇಶರಂಗ

**ಅಲ್ಫಾನ್ ಏ.ಜೆ.**

2001ರಲ್ಲಿ ತಾಲಿಬಾನರನ್ನು ಹೊರಹಾಕಿ ಅಮೇರಿಕ ಮತ್ತು ನ್ಯಾಟೋ ಮೈತ್ರಿಸೇನೆಯು ಕಾಬೂಲ್ ವಶಪಡಿಸಿದ ಬಳಿಕ ಸಾವಿರಗಟ್ಟಲೆ ನಾಗರಿಕರು ಅಫಘಾನ್‌ನಲ್ಲಿ ಹತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಲ್ಲಿ ಶಾಂತಿ ಸ್ಥಾಪನೆಯಾಗಬೇಕಾದರೆ; ಸಂಬಂಧಿತ ಕಕ್ಷಿಗಳನ್ನು ಮಾತುಕತೆಗೆ ದುಂಡು ಮೇಜಿನಲ್ಲಿ ಸೇರಿಸುವುದು ವಿಶ್ವಸಂಸ್ಥೆಯ ಪ್ರಾಥಮಿಕ ಕರ್ತವ್ಯವಾಗಿದೆ.

## ಆಫಿಯಾ ಸಿದ್ದೀಕಿಗೆ 86 ವರ್ಷ ಶಿಕ್ಷೆ–ವ್ಯಾಪಕ ಪ್ರತಿಭಟನೆ

**ಇಸ್ಲಾಮಾಬಾದ್:** ಕೊಲೆಯತ್ನದ ಆರೋಪದಲ್ಲಿ ಪಾಕಿಸ್ತಾನಿ ವಿಜ್ಞಾನಿ ಆಫಿಯಾ ಸಿದ್ದೀಕಿಯವರಿಗೆ ಅಮೇರಿಕದ ನ್ಯಾಯಾಲಯವೊಂದು 86 ವರ್ಷಗಳ ಸೆರೆವಾಸ ಶಿಕ್ಷೆ ವಿಧಿಸಿದ್ದನ್ನು ವಿರೋಧಿಸಿ ಇಲ್ಲಿನ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು ನಡೆದುವು ಎಂದು ಸ್ಥಳೀಯ ಮಾಧ್ಯಮಗಳು ಪ್ರಕಟಿಸಿವೆ.

ಇಸ್ಲಾಮಾಬಾದ್, ಲಾಹೋರ್ ಮತ್ತು ಕರಾಚಿಗಳಲ್ಲಿ ನೂರಾರು ಮಂದಿ ಬೀದಿಗಿಳಿದು ಪ್ರತಿಭಟಿಸಿದರು. ಅವರ ಆಕ್ರೋಶಗಳೆಲ್ಲವೂ ಪ್ರಕರಣದಲ್ಲಿ ಮಧ್ಯ ಪ್ರವೇಶಿಸದ ಪಾಕಿಸ್ತಾನಿ ಅಧಿಕಾರಿಗಳ ಮೇಲಿತ್ತು. ವರದಿಗಳ ಪ್ರಕಾರ, ಪ್ರತಿಭಟನಕಾರರು ಅಮೇರಿಕನ್ ರಾಯಭಾರಿ ಕಚೇರಿಗೆ ಮುತ್ತಿಗೆ ಹಾಕಲು ಶ್ರಮಿಸುತ್ತಿದ್ದ ವೇಳೆ ಸ್ಥಳೀಯ ಆರಕ್ಷಕರ ವಿರುದ್ಧ ತೀವ್ರ ಜಟಾಪಟಿಗಿಳಿದರು.

ಸಿದ್ದೀಕಿಯವರ ಕುಟುಂಬ ವಾಸಿಸುತ್ತಿರುವ ಕರಾಚಿಯಲ್ಲಿ, ಅಮೇರಿಕನ್ ರಾಯಭಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸುತ್ತಿದ್ದ ಮತ್ತು ಆರಕ್ಷಕರ ಮೇಲೆ ಕಲ್ಲು ತೂರಾಟ ನಡೆಸುತ್ತಿದ್ದ ಪ್ರತಿಭಟನಾಕಾರರನ್ನು ಚದುರಿಸಲು ಲಾಠಿ ಪ್ರಹಾರ ಮತ್ತು ಗಾಳಿಯಲ್ಲಿ ಗುಂಡು ಹೊಡೆಯಲಾಯಿತು.



ಮೆಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನ್ಯೂರೋಸೈಂಟಿಸ್ಟ್ ಆಗಿದ್ದ 38ರ ಹರೆಯದ ಆಫಿಯಾ ಸಿದ್ದೀಕಿಯವರ ವಿರುದ್ಧ 2008ರಲ್ಲಿ ಅಫಘಾನಿಸ್ತಾನದಲ್ಲಿ ಅಮೇರಿಕನ್ ಸರಕಾರಿ ಅಧಿಕಾರಿಗಳನ್ನು ಮತ್ತು ಅಫಘಾನಿ ಧುರೀಣರನ್ನು ಕೊಲೆಗೈಯಲು ಯತ್ನಿಸಿದ್ದಾರೆಂಬ ಆರೋಪ ಪಟ್ಟಿ ಹೊರಿಸಲಾಗಿತ್ತು. ಅವರನ್ನು 2009ರಲ್ಲಿ ಬಂಧಿಸಲಾಗಿದ್ದು, ವಿಚಾರಣೆಯ ವೇಳೆ ಅಧಿಕಾರಿಯೋರ್ವನ ಬಂದೂಕನ್ನು ಕಿತ್ತು ಗುಂಡುಹಾರಿಸಿದ್ದಾರೆಂದು ಆಪಾದಿಸಲಾಗಿತ್ತು.

ನ್ಯೂಯಾರ್ಕ್‌ನ ವಕೀಲರು ಸಿದ್ದೀಕಿಯವರನ್ನು ಅಲ್ ಕಾಯ್ದಾ ಪರ ಹಿತಾಕಾಂಕ್ಷೆ ಹೊಂದಿದ್ದಾರೆಂದು ಆರೋಪಿಸಿದ್ದಲ್ಲದೆ, ಅವರಿಗೆ ಮರಣ ದಂಡನೆ ವಿಧಿಸಬೇಕೆಂದು ವಾದಿಸಿದ್ದರು. ಆದರೆ ಆಕೆಯ ವಕೀಲರು, ತಮ್ಮ ಕಕ್ಷಿದಾರಳು ಮಾನಸಿಕವಾಗಿ ಅಸ್ವಸ್ಥಳಾಗಿರುವರೆಂದೂ ಬಂದೂಕು ಕಿತ್ತದ್ದಕ್ಕೆ ಯಾವುದೇ ಪುರಾವೆ ಇಲ್ಲವೆಂದೂ ವಾದಿಸಿದ್ದರು.

## ಜನಾಭಿಪ್ರಾಯವೊಂದೇ ಕಾಶ್ಮೀರ ಸಮಸ್ಯೆಗೆ ಪರಿಹಾರ



**ಲಾಹೋರ್:** ಜಮ್ಮು–ಕಾಶ್ಮೀರ ಸಮಸ್ಯೆಗೆ ಜನಾಭಿಪ್ರಾಯವೊಂದೇ ಪರಿಹಾರವಾಗಬಲ್ಲುದು ಎಂದು ಪಾಕಿಸ್ತಾನದ ಮಾಜಿ ಪ್ರಧಾನಮಂತ್ರಿ ನವಾಝ್ ಶರೀಫ್ ಹೇಳಿದ್ದಾರೆ.

"ಕಾಶ್ಮೀರದ ಜನತೆ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ. ಭಾರತವು ಈ ಅವಕಾಶವನ್ನು ಬಳಸಿಕೊಂಡು ಜನಮತ ಸಂಗ್ರಹಕ್ಕೆ ಇಳಿಯುವುದೇ ಅಲ್ಲಿನ ಸಮಸ್ಯೆಗಿರುವ ಏಕೈಕ ಪರಿಹಾರವಾಗಿದೆ" ಎಂದು ಅವರು ಹೇಳಿದ್ದಾರೆ.

"ಕಾಶ್ಮೀರಿಗಳಿಗೆ ಅವರ ಇಚ್ಛೆಯಂತೆ ಬಾಳಲು ಅವಕಾಶ ಒದಗಿಸಬೇಕಾದುದು ಅವರ ಹಕ್ಕಾಗಿದೆ ಮತ್ತು ಭಾರತ ಸರಕಾರವು ಕಾಶ್ಮೀರದ ನೈಜ ನೇತಾರರೊಡನೆ ಮಾತುಕತೆ ನಡೆಸಲು ಮುಂದಾಗಬೇಕು" ಎಂದೂ ಅವರು ಹೇಳಿದ್ದಾರೆ.

## ಅಕ್ಟೋಬರ್ 4–6: ಅಂತಾರಾಷ್ಟ್ರೀಯ ಫೈನಾನ್ಸ್ ಸಮ್ಮೇಳನ

**ಕೊಚ್ಚಿನ್:** ದೇಶದ ಪ್ರಪ್ರಥಮ ಅಂತಾರಾಷ್ಟ್ರೀಯ ಇಸ್ಲಾಮಿ ಫೈನಾನ್ಸ್ ವಿಚಾರಗೋಷ್ಠಿ ಅಕ್ಟೋಬರ್ 4 ರಿಂದ 6ರ ತನಕ ಕೇರಳದ ಕೊಚ್ಚಿನ್‌ನಲ್ಲಿ ಜರಗಲಿದೆ. ಜಿದ್ದಾದ ಇಸ್ಲಾಮಿಕ್ ಡೆವಲಪ್‌ಮೆಂಟ್ ಬ್ಯಾಂಕ್‌ನ (IDB) ಸಹ ಸಂಸ್ಥೆಯಾಗಿರುವ ಇಸ್ಲಾಮಿಕ್ ರಿಸರ್ಚ್ ಆಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಹಾಗೂ ಅಲ್ ಜಾಮಿಯಾ ಅಲ್ ಇಸ್ಲಾಮಿಯಾ ಶಾಂತಪುರಮ್ ಜಂಟಿಯಾಗಿ ಈ ಕಾರ್ಯ ಕ್ರಮವನ್ನು ಆಯೋಜಿಸಿದೆ.

'ಇಸ್ಲಾಮಿ ಬ್ಯಾಂಕಿಂಗ್ ಭಾರತದಲ್ಲಿ– ಸಾಧ್ಯತೆಗಳು ಮತ್ತು ನಿಯಂತ್ರಿಸುವ ವಿಧಾನಗಳು' ಎಂಬುದು ಈ ಸೆಮಿನಾರ್‌ನ ಪ್ರಮುಖ ಕೇಂದ್ರೀಯ ವಿಷಯ. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆರ್ಥಿಕ ತಜ್ಞರು, ಬ್ಯಾಂಕಿಂಗ್ ರಂಗದ ಪ್ರಮುಖರು ಭಾಗವಹಿಸಲಿದ್ದಾರೆ.

ಡಾ। ಉಮರ್ ಛಾಪ್ರ (ಸೌದಿ ಅರೇಬಿಯಾ), ಡಾ। ಮುಹಮ್ಮದ್ ಉಬೈದುಲ್ಲಾ (ಐ.ಡಿ.ಬಿ.), ಡಾ। ಹಬೀಬ್ ಅಹ್ಮದ್ (ಬಾಂಗ್ಲಾದೇಶ), ಡಾ। ಮುಂದಿರ್ ಕಹ್‌ಫ್ (ಅಮೇರಿಕಾ) ಡಾ। ನಾಸಿಮ್ ಅಲಿ (ಅಮೇರಿಕಾ), ಡಾ। ಅಲಿ ಖುರ್‌ದಗಿ (ಕತಾರ್), ಡಾ। ಹುಸೈನ್ ಹಾಮಿದ್ ಹಸನ್ (ದುಬೈ) ಡಾ। ನಿಝಾಮ್ ಯಕೂಬಿ (ಬಹರೈನ್) ಮೊದಲಾದವರು ಭಾಗವಹಿಸಲಿರುವರು. ಅಲ್ಲದೇ ಭಾರತದ ಬ್ಯಾಂಕಿಂಗ್ ರಂಗದ ತಜ್ಞರು, ಉದ್ಯಮರಂಗದ ಪ್ರಮುಖರೂ ಈ ಸೆಮಿನಾರ್‌ನಲ್ಲಿ ಭಾಗವಹಿಸಲಿರುವರು.

ಈಗಾಗಲೇ ವಿ.ಆರ್. ಕೃಷ್ಣ ಅಯ್ಯರ್‌ರ ನೇತೃತ್ವದಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಡಾ। ಮುಹಮ್ಮದ್ ಅಲಿ, ಪಿ.ವಿ. ಅಬ್ದುಲ್ ವಹ್ಹಾಬ್, ಪ್ರೊ। ಸಿದ್ದೀಕ್ ಹಸನ್, ಎಂ.ಡಿ. ನಲಪಾಡ್, ಎಫ್. ಆರ್. ಫರೀದಿ ಮುಂತಾದವರಲ್ಲದೆ ಇನ್ನೂ ಹಲವು ಪ್ರಮುಖರು ಈ ಸ್ವಾಗತ ಸಮಿತಿಯಲ್ಲಿದ್ದಾರೆ.

## ಟರ್ಕಿ: ಅಧ್ಯಕ್ಷರ ಪತ್ನಿಯ ಪರ್ದಾಕ್ಕೆ ಮನ್ನಣೆ

**ಅಂಕಾರ:** ಟರ್ಕಿಯ ಅಧ್ಯಕ್ಷ ಅಬ್ದುಲ್ಲಾ ಗುಲ್ ಮತ್ತು ಪ್ರಧಾನಿ ರಜಬ್ ಉರ್ದುಗಾನ್‌ರ ಪತ್ನಿಯರ ಪರ್ದಾ ಧಾರಣೆಯು ಕಾನೂನಿಗೆ ಸವಾಲು ಮತ್ತು ಗಣತಂತ್ರ ಮೌಲ್ಯಗಳಿಗೆ ಅಪಮಾನವೆಂದು ವಾದಿಸಿ ಟರ್ಕಿ ನಾಗರಿಕರು ಸಲ್ಲಿಸಿದ್ದ ಅರ್ಜಿಯನ್ನು ಟರ್ಕಿಯ ಸನ್ಸಾನ್‌ನ ಪ್ರಾಂತೀಯ ನ್ಯಾಯಾಲಯವು ತಿರಸ್ಕರಿಸಿದೆ.ಅವರ ಪರ್ದಾಧಾರಣೆಯಿಂದ ಅರ್ಜಿದಾರನಿಗೆ ಯಾವುದೇ ನಷ್ಟವಿಲ್ಲವೆಂದೂ, ಪರ್ದಾವನ್ನು ಸಾರ್ವಜನಿಕವಾಗಿ ನಿಷೇಧಿಸಿಲ್ಲವೆಂದೂ ನ್ಯಾಯಾಲಯ ಪುಷ್ಟೀಕರಿಸಿದೆ.ಕೆಲವು ವಿಶ್ವವಿದ್ಯಾಲಯ ಹಾಗೂ ಇತರ ಕೆಲವೆಡೆಗಳಲ್ಲಿ ಪರ್ದಾ ನಿಷೇಧ ಜಾರಿಯಲ್ಲಿದ್ದರೂ ಪರಂಪರಾಗತ ಜಾತ್ಯತೀತ ಶಕ್ತಿಗಳು ಮತ್ತು ವಿರೋಧ ಪಕ್ಷವು ಹಿಜಾಬನ್ನು ಇಸ್ಲಾಮಿ ಒಲವಿನ ಸರಕಾರಗಳ ವಿರುದ್ಧ ಅಸ್ತ್ರವಾಗಿ ಬಳಸುತ್ತಿವೆ.

# ನ್ಯಾಯಾಂಗಕ್ಕೂ ತಲೆ ಹಾಕಿತೇ ಭ್ರಷ್ಟಾಚಾರ?

**ಭಾ**ರತ ಸ್ವಾತಂತ್ರ್ಯ ಪಡೆದು 6 ದಶಕಗಳಲ್ಲಿ ಎಷ್ಟು ಅಭಿವೃದ್ಧಿ ಹೊಂದಿದೆಯೋ ಅಷ್ಟೇ ವೇಗದಲ್ಲಿ ಇಲ್ಲಿ ನೈತಿಕತೆಯು ಪಾತಾಳಕ್ಕಿಳಿದಿದೆ ಎಂಬುದನ್ನು ಇಲ್ಲಿ ನಡೆಯುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರಗಳು ಬಹಿರಂಗಪಡಿಸುತ್ತಿವೆ. ಇಲ್ಲಿ ಎಲ್ಲ ರಂಗಗಳಲ್ಲೂ ಭ್ರಷ್ಟಾಚಾರ ವ್ಯಾಪಕವಾಗಿದೆ. ಪ್ರತಿಯೊಂದು ರಂಗದ ಸಾಚಾತನದ ಕುರಿತು ಭೂತಗನ್ನಡಿಯಿಟ್ಟು ನೋಡುವ ಅನಿವಾರ್ಯತೆ ಬಂದೊದಗಿದೆ. ದೇಶದ ಸಂವಿಧಾನದ ನಾಲ್ಕು ಆಧಾರ ಸ್ತಂಭಗಳಲ್ಲೊಂದಾದ ನ್ಯಾಯಾಂಗ ವ್ಯವಸ್ಥೆಯಲ್ಲಿಯೂ ಭ್ರಷ್ಟಾಚಾರ ನುಸುಳಿದ ವಾಸನೆ ಮೂಗಿಗೆ ಬಡಿಯತೊಡಗಿದೆ.

ನ್ಯಾಯಾಂಗದ ಮೇಲೆ ಈ ಭ್ರಷ್ಟಾಚಾರದ ಆರೋಪವು ಹೊಸ ವಿಷಯವೇನೂ ಅಲ್ಲವಾದರೂ ಕೆಳ ನ್ಯಾಯಾಲಯಗಳಿಗಷ್ಟೇ ಸೀಮಿತವಾಗಿತ್ತು. ಒಂದೆರಡು ಬಾರಿ ಹೈಕೋರ್ಟ್ ನ್ಯಾಯಾಧೀಶರ ವಿರುದ್ಧವೂ ಕೇಳಿ ಬಂದಿತ್ತು. ಈ ನಿಟ್ಟಿನಲ್ಲಿ ಜಸ್ಟಿಸ್ ದಿನಕರನ್‌ರ ಪ್ರಕರಣವನ್ನು ಉಲ್ಲೇಖಿಸಬಹುದಾಗಿದೆ. ಆದರೆ ಸುಪ್ರೀಮ್ ಕೋರ್ಟಿನ ಹಿರಿಯ ವಕೀಲರೂ ಮಾಜಿ ಸಚಿವರೂ ಆದ ಶಾಂತಿ ಭೂಷಣ್‌ರು ಸುಪ್ರೀಮ್ ಕೋರ್ಟಿಗೆ ಇತ್ತೀಚೆಗೆ ಸಲ್ಲಿಸಿದ ಪ್ರಮಾಣ ಪತ್ರವು ನ್ಯಾಯಪ್ರಿಯ ಜನತೆಯನ್ನು ಬೆಚ್ಚಿ ಬೀಳಿಸುವಂತೆ ಮಾಡಿದೆ. ಸುಪ್ರೀಮ್ ಕೋರ್ಟಿನ ಹಿಂದಿನ 16 ಶ್ರೇಷ್ಠ ನ್ಯಾಯಾಧೀಶರಲ್ಲಿ ಎಂಟು ಮಂದಿ ಭ್ರಷ್ಟರು, ಉಳಿದ 6 ಮಂದಿ ಪ್ರಾಮಾಣಿಕರು ಮತ್ತು ಇಬ್ಬರ ಕುರಿತು ಏನೂ ಹೇಳಲಾರೆನೆಂದು ಪ್ರಮಾಣ ಪತ್ರದಲ್ಲಿ ಸೂಚಿಸಿದ್ದಾರೆ. ಈ ವರದಿ ಇಲ್ಲಿನ ನ್ಯಾಯಾಂಗ ವ್ಯವಸ್ಥೆಯನ್ನೇ ಪ್ರಶ್ನಿಸುವಂತೆ ಮಾಡಿದೆ ಎಂದರೆ ತಪ್ಪಾಗಲಾರದು.

ಇಲ್ಲಿ ಗಮನಿಸಬೇಕಾದ ವಿಚಾರವೇನೆಂದರೆ, ಈ ಪ್ರಮಾಣ ಪತ್ರದ ಮೂಲಕ ಆರೋಪಿಸಿದ ಶಾಂತಿ ಭೂಷಣ್‌ರು ಇಂದು ನಿನ್ನೆಯವರಲ್ಲ. ಕಳೆದ 5 ದಶಕಗಳಲ್ಲಿ ಸುಪ್ರೀಮ್ ಕೋರ್ಟಿನಲ್ಲಿ ವಕೀಲರಾಗಿ ಮತ್ತು ಮೊರಾರ್ಜಿ ದೇಸಾಯಿ ಸರಕಾರದಲ್ಲಿ ಕಾನೂನು ಸಚಿವರಾಗಿ ಅನುಭವವುಳ್ಳವರು. ಸುಪ್ರೀಮ್ ಕೋರ್ಟಿನ ಆಗುಹೋಗುಗಳ ಬಗ್ಗೆ ಚೆನ್ನಾಗಿ ಬಲ್ಲವರು. ಆದ್ದರಿಂದ ಅವರ ಆರೋಪವನ್ನು ಅಷ್ಟು ಸುಲಭದಲ್ಲಿ ತಳ್ಳಿ ಹಾಕುವಂತಿಲ್ಲ. ಇನ್ನು ಅನುಭವದ ಕುರಿತು ಹೇಳುವುದಾದರೆ, 1975ರಲ್ಲಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿ ಪ್ರತಿಪಕ್ಷದವರನ್ನು ಜೈಲಿಗೆ ತಳ್ಳುತ್ತಿದ್ದಾಗ ಅಂದಿನ ಸರ್ವಾಧಿಕಾರಿ ಧೋರಣೆಯ ವಿರುದ್ಧ ಹೋರಾಡಿದ ಖ್ಯಾತಿಯೂ ಅವರ ಮೇಲಿದೆ.

ಮತ್ತೊಂದು ಪ್ರಮುಖ ವಿಚಾರವೆಂದರೆ, ಅವರ ಪುತ್ರರೂ ಖ್ಯಾತ ವಕೀಲರೂ ಆದ ಪ್ರಶಾಂತ್ ಭೂಷಣ್‌ರು ಇತ್ತೀಚೆಗೆ ತೆಹಲ್ಕಾ ವಾರಪತ್ರಿಕೆಯ ಲೇಖನವೊಂದರಲ್ಲಿ ನ್ಯಾಯಾಧೀಶರ ಭ್ರಷ್ಟಾಚಾರದ ಬಗ್ಗೆ ಬರೆದಿದ್ದರು. ಈ ಕುರಿತು ಅವರ ವಿರುದ್ಧ ನ್ಯಾಯಾಂಗ ನಿಂದನೆಯ ಮೊಕದ್ದಮೆಯೂ ದಾಖಲಾಗಿತ್ತು. ಇದರ ಪ್ರಸ್ತಾಪವೆತ್ತಿದ ಶಾಂತಿ ಭೂಷಣ್‌ರು ತನ್ನ ಪುತ್ರನ ಮೇಲೆ ಮಾಡಿದ ವಾಗ್ದಂಡನೆಗೆ ನನ್ನನ್ನು ಕಕ್ಷಿದಾರನನ್ನಾಗಿ ಮಾಡಬೇಕೆಂದೂ ಸುಪ್ರೀಮ್ ಕೋರ್ಟಿಗೆ ಮನವಿ ಮಾಡಿದ್ದರು. ಪ್ರಶಾಂತ್ ಭೂಷಣ್‌ರು ಗುಜರಾತ್ ನರಮೇಧ, ಕಾಶ್ಮೀರದಲ್ಲಿ ಸೇನೆಯ ಹಿಂಸಾತಾಂಡವ, ಛತ್ತೀಸ್‌ಗಡ್‌ನಲ್ಲಿ ಆದಿವಾಸಿಗಳ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಡಿದ ಮಾನವ ಹಕ್ಕುಗಳ ಹೋರಾಟಗಾರರಾಗಿದ್ದಾರೆ.

ವಸ್ತುತಃ ಅಡ್ವಕೇಟ್ ಪ್ರಶಾಂತ್ ಭೂಷಣ್‌ರು ನ್ಯಾಯಾಂಗದಲ್ಲಿ ನುಸುಳಿರುವ ಹಲವು ವಿಧದ



ಭ್ರಷ್ಟಾಚಾರವನ್ನು ಉಲ್ಲೇಖಿಸುತ್ತಾ, ಅದರ ನಿರ್ಮೂಲನಕ್ಕಾಗಿ ಗಂಭೀರ ಪ್ರಯತ್ನ ನಡೆಸಲಾಗಿಲ್ಲವೆಂದೂ ತಮ್ಮ ಲೇಖನದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ. ಬದಲಾಗಿ, ಈ ರೀತಿಯ ಆರೋಪಗಳನ್ನು ಹೊರಿಸುವುದರಿಂದ ನ್ಯಾಯಾಂಗದ ಪ್ರತಿಷ್ಠೆಗೆ ಕುಂದುಂಟಾಗುತ್ತದೆ ಮತ್ತು ದೇಶದ ನ್ಯಾಯಾಂಗ ವ್ಯವಸ್ಥೆಗೆ ಪೆಟ್ಟು ಬೀಳುತ್ತದೆ ಎಂಬ ಅಭಿಪ್ರಾಯವು ಭ್ರಷ್ಟಾಚಾರಕ್ಕೆ ಇನ್ನಷ್ಟು ಹಾದಿ ಮಾಡಿಕೊಟ್ಟಿದೆ ಎಂದೂ ಬರೆದಿದ್ದಾರೆ.

ಇನ್ನೊಂದು ವಿಚಾರವೂ ಇಲ್ಲಿ ಗಮನೀಯವಾಗಿದೆ. ಮುಖ್ಯ ನ್ಯಾಯಾಧೀಶರ ಅನುಮತಿಯಿಲ್ಲದೆ ಯಾವ ನ್ಯಾಯಾಧೀಶರ ವಿರುದ್ಧವೂ ಎಫ್.ಐ.ಆರ್. ದಾಖಲಿಸಬಾರದು ಎಂದು 1991ರಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಪೀಠವೊಂದು ಆದೇಶಿಸಿತ್ತು. ಆ ಬಳಿಕದಿಂದ ಯಾವುದೇ ಪ್ರಕರಣದಲ್ಲೂ ಯಾವ ನ್ಯಾಯಾಧೀಶರ ವಿರುದ್ಧವೂ ಎಫ್.ಐ.ಆರ್. ದಾಖಲಿಸಲು ಅನುಮತಿ ನೀಡಲಾಗಿಲ್ಲ. ಎಲ್ಲಿಯ ವರೆಗೆಂದರೆ, ನ್ಯಾಯಾಂಗದ ತೀರ್ಪು ಬಂದ ಬಳಿಕವೂ ದಾಖಲಿಸಿದ ಉದಾಹರಣೆಯಿಲ್ಲ. ಅದೇ ರೀತಿ ಸಂವಿಧಾನದಲ್ಲಿ ನ್ಯಾಯಾಧೀಶರುಗಳ ಉಚ್ಛಾಟನೆಯ ಪ್ರಕ್ರಿಯೆಯು ಎಷ್ಟು ಕಗ್ಗಂಟಿನಿಂದ ಕೂಡಿದೆಯೆಂದರೆ ಗಂಭೀರ ಆರೋಪಗಳೂ ಪ್ರಭಾವಹೀನವಾಗಿರುತ್ತವೆ.

**ಎ.ಎಸ್. ಬೋಳಂಗಡಿ**

ಇಲ್ಲಿನ ನ್ಯಾಯಾಧೀಶರ ಕುರಿತು ಈ ಹಿಂದೆ ಆರೋಪಗಳು ಬಂದಿವೆಯಾದರೂ ಈ ತರಹದ ಆರೋಪ ಬಂದಿರಲಿಲ್ಲ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಇದರ ಸತ್ಯಾಸತ್ಯತೆಯನ್ನು ಬಹಿರಂಗಗೊಳಿಸಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹಲವು ರಾಜ್ಯಗಳಲ್ಲಿ ನ್ಯಾಯಾಧೀಶರುಗಳ ವಿರುದ್ಧ ಭ್ರಷ್ಟಾಚಾರದ ಗಂಭೀರ ಆರೋಪ ಹೊರಿಸಲ್ಪಟ್ಟಿದೆ. ಹಲವರ ವಿರುದ್ಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಕೆಲವರ ವಿರುದ್ಧ ತನಿಖೆಗೆ ಆದೇಶವೂ ಹೊರಟಿವೆ. ಈಚೆಗೆ ಐವರು ನ್ಯಾಯಾಧೀಶರು ಪರೀಕ್ಷೆಯ ವೇಳೆ ನಕಲು ಹೊಡೆಯುತ್ತಿರುವಾಗಲೇ ಸಿಕ್ಕಿ ಬಿದ್ದಿದ್ದರು. ಅಲ್ಲದೇ ದೇಶದ ಮುಖ್ಯ ನ್ಯಾಯಾಧೀಶರುಗಳ ಕಚೇರಿಗಳನ್ನು ಆರ್.ಟಿ.ಐ. ವ್ಯಾಪ್ತಿಗೆ ಒಳಪಡಿಸಬೇಕೆಂಬ ಅಭಿಪ್ರಾಯವನ್ನು ಸರ್ವೋಚ್ಚ ನ್ಯಾಯಾಲಯವು ವಿರೋಧಿಸಿದ್ದ ರೀತಿಯು ನ್ಯಾಯಾಂಗದ ಮೇಲಿನ ಸಂಶಯವನ್ನು ಇನ್ನಷ್ಟು ಗಾಢಗೊಳಿಸುತ್ತದೆ. (12ನೇ ಪುಟಕ್ಕೆ)

# ಕುದಿಯುವ ನೀರಿನಲ್ಲಿ ಮುಖ ಕಾಣಿಸುವುದಿಲ್ಲ...


ಮಾನ ಹರಾಜಾದದ್ದು ಸಂಘಟನೆಗಳದ್ದೋ ಸಮುದಾಯದ್ದೋ?
ಓರ್ವ ಮಹಿಳೆಯ ಮನದ ಮಾ...
■ ರಹೀನಾ ತೊಕ್ಕೊಟ್ಟು

**ಪ್ರತಿಕ್ರಿಯೆ**

**ಮೊ**ತ್ತಮೊದಲು ಸಂಚಿಕೆ 28ರ ಮುಖಪುಟದಲ್ಲಿ ಪ್ರಕಟವಾದ 'ಮಾನ ಹರಾಜಾದದ್ದು ಸಂಘಟನೆಗಳದ್ದೋ ಸಮುದಾಯದ್ದೋ' ಎಂಬ ಲೇಖನದ ಸವಾಲಿಗೆ ಮುಸ್ಲಿಮ್ ಸಮುದಾಯದ ಸದಸ್ಯೆ ಎಂಬ ನೆಲೆಯಲ್ಲಿ ನೋವು, ಅಪಮಾನ ಮತ್ತು ಒಪ್ಪಿಗೆಯೊಂದಿಗೆ ತಲೆ ತಗ್ಗಿಸುತ್ತೇನೆ. ಮುಂದೆಂದೂ ನನ್ನ ಸಮುದಾಯಕ್ಕೆ ಈ ಅವಮಾನ ಬಾರದಿರಲಿ ಎಂದು ಬಹಳ ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತೇನೆ. ನೀವು ಕೇಳಿದ 'ಮಾನ' ಸಂಘಟನೆಗಳಿಗೆ ಇರುತ್ತಿದ್ದರೆ ಇಂತಹ ಕೀಳುಮಟ್ಟದ ಕೆಲಸ ಸಂಘಟಕ ರಿಂದ ಖಂಡಿತ ಬರುತ್ತಿರಲಿಲ್ಲ.

ಎರಡೂ ಸಂಘಟನೆಗಳು ವಾದ-ಪ್ರತಿವಾದದ ಹೆಸರಲ್ಲಿ, ಸಂವಾದದ ಹೆಸರಲ್ಲಿ, ಉತ್ತರಕ್ಕೆ ಪ್ರತ್ಯುತ್ತರದ ಹೆಸರಲ್ಲಿ ಅನೇಕ ಬಾರಿ ವೇದಿಕೆ ಕಟ್ಟಿ ತಮ್ಮ ಕೋಳಿ ಜಗಳ ಅಥವಾ 'ಟ್ವೆಂಟಿ-20 ' ನಡೆಸಿ ಪರಸ್ಪರ ಕೆಸರೆರಚಿವೆ. ಇಸ್ಲಾಮಿನ ಇಝ್ಝತ್ತನ್ನು ಬೀದಿ ಪಾಲಾಗಿಸಿ ಸಹೋದರ ಸಮುದಾಯದ ಮುಂದೆ ಅನುಕಂಪ ಗಿಟ್ಟಿಸಿಕೊಂಡಿವೆ.

ಆದ್ದರಿಂದಲೇ ಮಸ್ಜಿದುನ್ನೂರ್‌ನಲ್ಲಿ 'ಫಿತ್ನ' ಹರಡಿದವರಿಗಿಂತ ಭಿನ್ನರಾಗಿ ಆ ಕೃತ್ಯವನ್ನು ಕಣ್ಣಮುಂದೆ ಕಂಡವರೇ ಸಮುದಾಯದ ಅಧಃಪತನವನ್ನು ನೆನೆದು ಅಂದು ಕಣ್ಣೀರಿಟ್ಟರು. ನಮಾಝ್‌ಗೆ ಅವಕಾಶ ಕೋರಿ ಮಸೀದಿ ಪರಿಸರದ ಮಹಿಳೆಯರು ಕೋರ್ಟ್ ಮೆಟ್ಟಲೇರದೆ, ಅವಕಾಶಕ್ಕಾಗಿ ದೂರದೂರಿನ ಮಹಿಳೆಯರು ಏರಿರುವ ಉದ್ದೇಶವೇನೆಂದು ಅರ್ಥವಾಗುತ್ತಿಲ್ಲ. ಈ ಮೊದಲು ಆ ಮಸೀದಿಯಲ್ಲಿ ಕಾಣಿಸಿಕೊಂಡಿಲ್ಲದವರೂ ಅಂದು ಅಲ್ಲಿಗೆ ಹಾಜರಾದುದು ನಮಾಝ್ ನಿರ್ವಹಿಸಲೋ ಅಥವಾ....? ಜತೆಗೆ ಮನುಷ್ಯರ 'ಅಖೀದ' ಸರಿಪಡಿಸುವುದು ನಮ್ಮ ಮೂಲ ಅಜೆಂಡಾ ಎಂದು ಪೇಜು ಮತ್ತು ಸ್ಟೇಜುಗಳಲ್ಲಿ ಬೊಬ್ಬಿಡುವವರು, ಮಹಿಳೆಯ ಮಸೀದಿ ಪ್ರವೇಶದ ಕುರಿತು ಇಸ್ಲಾಮ್ ಕಲಿಸಿದ 'ಅಖೀದ' ಅರಿಯದೆ ಹೋದುದು ದೊಡ್ಡ ದುರಂತ. ಸಾಮೂಹಿಕ ನಮಾಝ್ ನಿರ್ವಹಿಸುವಾಗ ಅನುಯಾಯಿಗಳು ಇಮಾಮ್‌ಗಿಂತ ಹಿಂದಿರುವುದು ಅಗತ್ಯ. ಇಮಾಮರಿಗಿಂತ ಮುಂದೆ ನಿಂತು ನಮಾಝ್ ಮಾಡುವುದು ನಿಷಿದ್ಧ! ಆದರೆ ನಮಾಝ್‌ಗೆ ಹೊರಗಡೆ ನಿಂತವರಲ್ಲಿ ಕೆಲವರು ಅಂದು ಇಮಾಮರ ಮುಂದಿರುವ ದೃಶ್ಯ ಕಂಡು ಬಂದುದು ಶೋಚನೀಯ! ಈ ಪಾಪದ ಹೊರೆಯನ್ನು ಜಗಳಗಂಟಿಗಳೇ ಹೊರಬೇಕಲ್ಲವೇ?

ಅದೂ ಅಲ್ಲದೆ ಮಹಿಳೆಯರ ಪಂಕ್ತಿಯ ಬಗ್ಗೆ ಪ್ರವಾದಿವರ್ಯರು(ಸ) ಬಹಳಷ್ಟು ಮೌಲ್ಯಗಳನ್ನು ಕಲಿಸಿದ್ದಾರೆ. ಆದರೆ ಅಂದು ಅವೆಲ್ಲವನ್ನೂ ಗಾಳಿಗೆ ತೂರಿದ ಮಹಿಳೆಯರ ಪಂಕ್ತಿಯನ್ನು ದೃಶ್ಯ ಮಾಧ್ಯಮಗಳು ಪದೇ

**ನೂರ್‌ಜಹಾನ್, ತೊಕ್ಕೊಟ್ಟು**

ಪದೇ ತೋರಿಸುವಾಗ ನಿಜಕ್ಕೂ ಬೇಸರವಾಯಿತು. ಒಟ್ಟಿನಲ್ಲಿ ದೃಶ್ಯ ಮಾಧ್ಯಮ, ಮುದ್ರಣ ಮಾಧ್ಯಮ, ಪ್ರತ್ಯಕ್ಷದರ್ಶಿಗಳ ವರದಿಯಂತೆ ಅಂದು ಒಟ್ಟು ಸಮುದಾಯವೇ ನಗೆಪಾಟಲಿಗೀಡಾಗಿತ್ತು.

"ಸದಾಕಾಲವೂ ಅಲ್ಲಾಹನ ಸಂಪ್ರೀತಿಯಂತೆ ನಡೆಯುವ ವ್ಯಕ್ತಿಯು, ಅಲ್ಲಾಹನ ಕ್ರೋಧಕ್ಕೆ ಪಾತ್ರನಾದ ಹಾಗೂ ಅತಿ ನಿಕೃಷ್ಟ ಸ್ಥಾನವಾದ ನರಕವೇ ಅಂತಿಮ ನೆಲೆಯಾಗಿರುವ ವ್ಯಕ್ತಿಯು ಮಾಡುವಂತಹ ಕಾರ್ಯಗಳನ್ನು ಮಾಡಲು ಹೇಗೆ ಸಾಧ್ಯ?" (ಪವಿತ್ರ ಕುರ್‌ಆನ್: 3:162)

ಪುರುಷರ ಮೇಲೆ ಎಳೆದಾಡಿದ ಆರೋಪವನ್ನು ಹೊರಿಸಿ ಎದುರಾಳಿ ಪುರುಷರನ್ನು ಪೊಲೀಸರಿಂದ ಮಟ್ಟಹಾಕಬಹುದು. ಸದ್ದಡಗಿಸಬಹುದು. ಅಂತಹ ತಾಕತ್ತು ಬುರ್ಖಾಧಾರಿ ಮಹಿಳೆಯರಿಗೆ ಖಂಡಿತ ಇದೆ. ಆದರೆ ಮಾಲಿಕಿ ಯೌಮಿದ್ದೀನ್‌ನ (ನಿರ್ಣಾಯಕ ದಿನದ ಅಧಿಪತಿಯ) ಮೇಲೆ ದೃಢವಿಶ್ವಾಸವಿಟ್ಟವರು,

"ನಿಮ್ಮ ಶ್ರವಣ, ದೃಷ್ಟಿ ಮತ್ತು ಮನಸ್ಸು ಇವೆಲ್ಲವುಗಳ ವಿಚಾರಣೆ ಖಂಡಿತ ನಡೆಯಲಿದೆ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ" ಎಂಬ ಅಲ್ಲಾಹನ ಉಗ್ರ ಎಚ್ಚರಿಕೆಯನ್ನೂ ಕಡೆಗಣಿಸಬಾರದು.

ಕೊನೆಯಲ್ಲಿ, ಮುಸ್ಲಿಮ್ ಸಮುದಾಯದಲ್ಲಿ ಬಹಳಷ್ಟು ಅನಾಚಾರಗಳು, ಮೂಢನಂಬಿಕೆಗಳು ಚಾಲ್ತಿಯಲ್ಲಿವೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಸಮುದಾಯದ ಪುರೋಹಿತ ವರ್ಗ ಆಚಾರದ ಹೆಸರಲ್ಲಿ ಬಹಳಷ್ಟು ಅನಾಚಾರಗಳನ್ನು ಹೆಣೆದು ಮುಗ್ಧ ಜನಸಾಮಾನ್ಯರನ್ನು ದೋಚುತ್ತಿವೆ, ಶೋಷಿಸುತ್ತಿವೆ. ಆದರೆ ಅದನ್ನು ಮಟ್ಟಹಾಕಬೇಕಾದುದು ವಿಚಾರ ಮತ್ತು ವಿವೇಕದಿಂದ. ಅದನ್ನು ಅರಿಯಲು ಪ್ರವಾದಿವರ್ಯರ(ಸ), ಸಹಾಬಿಗಳ ಮತ್ತು ಸಜ್ಜನರ ಮಾದರಿ ಜೀವನವನ್ನು ಆಳವಾಗಿ ಅಧ್ಯಯನ ನಡೆಸಬೇಕು ಮತ್ತು ದ್ವೇಷ, ಅಜ್ಞಾನ, ಹುಚ್ಚು ಆವೇಶವನ್ನು ತೊರೆಯಲೇಬೇಕು. ಅದು ತೊರೆಯುವುದೆಂದರೆ ಸೋಲು ಅಥವಾ ಅಪಮಾನದ ಸಂಕೇತವೆಂದು ಭಾವಿಸಬಾರದು. "ಕುದಿಯುವ ನೀರಿನಲ್ಲಿ ಮುಖ ಕಾಣಿಸುವುದಿಲ್ಲ. ಕುದಿ ಯುವ ಮನಸ್ಸಿನಲ್ಲಿ ಹಿತ ಕಾಣಿಸುವುದಿಲ್ಲ" ಎಂಬುದು ಚಿಂತಕರ ಹಿತ ನುಡಿ. ನೈಜ ಸಂದೇಶ ಪ್ರಚಾರಕರ ಚಾರಿತ್ರ್ಯವದು.

ಈರ್ವರು ಪ್ರವಾದಿಗಳಾದ ಮೂಸಾ(ಅ) ಮತ್ತು ಹಾರೂನ್‌ರನ್ನು(ಅ) ಅಲ್ಲಾಹನು ತನ್ನ ಸಂದೇಶವನ್ನು ಧಿಕ್ಕಾರಿ ಮತ್ತು ವಿದ್ರೋಹಿಯಾದ ಫಿರ್‌ಔನನ ಬಳಿಗೆ ಕಳುಹಿಸಿಕೊಡುವಾಗ ಪ್ರವಾದಿಗಳೀರ್ವರಿಗೂ ಅಲ್ಲಾಹನು ಕೊಟ್ಟ ಕಂಡೀಶನ್, "ಅವನೊಂದಿಗೆ ನಯವಾಗಿ ಮಾತನಾಡಿರಿ." ಹಾಗೆ ನೀವು ಮಾತನಾಡಿದರೆ "ಅವನು ಉಪದೇಶ ಸ್ವೀಕರಿಸಬಹುದು ಅಥವಾ ಭಯಪಡಬಹುದು" (ಕುರ್‌ಆನ್: 20:44)

ಇಲ್ಲಿ ಬಹಳ ಮುಖ್ಯವಾಗಿ ನಾವು ಅರಿಯಬೇಕಾದ ಸತ್ಯವೇನೆಂದರೆ, ಫಿರ್‌ಔನ್ ಕಡಲಲ್ಲಿ ಮುಳುಗಿ ಸಾಯುವ ತನಕ ವಿಶ್ವಾಸವಿಡುವುದಿಲ್ಲ, ಒಳ್ಳೆಯವನಾಗಿ ಬದುಕುವುದಿಲ್ಲ ಎಂದು ಅಲ್ಲಾಹನಿಗೆ ಮೊದಲೇ ಗೊತ್ತಿರಲಿಲ್ಲವೇ? ಮತ್ತೇಕೆ ಈರ್ವರು ಪ್ರವಾದಿಗಳನ್ನು ಕಳುಹಿಸಿಕೊಟ್ಟು, "ನಯವಾಗಿ ಮಾತಾಡಿರಿ." ಆತ ಉಪದೇಶ ಸ್ವೀಕರಿಸಬಹುದು ಅಥವಾ ಭಯಪಡಬಹುದು ಎಂದಿದ್ದು? ಸಂದೇಶ ಪ್ರಚಾರಕರಿಗೆ ಇದರಲ್ಲಿ ಬಹಳಷ್ಟು ಪಾಠಗಳಿವೆ. ಎಂತಹ ಧಿಕ್ಕಾರಿಯಾದರೂ ನಾವು ನಿರಾಶರಾಗಬೇಕಾಗಿಲ್ಲ. ನಮ್ಮದು ಸಂದೇಶ ಮುಟ್ಟಿಸುವ ಅವಿರತ ಪ್ರಯತ್ನ ಮತ್ತು ಪ್ರಾರ್ಥನೆ ಮಾತ್ರ. ಫಲಿತಾಂಶ ನೀಡುವವನು ಅಲ್ಲಾಹನು. ಆದರೆ ನಮ್ಮ ಪ್ರಯತ್ನ ನಯ ಮತ್ತು ನೇರವಾಗಿರಬೇಕು. ವಂಚನೆ, ಕಾಪಟ್ಯ, ರಟ್ಟೆ ಬಲ, ಸುಳ್ಳು, ಆವೇಶ ಇರಲೇಬಾರದು. ಏಕೆಂದರೆ, ಕುದಿಯುವ ನೀರಿನಲ್ಲಿ ಮುಖ ಕಾಣಿಸುವುದಿಲ್ಲ...

# ಕೆಲಸ ಮಾಡಲು ಸುತ್ತೋಲೆಗೆ ಕಾಯಬೇಡಿ

**ಆಂದೋಲನದ ಹರಿಕಾರರು - 03**

**ನಿರೂಪಣೆ: ನೂರುಲ್ ಅಮೀನ್ ಪಕ್ಕಲಡ್ಕ**



ಈ ನಡುವೆ ನಿಷೇಧದ 21 ತಿಂಗಳ ಬಳಿಕ 1977ರ ಮಾರ್ಚ್‌ನಲ್ಲಿ ಇಂದಿರಾ ಗಾಂಧಿಯ ಅಕ್ರಮ ಚುನಾವಣೆ ಕುರಿತು ರಾಜ್ ನಾರಾಯಣ್ ಹಾಕಿದ್ದ ಕೇಸು ಜಯ ಪಡೆಯಿತು. ರಾಜ್ ನಾರಾಯಣ್, ಇಂದಿರಾ ಗಾಂಧಿ ವಿರುದ್ಧ ಸ್ಪರ್ಧಿಸಿದ್ದರೆ, ಇನ್ನೊಂದೆಡೆ ಜಯ ಪ್ರಕಾಶ್ ನಾರಾಯಣ್ ಉತ್ತರ ಭಾರತದಲ್ಲಿ ಸಮಾಜವಾದದ ಆಂದೋಲನ ನಡೆಸುತ್ತಿದ್ದರು. ಅದರ ಭಾರೀ ಯಶಸ್ಸಿನಿಂದ ಇಂದಿರಾ ಗಾಂಧಿಯ ಕುರ್ಚಿ ಅಲ್ಲಾಡತೊಡಗಿತು. ಪರಿಣಾಮವೇ ತುರ್ತು ಪರಿಸ್ಥಿತಿಯ ಘೋಷಣೆ, ನಿಷೇಧ ಹೇರುವಿಕೆ. ಆ ಮೂಲಕ ಇಸ್ಲಾಮೀ ಆಂದೋಲನದ ಪರಿಚಯ ಭಾರತದಾದ್ಯಂತವಾಯಿತು. ಎಲ್ಲಾ ಆಗುವುದು ಒಳ್ಳೆಯದಕ್ಕೆ ಎಂಬಂತೆ ಇದರಿಂದಾಗಿ ಜಮಾಅತ್‌ಗೆ ನಷ್ಟದ ಬದಲು ಇತರ ಎಲ್ಲಾ ಸಂಘಟನೆಗಳ ಜನರೊಂದಿಗೆ ಸಂವಹನದ ಅವಕಾಶ ದೊರಕಿತು. ಅಲ್‌ಹಮ್ದುಲಿಲ್ಲಾಹ್.

ವಿರೋಧಿಗಳ ಒಂದು ಷಡ್ಯಂತ್ರವಿತ್ತು. ನಿಷೇಧ ವಿಧಿಸಿದರೆ ಮುಸ್ಲಿಮರು ಹೆದರಿ ಈ ಆಂದೋಲನದಿಂದ ದೂರ ಸರಿಯಬಹುದೆಂದೂ, ಮುಸ್ಲಿಮೇತರರು ಇದರ ಸದಸ್ಯರನ್ನು, ಕಾರ್ಯಕರ್ತರನ್ನು ಸಂಶಯದಿಂದ ನೋಡಬಹುದೆಂದೂ ಭಾವಿಸಿದ್ದರು. ಆದರೆ ಹಾಗಾಗಲಿಲ್ಲ. ನಮ್ಮ ಜೈಲಿನ ಅವಧಿಯು ಈ ಎರಡು ತಪ್ಪು ಕಲ್ಪನೆಗಳನ್ನು ದೂರೀಕರಿಸಲು ಸಹಾಯಕವಾಯಿತು. ಈ ಎಲ್ಲಾ ಸಂಘಟನೆಗಳನ್ನು ಒಟ್ಟುಗೂಡಿಸಿ ಕಾರ್ಯಕ್ರಮ ನಡೆಸಲು ನಮಗೆ ವರ್ಷಗಟ್ಟಲೆ ಸಮಯವೂ ಬೇಕಾಗುತ್ತಿತ್ತು. ಮೇಲಾಗಿ ಇತರ ಅಡೆತಡೆಯೂ ಇತ್ತು. ಜೈಲಿನ ಬದುಕು ಇದನ್ನು ದೂರೀಕರಿಸಿತು.

ನಂತರದ್ದೆಲ್ಲವೂ ಇತಿಹಾಸ. ಇಂದಿರಾ ಗಾಂಧಿ ಸೋತರು. ನಾವು ಬೇಷರತ್ ಬಿಡುಗಡೆ ಹೊಂದಿದೆವು. ಬಳಿಕ ನಾನೂ ಪೂರ್ಣಾವಧಿ ಕಾರ್ಯಕರ್ತನಾಗಿ ಜ.ಇ. ಹಿಂದ್‌ನೊಂದಿಗೆ ಗುರುತಿಸಿ ಕೊಂಡೆ.

1977ರಿಂದ ಮೊದಲುಗೊಂಡು ಹೆಚ್ಚಿನ ಎಲ್ಲಾ ರೀತಿಯ ಜವಾಬ್ದಾರಿಕೆಯನ್ನು ನಿಭಾಯಿಸಿದ್ದೇನೆ. ಬೀದರ್‌ನಿಂದ ಮಂಗಳೂರಿನ ವರೆಗೆ ಜಮಾಅತ್ ಹೊಣೆಗಾರಿಕೆಯ ನಿಮಿತ್ತ ಸಂಚರಿಸಿದ್ದೇನೆ. ಮಂಗಳೂರಿನಿಂದ ಕನ್ನಡ ಸಾಹಿತ್ಯ ಹೊರಬರುವವರೆಗೂ ಈ ನಾಡಿನ ಜನತೆಗೆ ಇಸ್ಲಾಮೀ ವಿಚಾರಗಳು ಅಪರಿಚಿತವಾಗಿದ್ದವು ಎಂದೇ ಹೇಳಬಹುದು. ಈ ಒಂದು ಕೊರತೆಯನ್ನು ಮಂಗಳೂರಿನ ವಿಭಾಗದ ಹೆಚ್ಚಿನ ಪರಿಶ್ರಮದಿಂದ ದೂರವಾಯಿತೆನ್ನಬಹುದು. ಬೆಂಗಳೂರಿನಲ್ಲಿ ಸಮಾಜ ಸೇವೆಯನ್ನು ಮುಂದಿಟ್ಟು ಶಮಾ ಕ್ಲಿನಿಕ್, ವಿವಿಧ ಭಾಷೆಯ ಪ್ರವಚನಗಳ ಗ್ಯಾಲರಿ ನಿರ್ಮಾಣ, ಹೊಸ ರೀತಿಯ ಚಟುವಟಿಕೆಯನ್ನು ರಾಜ್ಯ ಕಾರ್ಯದರ್ಶಿಯ ಕಾಲಾವಧಿಯಲ್ಲಿ ಅಲ್ಲಾಹನು ಪೂರ್ತಿಗೊಳಿಸಿದನು.

**ಹೀಗೊಂದು ಭಿನ್ನಹ:**

ಮರೆಯಲಾಗದ ಕೆಲವೊಂದು ವ್ಯಕ್ತಿತ್ವ, ಘಟನೆಯ ಪೈಕಿ ಆಂದೋಲನದ ಕಾರ್ಯಕರ್ತರಿಗೆ ಇಖ್ವಾನುಲ್ ಮುಸ್ಲಿಮೂನ್ ಇದರ ಪ್ರತಿನಿಧಿ ಉಸ್ಮಾನ್ ಪಲೀಯವರ ಭಾರತ ಭೇಟಿಯ ಸಂದರ್ಭದ ಮಾತು ತುಂಬಾ ಪ್ರಾಧಾನ್ಯತೆಯುಳ್ಳದ್ದಾಗಿದೆ.

ಅವರು ಭಾರತದ ಇಸ್ಲಾಮೀ ಆಂದೋಲನದ ಜನರನ್ನು ಭೇಟಿಯಾದರು. ಕಛೇರಿಯನ್ನು ಸಂದರ್ಶಿಸಿದರು. ಚಟುವಟಿಕೆಯನ್ನು ವೀಕ್ಷಿಸಿದರು. ವಿಚಾರಧಾರೆಯ ಸಾಮ್ಯತೆಯ ಬಗ್ಗೆ ಸಹಮತ ವ್ಯಕ್ತಪಡಿಸಿದರು. ವೈಯಕ್ತಿಕವಾಗಿಯೂ ಕಾರ್ಯಕರ್ತರ ಸದಸ್ಯರ ಮನೆ ಮಂದಿಯ ಅವಲೋಕನ ನಡೆಸಿದರು. ಆಗ ಅವರು ಲಂಡನ್‌ನಲ್ಲಿದ್ದರು. ಅವರು ಜ.ಇ. ಹಿಂದ್ ಬಗೆಗಿನ ಒಂದು ವೀಕ್ಷಣಾ ಪ್ರವಾಸಕ್ಕಾಗಿ ಭಾರತಕ್ಕೆ ಬಂದಿದ್ದರು. ಸಾಧ್ಯವಿದ್ದಷ್ಟು ಕಾರ್ಯಕರ್ತರ, ಸದಸ್ಯರ ಮನೆ ವಠಾರ, ಸಂಘಟನಾ ಚಟುವಟಿಕೆ, ಕುಟುಂಬ, ಮಕ್ಕಳು ಎಲ್ಲದರ ವರದಿ ಪಡಕೊಂಡರು. ಹಿಂತಿರುಗುವಾಗ ಹಿರಿಯರೋರ್ವರು ಅವರಲ್ಲಿ, "ಇಖ್ವಾನ್ ಮತ್ತು ಜ.ಇ. ಹಿಂದ್ ಈ ಎರಡು ಆಂದೋಲನದ ಕಾರ್ಯಕರ್ತರ ನಡುವೆ ಏನಾದರೂ ವ್ಯತ್ಯಾಸ ತಮಗೆ ಕಂಡು ಬಂದಿದೆಯೇ?" ಎಂದು ಕೇಳಿದಾಗ ಅವರು ಹೇಳಿದ ಮಾತು ನಮ್ಮೆಲ್ಲಾ ಸದಸ್ಯ ಕಾರ್ಯಕರ್ತರ ಆತ್ಮಾವಲೋಕನಕ್ಕೆ ಪ್ರೇರಣೆಯಾದೀತೆಂದು ಭಾವಿಸುತ್ತೇನೆ. ಅವರು ಹೇಳಿದರು,

"ಇಖ್ವಾನಿಯ ಮನೆಯಲ್ಲಿ ಎಲ್ಲರೂ ಇಖ್ವಾನಿ. ಆದರೆ ಜಮಾಅತ್‌ನಲ್ಲಿ ಸದಸ್ಯ ಮಾತ್ರ ಆಂದೋಲನದೊಂದಿಗಿದ್ದಾನೆ!"

ಇದು ತುಂಬಾ ಚುಚ್ಚಿತು. ಮನೆ ಕುಟುಂಬಕ್ಕೆ ಸ್ವಲ್ಪ ಸಮಯವನ್ನು ಮೀಸಲಿರಿಸಿದೆ. ಅಲ್ಲಾಹನಿಗೆ ಸ್ತುತಿ. ಈಗ ಇಡೀ ಕುಟುಂಬ ಮಗಳು, ಮಗ, ಸೊಸೆ, ಅಳಿಯ, ಅಣ್ಣ-ತಮ್ಮ, ಅಕ್ಕ-ತಂಗಿ, ತಂದೆ-ತಾಯಿ, ಅಜ್ಜ ಇವರನ್ನೆಲ್ಲಾ ಒಳಗೊಂಡ ಒಂದು ಸಂಪೂರ್ಣ ಕುಟುಂಬವೇ ಆಂದೋಲನದೊಂದಿಗೆ ಗುರುತಿಸಿಕೊಳ್ಳುತ್ತಿದೆ.

**ಹೀಗೆಂದೂ ಆಗಬಾರದು:**

ಸುತ್ತೋಲೆಯನ್ನು (ಸರ್ಕ್ಯೂಲರ್) ಕಾದು ಕೆಲಸ ಮಾಡುವಂತಾಗಬಾರದು. ಫಾರ್ಮಾಲಿಟೀಸ್ ಇರಬೇಕು. ಆದರೆ ಅತಿಯಾಗಿರಬಾರದು. ಆತ್ಮೀಯ ಬಂಧ ಅತಿಯಾಗಬೇಕು. ನಾನಿದ್ದೇನೆ, ನನ್ನ ದೇಹವಿಲ್ಲ ಎಂದಾಗಬಾರದು. ಭಾಷಣವಿದೆ, ಜೀವನವಿಲ್ಲವೆಂದಾಗಬಾರದು. ಇಸ್ಲಾಮಿನ ಬಗ್ಗೆ ಹೆಚ್ಚು ತಿಳಿದಿದ್ದೇನೆ, ಮಾತನಾಡುತ್ತೇನೆ. ಆದರೆ ಅಲ್ಲಾಹನ ಸಂಪರ್ಕ ಕಡಿಮೆಯಿರಬಾರದು. ಅದೂ ಹೆಚ್ಚಿರಬೇಕು. ತಸವ್ವುಫ್ (ಅನುಭೂತಿ) ಇಸ್ಲಾಮೀ ಕಾರ್ಯಕರ್ತರಿಗೆ ಅತೀ ಅಗತ್ಯ. ಸಾಮೂಹಿಕ ಸಂಸ್ಕರಣೆಗೆ ಒತ್ತು ಕೊಡಬೇಕು. ನಿವೃತ್ತಿಯೆಂಬುದು ಇರಲೇ ಬಾರದು! ನಮ್ಮ ಕುಟುಂಬಕ್ಕೆ ಮಕ್ಕಳು ಮರಿಗಳಿಗೆ ಈ ಆಯತನ್ನು ಆಗಾಗ ಓದಿ ಕುರ್‌ಆನ್ ಪ್ರವಚನ ನೀಡುತ್ತಿರಬೇಕು,

'ಯಾ ಅಯ್ಯುಹಲ್ಲಧೀನ ಆಮನೂ ಕೂಅ್ ಅಂಫುಸಿಕುಂ ವಅಹ್‌ಲೀಕುಮ್ ನಾರನ್' (ಸತ್ಯ ವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ರಕ್ಷಿಸಿಕೊಳ್ಳಿರಿ.)

ಮನೆ ಮಂದಿ, ಕುಟುಂಬ, ನೆರೆಹೊರೆ, ಸಮುದಾಯ, ಸಮಾಜ ಈ ರೀತಿಯಾಗಿ ಆಂದೋಲನವನ್ನು ಮುಂದಕ್ಕೊಯ್ಯಬೇಕು.

ವಾರದ ಸಭೆ ಮುಖ್ಯ ಉದ್ದೇಶವಾಗಬಾರದು. ಮುಖ್ಯ ಉದ್ದೇಶಕ್ಕೆ ಕೆಲಸ ಮಾಡಲು ಪೂರಕವಾಗಬೇಕಷ್ಟೇ. ಖಂಡಿತಾ ಭವಿಷ್ಯದಲ್ಲಿ ಸಚ್ಚಾರಿತ್ರ್ಯದ ಸಮಾಜ ನಿರ್ಮಾಣಕ್ಕೆ ಜನರು ಒಲವು ತೋರಬಹುದು. ಆವರಲ್ಲೂ ಸತ್ಯ ಸಂದೇಶ ಪ್ರಚಾರದ ವೇಗ ಹೆಚ್ಚಾಗಬೇಕಾಗಿದೆ.

**ಕುಟುಂಬ:** ಮೂವರು ಪುತ್ರರು, ಇಬ್ಬರು ಪುತ್ರಿಯರು. ಪೂರ್ಣ ಕುಟುಂಬ ಆಂದೋಲನದ ವಿವಿಧ ರಂಗದಲ್ಲಿ ತನ್ನನ್ನು ಗುರುತಿಸಿಕೊಂಡಿದೆ. ಮನೆಯಲ್ಲಿ ವಾರದ ತರಬೇತಿ, ಸಂಸ್ಕರಣೆ ನಡೆಯುತ್ತಿದೆ. ವೈಯಕ್ತಿಕ ಆವಲೋಕನ, ಕುಟುಂಬ ಅವಲೋಕನ ನಡೆಯುತ್ತಿದೆ. ಸಂಸ್ಕರಣೆಗಾಗಿ ತಹಜ್ಜುದ್, ಸುನ್ನತ್, ಶಿಷ್ಟಾಚಾರ ಪಾಲನೆಗೆ ಒತ್ತು ಕೊಡಲಾಗುತ್ತಿದೆ. "ನಹ್ನು ಔಲಿಯಾಉಕುಂ ಫಿಲ್ ಹಯಾತಿದ್ದುನ್‌ಯಾ ವಫಿಲ್ ಆಖಿರಾ" (ನಾವು ಈ ಭೂಮಿಯಲ್ಲೂ ನಿಮ್ಮ ಸಂಗಾತಿಯಾಗಿದ್ದೇವೆ. ಪರಲೋಕದಲ್ಲೂ ನಿಮ್ಮ ಸಂಗಾತಿಯಾಗಿರುತ್ತೇವೆ) ಸೃಷ್ಟಿಕರ್ತನ ಈ ವಾಗ್ದಾನದಲ್ಲಿ ಸಂಪೂರ್ಣ ವಿಶ್ವಾಸ ಮಾತ್ರವಲ್ಲ, ಇಹಲೋಕದ ಮಟ್ಟಿಗೆ ಆ ಆಧ್ಯಾತ್ಮಿಕ ಅನುಭೂತಿ ಅನುಭವಿಸಿದ್ದೇನೆ!

(ಮುಗಿಯಿತು)

## ಯಾಕೆ ನಾನು?

ಆರ್ಥರ್ ಆ್ಯಶ್, ಟೆನಿಸ್ ಜಗತ್ತಿನ ಪ್ರಖ್ಯಾತ ತಾರೆ. ಜಗತ್ತಿನಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಅವರಿಗೆ 1983ರಲ್ಲಿ ಹೃದಯ ಚಿಕಿತ್ಸೆ ನಡೆಸಿದಾಗ ನೀಡಲಾದ ರಕ್ತದಿಂದಾಗಿ ಏಡ್ಸ್ ರೋಗ ತಗಲಿತು.

ಜೀವನ್ಮರಣದ ಹೋರಾಟದಲ್ಲಿದ್ದಾಗ ಅವರಿಗೆ ಜಗತ್ತಿನಾದ್ಯಂತ ಅಭಿಮಾನಿ ಬಳಗದಿಂದ ಅನೇಕ ಪತ್ರಗಳು ಬಂದವು. ಅದರಲ್ಲಿ ಒಬ್ಬ ಅಭಿಮಾನಿ ಹೀಗೆ ಬರೆದಿದ್ದ, "ಜಗತ್ತಿನಲ್ಲಿ ಕೋಟಿಗಟ್ಟಲೆ ಜನರಿರುವಾಗ ಭಗವಂತ ಯಾಕೆ ನಿಮ್ಮನ್ನೇ ಈ ಮಾರಕ ರೋಗಕ್ಕಾಗಿ ಆರಿಸಿದ?"

ಅದಕ್ಕೆ ಆರ್ಥರ್ ಉತ್ತರಿಸಿದರು, "ಜಗತ್ತಿನಲ್ಲಿ 5 ಕೋಟಿ ಮಕ್ಕಳು ಟೆನಿಸ್ ಆಡಲು ಪ್ರಾರಂಭಿಸುತ್ತಾರೆ. ಅದರಲ್ಲಿ 50 ಲಕ್ಷ ಜನರು ಟೆನಿಸನ್ನು ಆಡಲು ಕಲಿಯುತ್ತಾರೆ. 5 ಲಕ್ಷ ಜನರು ಪ್ರೊಫೆಶನಲ್ ಟೆನಿಸ್ ಆಡುತ್ತಾರೆ. 50 ಸಾವಿರ ಜನರು ಅದರಲ್ಲಿ ಮುಂದುವರಿಯುತ್ತಾರೆ. 5 ಸಾವಿರ ಜನರು ಗ್ರಾಂಡ್‌ಸ್ಲಾಮ್ ಮುಟ್ಟುತ್ತಾರೆ. 50 ಜನ ವಿಂಬಲ್ಡನ್ (ಟೆನಿಸ್‌ನ ಅತ್ಯುನ್ನತ ಕಪ್) ಮುಟ್ಟುತ್ತಾರೆ. 4 ಜನರು ಮಾತ್ರ ಅದರಲ್ಲಿ ಸೆಮಿ ಫೈನಲ್‌ಗೆ ತಲುಪುತ್ತಾರೆ. ಅದರಲ್ಲಿ ಇಬ್ಬರು ಫೈನಲ್‌ನಲ್ಲಿ ಆಡುತ್ತಾರೆ. ಆ ಇಬ್ಬರಲ್ಲಿ ಜಯಗಳಿಸಿ ಕಪ್ ಅನ್ನು ಎತ್ತಿ ಹಿಡಿದಿದ್ದಾಗ ನಾನು ದೇವನಲ್ಲಿ ಕೇಳಲಿಲ್ಲ, "ಯಾಕೆ ನಾನು?" ಎಂದು.

ಮಾನವನ ಪ್ರವೃತ್ತಿಯೇ ಹೀಗೆ. ಸಂತೋಷ ಸಿಕ್ಕಿದಾಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವ ಮನಸ್ಸು ಬಹಳ ಕಡಿಮೆ. ಹಾಗೆಯೇ ಕಷ್ಟದ ಸಮಯದಲ್ಲಂತೂ 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳುವ ಮನಸ್ಸಂತೂ ಇನ್ನೂ ಕಡಿಮೆ. ನಿಮ್ಮನ್ನು ಸಂಪತ್ತು, ಸಂತಾನ, ಮಾನಹಾನಿ, ಧನಹಾನಿಗಳಿಂದ ಪರೀಕ್ಷೆ ನಡೆಸುವೆನೆಂದು ಅಲ್ಲಾಹನು ಹೇಳಿದ್ದರೂ ನಾವು ಸ್ವಲ್ಪ ಕಷ್ಟ ಬಂದರೆ ವಿಚಲಿತರಾಗುತ್ತೇವೆ. ಅಂದು, ನನಗೇ ಯಾಕೆ ಹೀಗಾಗುವುದು ಎಂದು ಅಲ್ಲಾಹನಲ್ಲಿ ಕೇಳುತ್ತೇವೆ. ಈಮಾನ್ ತುಂಬಿದ ಹೃದಯವು ಎಂದೂ ಯಾವುದೇ ಕಷ್ಟ ಬಂದರೂ ವಿಚಲಿತವಾಗದೆ



ಎಲ್ಲದಕ್ಕೂ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳುತ್ತದೆ. ಯಾಕೆಂದರೆ ಎಲ್ಲ ಕಷ್ಟನಷ್ಟಗಳೂ ಅಲ್ಲಾಹನಿಂದಲೇ ಸಂಭವಿಸುವುದು ಎಂಬ ಅಚಂಚಲ ವಿಶ್ವಾಸ ಈಮಾನ್ ತುಂಬಿದ ಹೃದಯಕ್ಕಿರುತ್ತದೆ.

ನನ್ನೊಬ್ಬ ಗಲ್ಫ್ ಮಿತ್ರ ಒಮ್ಮೆ ಒಂದು ಘಟನೆಯನ್ನು ಹೇಳಿದ್ದ. ಆತನ ಚಿಕ್ಕಪ್ಪನ ಮಗ ಸರಕಾರಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ. ಆರ್ಥಿಕವಾಗಿಯೂ ಉತ್ತಮ ಸ್ಥಿತಿಯಲ್ಲಿದ್ದ. ಆತ ಒಬ್ಬ ಯಮನಿಯೊಂದಿಗೆ ಪಾಲುದಾರಿಕೆಯಲ್ಲಿ ವ್ಯಾಪಾರ ಮಾಡುತ್ತಿದ್ದ. ಆ ವ್ಯಾಪಾರದಲ್ಲಿ ಆತನ ಪಾಲುದಾರಿಕೆ 20% ಮಾತ್ರ. ಬಾಕಿ 80% ಪಾಲುದಾರಿಕೆ ಯಮನಿಯದ್ದು. ಅಂದರೆ ಆ ಯಮನಿ ತನ್ನ ಎಲ್ಲ ಸಂಪತ್ತನ್ನು ಆ ವ್ಯಾಪಾರದಲ್ಲಿ ಹಾಕಿದ್ದ. ಒಂದು ರಾತ್ರಿ ನನ್ನ ಮಿತ್ರನಿಗೆ ಆತನ ಚಿಕ್ಕಪ್ಪನ ಮಗ ಫೋನ್ ಮಾಡಿ ಗಾಬರಿಯಿಂದ, ಅವರು ವ್ಯಾಪಾರ ಮಾಡುತ್ತಿದ್ದ ಗೋದಾಮಿಗೆ ಬೆಂಕಿ ತಗಲಿದೆಯೆಂದು ಹೇಳಿದ. ಅವರಿಬ್ಬರು ಗೋದಾಮಿನ ಹತ್ತಿರ ಹೋದಾಗ ನೋಡುವುದೇನು? ಸಂಪೂರ್ಣವಾಗಿ ಭಸ್ಮವಾಗಿತ್ತು. ಇದನ್ನು ನೋಡಿ ನನ್ನ ಮಿತ್ರನ ಚಿಕ್ಕಪ್ಪನ ಮಗನ ಹೃದಯದೊತ್ತಡ ಜಾಸ್ತಿಯಾಗಿ ಅಲ್ಲೇ ಕುಸಿದು ಬಿದ್ದ. ಆತನನ್ನು ಆಗಲೇ ಆಸ್ಪತ್ರೆಗೆ ದಾಖಲಿಸಲಾಯಿತು. 20% ಪಾಲುದಾರಿಕೆಯಿರುವ ಈತನ ಅವಸ್ಥೆಯೇ ಹೀಗಾದಾಗ 80% ಪಾಲಿರುವ ಯಮನಿಯ ಅವಸ್ಥೆ ಏನಾಗಿರಬಹುದು? ನನ್ನ ಮಿತ್ರ ಯಮನಿಯೆಡೆಗೆ ದೃಷ್ಟಿ ಬೀರಿದ. ಆತ ತನ್ನ ಹತ್ತಿರ ನಿಂತವರೊಂದಿಗೆ ಮಾತನಾಡುತ್ತಾ, ನಗೆ ಬೀರುತ್ತಿದ್ದ. ನನ್ನ ಮಿತ್ರ ಭಾವಿಸಿದ, ಈತ ಈ ಶಾಕ್‌ನಿಂದಾಗಿ ಮಾನಸಿಕ ಅಸ್ವಸ್ಥನಾಗಿ ನಗಾಡುತ್ತಿದ್ದಾನೆಂದು. ಆದರೆ ಆತನ ಹತ್ತಿರ ಹೋದಾಗ ಆ ಯಮನಿ ಈತನೊಂದಿಗೆ ಹೇಳಿದ, "ನಿನ್ನ ತಮ್ಮ ಯಾಕೆ ಹೀಗಾದ? ಸುಮ್ಮನೆ ತಲೆಬಿಸಿ ಮಾಡಿ ಆಸ್ಪತ್ರೆ ದಾಖಲಾದ. ಇದರಿಂದ ಏನಾದರೂ ಪ್ರಯೋಜನ ಏದೆಯೇ? ಅಲ್ಲಾಹನು ಕೊಟ್ಟದ್ದು. ಅವನೇ ಹಿಂದಿರುಗಿ ತೆಗೆದ. ಇನ್‌ಶಾ ಅಲ್ಲಾಹ್ ಅವನಿಚ್ಛಿಸಿದರೆ ಮುಂದೆ ಇನ್ನೂ ಕೊಡುವನು." ನನ್ನ ಮಿತ್ರ ಹೇಳುತ್ತಾನೆ, ಆತ 2-3 ವರ್ಷಗಳ ನಂತರ ಮತ್ತೊಮ್ಮೆ ಆ ಯಮನಿಯನ್ನು ಭೇಟಿಯಾದ. ಆತ ಅದೇ ವ್ಯಾಪಾರದಲ್ಲಿ ಮತ್ತೆ ತೊಡಗಿದ್ದ ಹಾಗೂ ಮುಂಚಿನ ಹಾಗಿಲ್ಲದಿದ್ದರೂ ಆತನ ವ್ಯಾಪಾರ ತುಂಬ ಅಭಿವೃದ್ಧಿ ಹೊಂದಿತ್ತು. ಆರ್ಥಿಕವಾಗಿಯೂ ಉತ್ತಮ ಸ್ಥಿತಿಯಲ್ಲಿದ್ದ. ಅಲ್ಲಾಹನ ಮೇಲಿನ ಅಚಂಚಲ ವಿಶ್ವಾಸವಿರುವವರನ್ನು ಹಾಗೂ ಯಾವುದೇ ಸಂಕಷ್ಟ ಬಂದರೂ ವಿಚಲಿತರಾಗದಿರುವವರನ್ನು ಅಲ್ಲಾಹನು ಖಂಡಿತವಾಗಿಯೂ ಕೈಬಿಡಲಾರ. ಪರೀಕ್ಷಾ ಕೊಠಡಿಯಲ್ಲಿನ ಮೂರು ಗಂಟೆಗಳಲ್ಲಿ ನಾವು ನಿರಂತರವಾಗಿ ಪ್ರಶ್ನೆಗಳಿಗೆ ಉತ್ತರಿಸುವ ಹಾಗೆಯೇ ಜೀವನವೆಂಬ ಪರೀಕ್ಷೆಯಲ್ಲಿ ಅನೇಕ ಪ್ರಶ್ನೆಗಳನ್ನು ನಾವು ಉತ್ತರಿಸಬೇಕಾಗಿದೆ. "ಅಲ್ಲಾಹನು ಕೊಡುವುದನ್ನು ತಡೆಯುವವರಿಲ್ಲ. ಅಲ್ಲಾಹನು ತಡೆಯುವುದನ್ನು ಕೊಡುವವರಿಲ್ಲ" ಎಂಬ ದುಆವನ್ನು ಜೀವನದಲ್ಲಿ ಅಳವಡಿಸಿದರೆ ಮನಸ್ಸು ಎಂದೂ "ಯಾಕೆ ನಾನು?" ಎಂಬ ಪ್ರಶ್ನೆಯನ್ನು ಅಲ್ಲಾಹನೊಂದಿಗೆ ಖಂಡಿತವಾಗಿಯೂ ಕೇಳದು ಹಾಗೂ ಎಲ್ಲದಕ್ಕೂ 'ಅಲ್‌ಹಮ್ದುಲಿಲ್ಲಾಹ್' ಎಂದು ಬಾಯಿಂದ ತನ್ನಿಂತಾನೇ ಹೊರಡುವುದು.

■ ಅಬೂರ್ಝೀಶಾನ್, ರಿಯಾದ್

# ಮಹಿಳೆಯ ಮಸೀದಿ ಪ್ರವೇಶ?

— ಮುನ್ನ ಇಳಂತಿಲ

● ವಾರಗಳ ಹಿಂದೆ ಮಂಗಳೂರಿನಲ್ಲಿ ಮಹಿಳೆಯರ ಮಸೀದಿ ಪ್ರವೇಶವು ಮಾಧ್ಯಮ ಸುದ್ದಿಯಾಯಿತು. ಘರ್ಷಣೆಗೂ ಕಾರಣವಾಯಿತು. ಒಂದು ಗುಂಪು ಮಹಿಳೆಯ ಮಸೀದಿ ಪ್ರವೇಶವನ್ನು ಬಲವಾಗಿ ವಿರೋಧಿಸುವುದಕ್ಕೂ ಇನ್ನೊಂದು ವಿಭಾಗ ಕಡ್ಡಾಯವಾಗಿ ಮಸೀದಿಗೆ ಅವರನ್ನು ಕರಕೊಂಡು ಬರುವುದಕ್ಕೂ ಇರುವ ಆಧಾರ ಪ್ರಮಾಣಗಳೇನು? ಹದೀಸ್-ಕುರ್‌ಆನ್ ಈ ಬಗ್ಗೆ ಏನು ಹೇಳುತ್ತದೆ?

❍ ಇಸ್ಲಾಮಿನಲ್ಲಿ ನಮಾಝ್ ಎಲ್ಲ ಸ್ತ್ರೀ-ಪುರುಷರಿಗೂ ಕಡ್ಡಾಯವಾಗಿದೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಮಾಝ್ ಜಮಾಅತ್ ಸಹಿತ ನಿರ್ವಹಿಸುವುದು ಶ್ರೇಷ್ಠವಾಗಿದೆ. ಏಕೆಂದರೆ ಜಮಾಅತ್ (ಸಾಮೂಹಿಕ) ಆಗಿ ಮಾಡುವ ನಮಾಝ್‌ನ ಪುಣ್ಯ ಒಂಟಿಯಾಗಿ ನಮಾಝ್ ಮಾಡುವುದಕ್ಕಿಂತ 27 ಪಟ್ಟು ಹೆಚ್ಚಾಗಿದೆ ಎಂದು ಪ್ರವಾದಿ(ಸ) ಹೇಳಿದ್ದಾರೆ.

ಆದರೆ ನಮಾಝ್‌ನ ವಿಧಿಗಳಲ್ಲಿ ಸ್ತ್ರೀ-ಪುರುಷರ ಮಧ್ಯೆ ಸ್ವಲ್ಪ ವ್ಯತ್ಯಾಸವಿದೆ. ಸ್ತ್ರೀಯರಿಗೆ ಕೆಲವು ರಿಯಾಯತಿಗಳನ್ನು ಶರೀಅತ್ ಕೊಡಮಾಡಿದೆ. ಅವರಿಗೆ ಮುಟ್ಟು, ಬಾಣಂತನ (ಹೈಳ್, ನಿಫಾಸ್)ಗಳ ವೇಳೆಯ ನಮಾಝ್ ಸಂಪೂರ್ಣ ಮನ್ನಾ ಆಗಿದೆ. ಅವರು ಅದನ್ನು ಕಝಾ ನಿರ್ವಹಿಸಬೇಕೆಂದಿಲ್ಲ. (ಹಾಗೆಯೇ ಅವರು ಉಪವಾಸ ವ್ರತ ಕೂಡಾ ಈ ಸಂದರ್ಭಗಳಲ್ಲಿ ಮಾಡಬೇಕಾಗಿಲ್ಲವಾದರೂ ಅದನ್ನು ಅನಂತರ ಕಝಾ ಮಾಡಬೇಕು)

ಮಸೀದಿಗಳು ಮುಸ್ಲಿಮರ ಏಕತೆ ಮತ್ತು ಸೌಹಾರ್ದತೆಯನ್ನು ವ್ಯಕ್ತಪಡಿಸುವ ಕೇಂದ್ರಗಳಾಗಿವೆ. ಅದರ ಗೌರವ-ಪಾವಿತ್ರ್ಯವನ್ನು ಕಾಪಾಡುವುದು ಎಲ್ಲರ ಕರ್ತವ್ಯವಾಗಿದೆ. ಆದರೆ ಇಂದು ಮಸೀದಿಗಳು ಬಿಕ್ಕಟ್ಟು, ಗಲಭೆ, ಗೊಂದಲಗಳ ತಾಣಗಳಾಗಿ ಮಾರ್ಪಡುತ್ತಿರುವುದು ಸಮುದಾಯದ ದುರಂತವೆನ್ನದೆ ನಿರ್ವಾಹವಿಲ್ಲ. ಮಸೀದಿಗಳು ಮುಸ್ಲಿಮ್ ಸ್ತ್ರೀ-ಪುರುಷರೆಲ್ಲರಿಗೂ ನಮಾಝ್ ನಿರ್ವಹಿಸಬಹುದಾದ ಸ್ಥಳವಾಗಿದೆ. ಪ್ರವಾದಿಯವರ(ಸ) ಕಾಲದಲ್ಲೂ ಅನಂತರದ ಕಾಲದಲ್ಲೂ ಸ್ತ್ರೀಯರು ಮಸೀದಿಗೆ ಬಂದು ನಮಾಝ್ ನಿರ್ವಹಿಸುತ್ತಿದ್ದರು. ನಮಾಝ್‌ನಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ವಿಧಿಗಳನ್ನು ಮದ್ರಸಾ ಪಾಠ ಪುಸ್ತಕಗಳಲ್ಲಿ ಈಗಲೂ ಕಲಿಸಲಾಗುತ್ತಿದೆ.

ಆದರೆ ಇಂದು ಸ್ತ್ರೀಯರ ಮಸೀದಿ ಪ್ರವೇಶದ ಕುರಿತು ಸಮುದಾಯದಲ್ಲಿ ಎರಡು ಅತಿರೇಕಗಳನ್ನು ಕಾಣಬಹುದು. ಒಂದು ವರ್ಗದ ದೃಷ್ಟಿಯಲ್ಲಿ ಸ್ತ್ರೀಯರು ಮಸೀದಿ ಪ್ರವೇಶಿಸುವುದು ಹರಾಮ್ ಆಗಿದೆ. ಮಸೀದಿಗೆ ಬರುವ ಮಹಿಳೆಯರನ್ನು ಯಾವ ಬೆಲೆ ತೆತ್ತಾದರೂ ತಡೆಯಲು ಅವರು ಪ್ರಯತ್ನಿಸುತ್ತಾರೆ. ಸ್ತ್ರೀಯರಿಗೆ ಮಸೀದಿ ಪ್ರವೇಶ ಹರಾಮ್ ಎಂಬುದನ್ನು ಅವರು ಘಂಟಾ ಘೋಷವಾಗಿ ಪ್ರಚಾರ ಮಾಡುತ್ತಾರೆ. ತಮ್ಮ ಭಾಷಣ ಪ್ರವಚನಗಳಲ್ಲಿಯೂ ಮಾಧ್ಯಮ (ಮುದ್ರಣ, ದೃಶ್ಯ)ಗಳ ಮೂಲಕವೂ ಅವರು ಅದನ್ನು ವ್ಯಾಪಕವಾಗಿ ಪ್ರಚುರಪಡಿಸುತ್ತಾರೆ. ಆದರೆ ಈ ಮಂದಿಗೆ ಮಹಿಳೆಯರು ಪೇಟೆಗಳಲ್ಲಿ ಸುತ್ತಾಡುವುದು, ಉರೂಸ್-ಜಾತ್ರೆಗಳಿಗೆ ಹೋಗುವುದು, ಸಿನೆಮಾ- ಸರ್ಕಸ್‌ಗಳಿಗೆ ಹೋಗುವುದು ಆಕ್ಷೇಪಾರ್ಹವೇ ಅಲ್ಲ.

**ಕೇಳಿದಿರಾ? ಕೇಳಿ**
**ಮುಜೀಬ್**

ಹಾಗೆಯೇ ಇನ್ನೊಂದು ವರ್ಗಕ್ಕೆ ಮಹಿಳೆಯರ ಮಸೀದಿ ಪ್ರವೇಶ ಫರ್ಝ್ ಆಗಿದೆ. ಮಹಿಳೆಯರನ್ನು ಮಸೀದಿಗೆ ಕರೆತರಲೇ ಬೇಕು, ಕಳಿಸಲೇ ಬೇಕು ಎಂಬಂತೆ ಅವರು ಪ್ರಯತ್ನಿಸುತ್ತಾರೆ. ಅದಕ್ಕಾಗಿ ಅವರು ವ್ಯಾಪಕ ಪ್ರಚಾರವನ್ನೂ ಮಾಡುತ್ತಾರೆ. ಮಹಿಳೆಯರನ್ನು ಬಲವಂತವಾಗಿ ಮಸೀದಿಗೆ ತರುವ ವಿಷಯದಲ್ಲಿ ಯಾವ ಮಟ್ಟಕ್ಕೂ ಇಳಿಯಲು ಹೇಸುವುದಿಲ್ಲ.

ಆದರೆ ಮಹಿಳೆಯರ ಮಸೀದಿ ಪ್ರವೇಶದ ಕುರಿತು ಶರೀಅತ್‌ನ ನಿಲುವೇನು ಎಂಬುದನ್ನು ನೋಡಬೇಕಾಗಿದೆ. ಇಸ್ಲಾಮ್ ಮಹಿಳೆಯರಿಗೆ ಮಸೀದಿಯನ್ನು ಹರಾಮ್‌ಗೊಳಿಸಲೂ ಇಲ್ಲ, ಫರ್ಝ್ ಮಾಡಿಯೂ ಇಲ್ಲ. ಅದರ ನಿಲುವು ಅತ್ಯಂತ ಸಂತುಲಿತವಾಗಿದೆ.

ಪ್ರವಾದಿ(ಸ) ಹೇಳಿದರೆಂದು ಅಬ್ದುಲ್ಲಾ ಬಿನ್ ಉಮರ್ ವರದಿ ಮಾಡುತ್ತಾರೆ, "ನಿಮ್ಮ ಮಹಿಳೆಯರು ನಿಮ್ಮೊಂದಿಗೆ ಮಸೀದಿಗೆ ಹೋಗಲು ಅನುಮತಿ ಕೇಳಿದರೆ, ಅವರನ್ನು ತಡೆಯಬೇಡಿರಿ." (ಮುಸ್ಲಿಮ್)

ಇನ್ನೊಂದು ವರದಿಯಲ್ಲಿ ಹೀಗಿದೆ, "ಮಹಿಳೆಯರು ಮಸೀದಿಗಳಿಂದ ಅವರ ಹಕ್ಕನ್ನು ಪಡೆಯುವುದರಿಂದ ತಡೆಯದಿರಿ."

ಉಮ್ಮು ಅತಿಯ್ಯಾ ಹೇಳುತ್ತಾರೆ- ಪ್ರವಾದಿ(ಸ) ಮದೀನಕ್ಕೆ ಬಂದಾಗ ನಮ್ಮನ್ನು (ಅನ್ಸಾರರ ಮಹಿಳೆಯರನ್ನು) ಒಂದು ಮನೆಯಲ್ಲಿ ಸೇರಿಸಿದರು. ನಮಗೆ ಉಪದೇಶ ನೀಡಲು ಉಮರ್ ಬಿನ್ ಖತ್ತಾಬ್‌ರನ್ನು ಕಳಿಸಿದರು. ಅವರು ಬಾಗಿಲ ಬಳಿ ಬಂದು ನಿಂತು ಸಲಾಮ್ ಹೇಳಿದರು. ನಾವು ಸಲಾಮ್‌ಗೆ ಉತ್ತರಿಸಿದಾಗ ಹೀಗೆಂದರು, ನಾನು ಪ್ರವಾದಿಯವರ ಪ್ರತಿನಿಧಿಯಾಗಿ ಬಂದಿರುವೆನು. ಈದ್‌ನ ದಿವಸ ಯುವತಿಯರನ್ನು ಮತ್ತು ಮುಟ್ಟಾದ ಸ್ತ್ರೀಯರನ್ನು ಕರೆ ತರುವಂತೆ ನಿಮಗೆ ಆದೇಶಿಸಿದ್ದಾರೆ. ಜುಮಾ ನಮ್ಮ ಮೇಲೆ ಕಡ್ಡಾಯವಲ್ಲ, ಜನಾಝಾ ಯಾತ್ರೆಯಲ್ಲಿ ನಾವು ಭಾಗವಹಿಸಬಾರದೆಂದು ಆಜ್ಞಾಪಿಸಿರುವುದಾಗಿ ಹೇಳಿದರು. (ಅಬೂ ದಾವೂದ್, ನಸಾಈ)

ಜೊತೆಗೆ, ಮಹಿಳೆಯರಿಗೆ ಮಸೀದಿಯಲ್ಲಿ ನಮಾಝ್ ಮಾಡುವುದಕ್ಕಿಂತ ಮನೆಯಲ್ಲಿ ನಮಾಝ್ ಮಾಡುವುದು ಶ್ರೇಷ್ಠವೆಂದು ಕೂಡಾ ಪ್ರವಾದಿ(ಸ) ಹೇಳಿದ್ದಾರೆ.

ಉಮ್ಮು ಹುಮೈದ್ ಸಾಇದೀ ಹೇಳುತ್ತಾರೆ- ನಾನು ಪ್ರವಾದಿಯವರಲ್ಲಿ ಹೇಳಿದೆ, "ನನಗೆ ತಮ್ಮ ಜೊತೆಯಲ್ಲಿ ನಮಾಝ್ ಮಾಡಲು ತೀವ್ರ ಆಸಕ್ತಿಯಿದೆ." ಪ್ರವಾದಿ(ಸ) ಹೇಳಿದರು, "ನನಗೆ ನಿನ್ನ ಆಸಕ್ತಿ ಅರ್ಥವಾಗುತ್ತದೆ. ಆದರೆ ನೀನು ನಿನ್ನ ಒಳ ಕೊಠಡಿಯಲ್ಲಿ ನಮಾಝ್ ಮಾಡುವುದು ಅಂಗಣದಲ್ಲಿ ನಮಾಝ್ ಮಾಡುವುದಕ್ಕಿಂತ ಉತ್ತಮ. ನಿನ್ನ ಮನೆಯಲ್ಲಿ ನಮಾಝ್ ಮಾಡುವುದು ಕೇರಿಯ ಮಸೀದಿಯಲ್ಲಿ ನಮಾಝ್ ಮಾಡುವುದಕ್ಕಿಂತ ಉತ್ತಮ." (ಅಹ್ಮದ್, ತಬ್ರಾನಿ)

ಒಟ್ಟಿನಲ್ಲಿ ಮಹಿಳೆಯರ ಮಸೀದಿ ಪ್ರವೇಶದ ಕುರಿತು ಎರಡೂ ಅತಿರೇಕಗಳೂ ಅಪಾಯಕಾರಿಯಾಗಿವೆ. ಯಾರೂ ಅವರನ್ನು ಬಲವಂತವಾಗಿ ತಡೆಯುವಂತಿಲ್ಲ. ಬಲವಂತವಾಗಿ ಮಸೀದಿಗೆ ಕರೆತರುವಂತೆಯೂ ಇಲ್ಲ. ಇದು ಸಂಪೂರ್ಣ ಐಚ್ಛಿಕ ಮತ್ತು ಅವರ ಆಯ್ಕೆಗೆ ಬಿಟ್ಟ ವಿಷಯ. ಈ ರೀತಿಯ ಮಧ್ಯಮ ನಿಲುವಿನಿಂದ ಸಮುದಾಯದಲ್ಲಿ ಶಾಂತಿ-ನೆಮ್ಮದಿ ನೆಲೆಸೀತೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಮಹಿಳೆಯರಿಗೆ ಜುಮಾ ಜಮಾಅತ್‌ಗಳು ಕಡ್ಡಾಯವಲ್ಲದಿದ್ದರೂ ನಮಾಝ್ ಸಮಯಕ್ಕೆ ಸರಿಯಾಗಿ ನಿರ್ವಹಸುವುದು ಕಡ್ಡಾಯವಾಗಿದೆ. ಆದ್ದರಿಂದ ಮನೆಯಿಂದ ದೂರ ಉದ್ಯೋಗದಲ್ಲಿರುವ ಮತ್ತು ಪ್ರಯಾಣದಲ್ಲಿರುವ ಮಹಿಳೆಯರಿಗಾಗಿ ಮಸೀದಿಗಳ ಆಡಳಿತದವರು ನಮಾಝ್‌ಗಾಗಿ ಸೌಕರ್ಯ ಉಂಟು ಮಾಡಿ ಕೊಡುವುದು ಉತ್ತಮ.

# ಮೌಲಾನಾ ಕಾಲಮ್ — ನೂತನವಾದಿಗೆ ಸಲಾಮ್ –4



ಮೌಲಾನ ಯಹ್ಯಾ ತಂಙಳ್ ಮದನಿ

**ನೂ**ತನವಾದಿಗಳು ಯಾರೆಂಬುದನ್ನು ತಿಳಿಯೋಣ. ಅಬ್ದುಲ್ಲಾಹ್ ಬಿನ್ ಅಮ್ರ್‌ರಿಂದ ವರದಿ. ಶಹಾದತ್ ಕಲಿಮ ಉಚ್ಚರಿಸಿದ 71 ಪಂಗಡಗಳು ಮೂಸಾರ(ಅ) ಕಾಲದಲ್ಲಿತ್ತೆಂದೂ, ಈಸಾರ(ಅ) ಕಾಲದಲ್ಲಿ 72 ಇತ್ತೆಂದೂ, ನನ್ನ ಸಮುದಾಯದಲ್ಲಿ 73 ಪಂಗಡಗಳಿರುವುದೆಂದೂ ಅದರಲ್ಲಿ 72 ವಿಭಾಗ ನರಕವನ್ನೂ ಉಳಿದ ಒಂದು ವಿಭಾಗ ಸ್ವರ್ಗವನ್ನೂ ಪ್ರವೇಶಿಸಲಿದೆ ಎಂದು ಪ್ರವಾದಿವರ್ಯರು(ಸ) ಹೇಳಿದ್ದರು. ಆಗ ಸಂಗಾತಿಗಳು ವಿಜಯ ಹೊಂದಿ ಸ್ವರ್ಗ ಪ್ರವೇಶಿಸುವ ಆ ಪಂಗಡ ಯಾವುದು ಎಂದು ಕೇಳಿದಾಗ ಪ್ರವಾದಿವರ್ಯರು(ಸ) "ನಾನು ಮತ್ತು ನನ್ನ ಸಂಗಾತಿಗಳು ಸಾಗಿದ ಆದರ್ಶವನ್ನು ಮೈಗೂಡಿಸಿಕೊಂಡು ಜೀವನ ಸವೆಸುವವರಾಗಿದ್ದಾರೆ" ಎಂದು ಹೇಳಿದರು.

ಹಾಗಾದರೆ ಉಳಿದ 72 ಪಂಗಡಗಳ ಕುರಿತು ನಾವು ಅರಿಯಬೇಕಾಗಿದೆ. ಈ ಕುರಿತು ಗತಕಾಲದ ಘನ ವಿದ್ವಾಂಸರಲ್ಲಿ ಪ್ರಮುಖರಾದ ಮುಹ್ಯದ್ದೀನ್ ಶೈಖ್‌ರು(ರ) ತನ್ನ 'ಗುನ್ಯತ್' ಎಂಬ ಗ್ರಂಥದಲ್ಲಿ ಮೂಲದಲ್ಲಿ ಹತ್ತು ಪಂಗಡಗಳಿದ್ದ ನೂತನವಾದಿಗಳು ನಂತರ ಹರಿಹಂಚಾಗಿ 72 ಆಯಿತು ಎಂದು ಹೇಳಿರುವುದನ್ನು ಕಾಣಬಹುದು. ಮತ್ತೋರ್ವ ವಿದ್ವಾಂಸರಾದ ಶೈಖ್ ಅಲಿ ಬಿನ್ ಅಬೂಬಕರ್ ಇಬ್ನ್ ಸಖಾಫ್‌ರವರು ನೂತನವಾದದ ಕುರಿತು ವಿವರಿಸುತ್ತ ಆರಂಭದಲ್ಲಿ ಇವರು 7 ಪಂಗಡಗಳಲ್ಲಿದ್ದವರು ನಂತರ 72 ಪಂಗಡಗಳಾಗಿ ಹರಿ ಹಂಚಾಗಿ ಹೋದರು ಎಂದು ಹೇಳಿರುತ್ತಾರೆ. ಆ ಕುರಿತು ಸಂಕ್ಷಿಪ್ತವಾಗಿ ಅಭ್ಯಸಿಸೋಣ.

1. ಅಲ್‌ಮುಅ್‌ತಝಿಲ: ಯುಕ್ತಿಯ ಮೂಲಕ ಅದು ಧರ್ಮದಿಂದ ಲಾಭ ಪಡೆಯಲೆತ್ನಿಸುವ, ವಿಭಾಗವಾಗಿತ್ತು. ಮನುಷ್ಯ ನಡೆಸುವ ಎಲ್ಲ ಕೆಲಸ ಕಾರ್ಯಗಳು ಅವನಿಂದ ಮಾತ್ರ ಆಗುತ್ತಿವೆ ಹೊರತು ಇದರಲ್ಲಿ ದೇವನ ಪಾತ್ರವಿಲ್ಲ ಎಂಬುದು ಅದರ ಪ್ರಮುಖ ವಾದವಾಗಿತ್ತು. ಪರಲೋಕದಲ್ಲಿ ಅಲ್ಲಾಹನ ಭೇಟಿಯನ್ನು ಇವರು ನಿರಾಕರಿಸುತ್ತಾರೆ. ಮೂರನೇಯದಾಗಿ ಓರ್ವನು ಒಂದು ಪುಣ್ಯ ಕಾರ್ಯವೆಸಗಿದರೆ ಅದಕ್ಕೆ ಪ್ರತಿಫಲ ನೀಡುವುದು ಅಲ್ಲಾಹನಿಗೆ ಕಡ್ಡಾಯವಾಗಿದೆ. ಅದೇ ರೀತಿ ತಪ್ಪು ಮಾಡಿದರೆ ಶಿಕ್ಷಿಸುವುದೂ ಅಲ್ಲಾಹನಿಗೆ ಕಡ್ಡಾಯವಾಗಿದೆ. ಎಂದು ವಾದಿಸುತ್ತಾರೆ. ಈ ಮೂರು ವಾದಗಳು ಕುರ್‌ಆನಿನ ಬೋಧನೆಗೆ ವಿರುದ್ಧವಾಗಿವೆ. ನಂತರ ಈ ವಿಭಾಗವು 20 ವರ್ಗಗಳಲ್ಲಿ ಹರಿ ಹಂಚಾಗಿ ಹೋದವು.

2. ಶಿಯಾ: ಇಮಾಮ್ ಅಲಿಯವರ(ರ) ಮೇಲೆ ಇವರಿಗೆ ಮಿತಿ ಮೀರಿದ ಗೌರವ. ಎಲ್ಲಿಯವರಗೆಂದರೆ ಅವರನ್ನು ದೇವನ ಸ್ಥಾನಕ್ಕೂ ತಲುಪಿಸುವ ಹಂತಕ್ಕೂ ತಲುಪಿದ್ದಾರೆ. ಈಗಲೂ ಅವರು ಜೀವಿಸುತ್ತಿದ್ದಾರೆಂದೂ, ಸಿಡಿಲು ಬಂದಾಗ ಅದು ಅಲಿಯವರ ಶಬ್ದವೆಂದೂ ಹೇಳುತ್ತಾರೆ. ಈ ವಿಭಾಗವೂ 22 ವಿಭಾಗಗಳಾಗಿ ಹರಿಹಂಚಾಗಿ ಹೋದವು.

3. ಅಲ್ ಖವಾರಿಜ್: ಇವರು ಶಿಯಾ ವಿಭಾಗದ ವಾದಗಳಿಗೆ ತದ್ವಿರುದ್ಧವಾಗಿರುವವರು. ಅಲಿಯವರನ್ನು(ರ) ಕಾಫಿರ್ ಎಂದು ಜರೆಯುವ ಹಂತಕ್ಕೆ ತಲುಪಿದ ಪಂಗಡವಾಗಿದೆ. ಮಹಾ ಪಾಪಗಳನ್ನು ಎಸಗಿದವರನ್ನು ಧರ್ಮದಿಂದ ಕೂಡಲೇ ಹೊರಹಾಕಬೇಕೆಂಬುದು ಇವರ ವಾದ. ಈ ವಿಭಾಗವು 20 ವಿಭಾಗಗಳಾಗಿ ಹರಿ ಹಂಚಾಗಿ ಹೋದವು.

4. ಅಲ್ ಮುರ್ಜಿಅ: ಈಮಾನ್ ಒಂದಿದ್ದರೆ ಯಾವ ಕೆಡುಕುಗಳನ್ನೂ ಮಾಡಬಹುದು. ಈಮಾನ್ ಗಟ್ಟಿಯಿದ್ದರೆ ಕೆಡುಕು ಬಾಧಿಸದು, ಯಾವ ರೀತಿ ಎಂದರೆ ಸತ್ಯನಿಷೇಧಿ ನಮಾಝ್ ಮಾಡಿದರೆ ಅವನ

**ನಿರೂಪಣೆ: ಸಲೀಮ್ ಬೋಳಂಗಡಿ**

ನಮಾಝ್ ಸ್ವೀಕೃತವಾಗದು. ಯಾಕೆಂದರೆ ಅವನ ಹೃದಯದಲ್ಲಿ ಸತ್ಯ ನಿಷೇಧ ತುಂಬಿರುತ್ತದೆ. ಅವನನ್ನು ಅದು ಬಾಧಿಸದು ಎಂಬುದು ಅವರ ವಾದ. ಈ ವಿಭಾಗ 5 ವಿಭಾಗಗಳಾಗಿ ಹರಿ ಹಂಚಾದವು.

5. ಅನ್ನಜ್ಜಾರಿಯ್ಯ: ಕೆಲವೊಂದು ವಿಷಯಗಳಲ್ಲಿ ಇವರಿಗೆ ಅಹ್ಲುಸುನ್ನಃ ವಲ್ ಜಮಾಅತ್‌ನೊಂದಿಗೆ ಸಹಮತವಿದೆ. ಪ್ರತಿಯೊಬ್ಬನ ಕೆಲಸ ಕಾರ್ಯಗಳು ಅಲ್ಲಾಹನ ಇಚ್ಛೆಯ ಪ್ರಕಾರವೇ ನಡೆಯುವುದೆಂಬ ಅಹ್ಲು ಸುನ್ನಃ ವಲ್ ಜಮಾಅತ್‌ನ ವಾದಕ್ಕೆ ಇವರು ಪೂರಕವಾಗಿದ್ದಾರೆ. ಅಲ್ಲಾಹನ ಗುಣವಿಶೇಷಗಳನ್ನು ನಿಷೇಧಿಸುವ ಮುಅ್‌ತಝಿಲ್ ಗುಂಪಿನ ಕುರಿತೂ ಇವರಿಗೆ ಸಹಮತವಿದೆ. ಅಲ್ಲಾಹನಿಂದ ಅವತೀರ್ಣವಾದ ಕುರ್‌ಆನಿನ ಕುರಿತು ಇವರಿಗೆ ಸಂಶಯವಿದೆ. ಇವರು 3 ವಿಭಾಗಗಳಾಗಿ ಹರಿಹಂಚಾಗಿ ಹೋದರು.

6. ಅಲ್ ಜಬ್ರಿಯಾ: ನಾವು ಮಾಡುತ್ತಿರುವ ಎಲ್ಲ ಒಳಿತು ಕೆಡುಕುಗಳನ್ನು ಅಲ್ಲಾಹನು ನಮ್ಮಿಂದ ಮಾಡಿಸುತ್ತಾನೆಯೇ ಹೊರತು. ನಾವು ಆ ಕುರಿತು ಸ್ವತಂತ್ರರಲ್ಲ ಎಂಬುದು ಇವರ ವಾದ. ಇವರು ಒಂದೇ ಗುಂಪಾಗಿ ಅಳಿದು ಹೋದರು.

7. ಅಲ್ ಮುಶಾಬಹ: ಈ ವಿಭಾಗ ಮನುಷ್ಯ ಮತ್ತು ಅಲ್ಲಾಹನ ಜೊತೆ ಸಂಬಂಧ ಕಲ್ಪಿಸುತ್ತದೆ. ಯಾವ ರೀತಿಯೆಂದರೆ, ದೇವನು ಕೆಲವು ಮಾನವರಲ್ಲಿ ಅವತಾರವಾಗಿ ಬರುತ್ತಾನೆ ಎಂಬುದಾಗಿದೆ. ಇವರು ಕೂಡಾ ಒಂದೇ ಗುಂಪಾಗಿ ಅಳಿದು ಹೋದರು. ಈ ಎಲ್ಲ ವಿಭಾಗಗಳನ್ನು ಒಟ್ಟುಗೂಡಿಸಿದಾಗ 72 ಆಗುತ್ತದೆ. 800 ವರ್ಷಗಳ ಹಿಂದೆಯೇ ನಮ್ಮ ಘನ ವಿದ್ವಾಂಸರು ಈ 72 ವಿಭಾಗಗಳು ಮತ್ತು ಅವರ ಸಿದ್ಧಾಂತಗಳ ಕುರಿತು ವಿವರಿಸಿರುತ್ತಾರೆ. ಹಾಗೂ ಅನೇಕ ಉಲಮಾಗಳೂ ಈ ಕುರಿತು ಸವಿಸ್ತಾರವಾಗಿ ವಿವರಿಸಿದ್ದಾರೆ. ಸಲಾಮನ್ನು ನಿಷೇಧಿಸಲಾದ ವಿಭಾಗಗಳು ಇವೇ ಆಗಿವೆ. ಈ ನೂತನ ವಾದದವರ ಕುರಿತು ಬಹಳ ಸಂಕ್ಷಿಪ್ತ ವಾಗಿ ಇಲ್ಲಿ ವಿವರಿಸಲಾಗಿದೆ.

ಆದರೆ ಈ ಬಗ್ಗೆ ತಿಳಿದೂ ತಮ್ಮ ಸ್ವಾರ್ಥಕ್ಕಾಗಿ ಸಮಾಜದಲ್ಲಿ ಅದನ್ನು ದುರುಪಯೋಗ ಪಡಿಸುತ್ತಿರುವುದು ಖೇದಕರ. ಈ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ಅಲ್ ಮಿಲಲ್ ವನ್ನಹಲ್, ಅಲ್ ಫರ್ಕು ಬಯ್‌ನಲ್ ಫಿರ್ಕ, ಅಲ್ ಕಾಮಿಲ್, ಅಲ್ ಬಿದಾಯ ವನ್ನಿಹಾಯ, ಬಿಗ್‌ಯತುಲ್ ಮುಸ್ತರ್ಶಿದೀನ್, ಅಲ್‌ಗುನ್ಯಾ ಇತ್ಯಾದಿ ಗ್ರಂಥಗಳನ್ನು ಅಭ್ಯಸಿಸಬೇಕು. ಪ್ರವಾದಿ(ಸ) ಮತ್ತು ಅವರ ಅನುಯಾಯಿಗಳು ತಮ್ಮ ಜೀವನದಲ್ಲಿ ಪಾಲಿಸಿದ ಕರ್ಮಗಳಲ್ಲಿ ಮತ್ತು ಆಚಾರಗಳಲ್ಲಿ ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಅನುಸರಿಸಿ ಜೀವಿಸುವುದೇ ಅಹ್ಲುಸುನ್ನ ವಲ್ ಜಮಾಅತ್ ಆಗಿದೆ.

## ಕುರ್‌ಆನ್ ಅಧ್ಯಯನ 532

## ಅಧ್ಯಾಯ: 4

# ಅನ್ನಿಸಾ

### ವಚನ 79–80ರ ಟಿಪ್ಪಣಿಯ ಉಳಿದ ಭಾಗ



ಅಭೌತಿಕ ಮತ್ತು ಆಧ್ಯಾತ್ಮಿಕ ಹಾಗೂ ನೈತಿಕ–ಧಾರ್ಮಿಕ–ಶಿಷ್ಟಾಚಾರಗಳ ಬಗ್ಗೆ ಪ್ರವಾದಿಯವರ ಶಿಕ್ಷಣ ಮತ್ತು ವಿಧಿನಿಷೇಧಗಳು ಅಲ್ಲಾಹನಿಂದ ಬಂದಿವೆ. ಅದರ ಅನುಸರಣೆಯನ್ನು ಇಲ್ಲಿ ಆಜ್ಞಾಪಿಸಲಾಗಿದೆ. ಸಾಮಾನ್ಯ ಮಾನವನೆಂಬ ನೆಲೆಯಲ್ಲಿರುವ ಅವರ ಅಭಿಪ್ರಾಯ ಸಲಹೆಗಳನ್ನು ವಿಶ್ವಾಸಿಗಳು ಪ್ರಶ್ನಿಸದೆ ಅಂಗೀಕರಿಸುವುದು ಅಥವಾ ನಡವಳಿಕೆಗಳನ್ನು ಅನುಕರಿಸುವುದು ಕಡ್ಡಾಯವಲ್ಲ. ದಿವ್ಯ ಬೋಧನೆಯಿಂದ ತಿಳಿಸಿಲ್ಲದ ವಿಷಯಗಳಲ್ಲಿ ಪ್ರವಾದಿಯವರು ಇತರ ಮಾನವರಂತೆಯೇ ಆಗಿದ್ದಾರೆ. ಅದರಲ್ಲಿ ಅವರಿಗೆ ತಪ್ಪು–ಸರಿಗಳಿಗೆ ಅವಕಾಶವಿದೆ. ಒಮ್ಮೆ ಮದೀನದ ರೈತರು ಖರ್ಜೂರಗಳಲ್ಲಿ ಪರಾಗಣ ಮಾಡುವುದನ್ನು ನೋಡಿದಾಗ ಅದೊಂದು ಅನವಶ್ಯಕ ಕೆಲಸವೆಂದು ಪ್ರವಾದಿ ಮುಹಮ್ಮದ್‌ರಿಗೆ(ಸ) ತೋಚಿತು. ಅವರು ಅದನ್ನು ತಿಳಿಸಿದರು. ಪ್ರವಾದಿಯವರು ಹೇಳಿರುವರೆಂಬ ಭಾವನೆಯಿಂದ ರೈತರು ಆ ವರ್ಷ ಪರಾಗಣ ಕ್ರಿಯೆ ನಡೆಸಲಿಲ್ಲ. ಅದರಿಂದಾಗಿ ಆ ವರ್ಷ ಇಳುವರಿ ಕಡಿಮೆಯಾಯಿತು. ಆ ಕುರಿತು ಪ್ರವಾದಿಯವರು 'ಭೌತಿಕ ವಿಷಯಗಳ ಕುರಿತು ರೈತರಿಗೆ ನನಗಿಂತ ಹೆಚ್ಚಾಗಿ ತಿಳಿದಿದೆ'ಯೆಂದು ಪ್ರತಿಕ್ರಿಯಿಸಿದರು.

ಈ ಹಿನ್ನೆಲೆಯಲ್ಲಿ ಪ್ರವಾದಿಯವರ ಆದೇಶಗಳ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿದಾಗ ಅನುಯಾಯಿಗಳು ಆ ಬಗ್ಗೆ ಅದು ದಿವ್ಯವಾಣಿಯೋ ಅಥವಾ ಸ್ವಂತ ಅಭಿಪ್ರಾಯವೋ ಎಂದು ಪ್ರಶ್ನಿಸುತ್ತಿದ್ದರು. ಪ್ರವಾದಿಯವರ ಸ್ವಂತ ಅಭಿಪ್ರಾಯವೆಂದು ತಿಳಿದರೆ ಅವರು ತಮ್ಮ ಭಿನ್ನಾಭಿಪ್ರಾಯವನ್ನು ಪ್ರದರ್ಶಿಸುತ್ತಾರೆ. ಹಲವೊಮ್ಮೆ ಪ್ರವಾದಿಯವರು ತಮ್ಮ ಅಭಿಪ್ರಾಯವನ್ನು ತೊರೆದು ಶಿಷ್ಯರ ಅಭಿಪ್ರಾಯವನ್ನು ಅಂಗೀಕರಿಸುತ್ತಿದ್ದರು.

ಸಂದೇಶವಾಹಕರ ಪ್ರವಾದಿತ್ವ ಮತ್ತು ಬೋಧನೆಗಳನ್ನು ಮನಃಪೂರ್ವಕ ತಿರಸ್ಕರಿಸಿ ಮೂಢ ನಂಬಿಕೆ ಮತ್ತು ಅನಾಚಾರಗಳಲ್ಲಿ ಮುಳುಗಿರುವವರಿಂದ ಪ್ರವಾದಿಯವರನ್ನು ಅಂಗೀಕರಿಸಲು ಅಥವಾ ಅವರ ಸಂದೇಶವನ್ನು ಅಂಗೀಕರಿಸುವಂತೆ ಬಲಾತ್ಕರಿಸಲು ಪ್ರವಾದಿಯವರಿಗೆ ಆಜ್ಞಾಪಿಸಲಾಗಿಲ್ಲ. ಸತ್ಯದ ಬಗ್ಗೆ ಮುಚ್ಚಿಕೊಂಡಿರುವ ಕಣ್ಣುಗಳನ್ನು ತೆರೆಸುವುದು, ನಿದ್ರಿಸುತ್ತಿರುವ ಸತ್ಯಪ್ರತಿಜ್ಞೆಯನ್ನು ಬಡಿದೆಬ್ಬಿಸುವುದು, ಸತ್ಯ ಸ್ವೀಕಾರಕ್ಕೆ ಸಿದ್ಧವಿರುವ ಮನಸ್ಸುಗಳಿಗೆ ದಾರಿ ತೋರಿಸುವುದು– ಇವು ಪ್ರವಾದಿ ಕಾರ್ಯಭಾರವಾಗಿದೆ.

'ಫಮಾ ಅರ್ಸಲ್ನಾಕ ಅಲೈಹಿಮ್ ಹಫೀಝಾ' ಎಂಬ ವಚನದ ತಾತ್ಪರ್ಯವೇನೆಂದರೆ, ಅಲ್ಲಾಹನು ಪ್ರವಾದಿಯವರಿಗೆ, ಜನರು ಸತ್ಯ ಮತ್ತು ಧರ್ಮದಲ್ಲಿರುವಂತೆ ಹಾಗೂ ಸತ್ಯದಿಂದ ವ್ಯತಿಚಲಿಸದಂತೆ ಕಾಪಾಡುವ, ದುರ್ಮಾರ್ಗ ಮತ್ತು ನರಕದಿಂದ ಬಲಾತ್ಕಾರವಾಗಿ ರಕ್ಷಿಸುವ ಹೊಣೆಯನ್ನು ನೀಡಿಲ್ಲ. ಸತ್ಯವನ್ನು ಸ್ವೀಕರಿಸಿ ಸನ್ಮಾರ್ಗದಲ್ಲಿ ಚಲಿಸುವ ಮತ್ತು ನರಕದಿಂದ ಪಾರಾಗುವ ಕಾರ್ಯವನ್ನು ವ್ಯಕ್ತಿಯು ಸ್ವತಃ ಮಾಡಬೇಕು. ಸತ್ಯ ಸಂದೇಶವನ್ನು ವಾಚಾ ಕರ್ಮಣಾ ಅವರಿಗೆ ತಲಪಿಸುವುದು ಮಾತ್ರ ಪ್ರವಾದಿಯ ಹೊಣೆಗಾರಿಕೆಯಾಗಿದೆ. ಈ ವಿಷಯವನ್ನು ಕುರ್‌ಆನ್ ಪದೇ ಪದೇ ಹೇಳಿದೆ. "ಅರಿಯಿರಿ, ಸಂದೇಶವನ್ನು ಸ್ಪಷ್ಟವಾಗಿ ತಲುಪಿಸುವುದು ಮಾತ್ರ ನಮ್ಮ ಪ್ರವಾದಿಯ ಹೊಣೆಗಾರಿಕೆಯಾಗಿದೆ." (5:92) "ನೀವು ಉಪದೇಶಿಸಿರಿ, ನೀವು ಕೇವಲ ಉಪದೇಶಕರಾಗಿರುವಿರಿ." (28:21) "ನಿಮ್ಮನ್ನು ನಾವು ಸುವಾರ್ತೆ ಮತ್ತು ಮುನ್ನೆಚ್ಚರಿಕೆ ನೀಡುವವರಾಗಿ ಕಳುಹಿಸಿರುತ್ತೇವೆ." (25:56)

ಈ ವಚನದ ತಾತ್ಪರ್ಯವು ಈ ಹಿಂದೆ ಬಂದ ಯುದ್ಧದ ಆಜ್ಞೆ ಮತ್ತು ಸಾವಿನ ಭಯದಿಂದಾಗಿ ಅದರಿಂದ ಹಿಂಜರಿಯುವವರನ್ನು ವಿಮರ್ಶಿಸಿದ ವಚನಕ್ಕೆ ವಿರುದ್ಧವೆಂದು ಭಾಸವಾಗಬಹುದು. ಆದರೆ ಈ ವಚನದ ಹಿನ್ನೆಲೆಯನ್ನು ಗಮನಿಸಿದಾಗ ಇವು ಪರಸ್ಪರ ಪೂರಕವೆಂದು ವ್ಯಕ್ತವಾಗುತ್ತದೆ. ಧರ್ಮದ ವೈರಿಗಳೊಡನೆ ಯುದ್ಧ ಮಾಡಬೇಕೆಂದು ಧರ್ಮನಿಷ್ಠ ವಿಶ್ವಾಸಿಗಳೊಡನೆ ಆದೇಶಿಸಲಾಗಿದೆ. ವಿಶ್ವಾಸವಿಲ್ಲದವರನ್ನು ಯುದ್ಧ ಅಥವಾ ಪ್ರವಾದಿಯವರ ಅನುಸರಣೆಗಾಗಿ ನಿರ್ಬಂಧಿಸಬೇಕಾಗಿಲ್ಲ ವೆಂದು ಈ ವಚನದಲ್ಲಿ ತಿಳಿಸಲಾಗಿದೆ. ವೈರಿಗಳೊಡನೆ ಯುದ್ಧ ಮಾಡಬೇಕು. ಸಾಮಾನ್ಯ ವಿಶ್ವಾಸಿಗಳೊಂದಿಗಲ್ಲ. ಇಸ್ಲಾಮ್ ಧರ್ಮದಲ್ಲಿ ವಿಶ್ವಾಸವಿರಿಸಿದರೆಂಬ ಏಕೈಕ ಕಾರಣಕ್ಕಾಗಿ ಸ್ತ್ರೀ–ಪುರುಷ–ಮಕ್ಕಳೆಂಬ ಭೇದವಿಲ್ಲದೆ ಜನರನ್ನು ಹಿಂಸಿಸಿ ಪೀಡಿಸುವ ಮತ್ತು ಅವರು ಸುರಕ್ಷಿತ ಪ್ರದೇಶಗಳಿಗೆ ಪಲಾಯನ ಮಾಡುವುದನ್ನು ಬಲಾತ್ಕಾರದಿಂದ ತಡೆಯುವ ಮರ್ದಕರೊಡನೆ ಯುದ್ಧ ಮಾಡಬೇಕು.

ಇಸ್ಲಾಮಿನಲ್ಲಿ ವಿಶ್ವಾಸವಿರಿಸಲಿಕ್ಕಾಗಿ ಯಾರನ್ನೂ ಬಲಾತ್ಕರಿಸಬಾರದು. 'ಧರ್ಮದಲ್ಲಿ ಬಲಾತ್ಕಾರವಿಲ್ಲ' (2:256) ಸುಸ್ಪಷ್ಟ ಸಂದೇಶ ಪ್ರಚಾರ, ಒಳಿತನ್ನು ಪ್ರೋತ್ಸಾಹಿಸಿ ಕೆಡುಕನ್ನು ನಿರುತ್ತೇಜಿಸುವುದು, ಅಸತ್ಯ ಮತ್ತು ಅಧರ್ಮದ ಭಯಾನಕ ಪರಿಣಾಮಗಳ ಕುರಿತು ಮುನ್ನೆಚ್ಚರಿಕೆ ನೀಡುವುದು, ಸತ್ಯ ಮತ್ತು ಧರ್ಮದ ಪಾಲನೆಯ ಸತ್ಫಲಗಳ ಬಗ್ಗೆ ಸುವಾರ್ತೆ ನೀಡುವುದು, ಬೋಧಿಸುವ ತತ್ವಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸುವುದು ಇತ್ಯಾದಿಗಳು ಅವಿಶ್ವಾಸಿಗಳ ವಿಷಯದಲ್ಲಿ ವಿಶ್ವಾಸಿಗಳ ಕರ್ತವ್ಯವಾಗಿದೆ.

ಕಳ್ಳತನ, ವ್ಯಭಿಚಾರ ಮುಂತಾದ ಕ್ರಿಮಿನಲ್ ಅಪರಾಧಿಗಳಿಗೆ ಆದೇಶಿಸಲಾಗಿರುವ ಶಿಕ್ಷೆಗಳು, ಧರ್ಮದ ಹೆಸರಲ್ಲಿರುವ ಬಲಾತ್ಕಾರವಲ್ಲ. ಯಾವುದೇ ಸಾಮಾಜಿಕ ವ್ಯವಸ್ಥೆಯು ಉಳಿಯಬೇಕಾದರೆ ಆ ವ್ಯವಸ್ಥೆಯನ್ನು ಉಲ್ಲಂಘಿಸುವವರ ನಿಯಂತ್ರಣಕ್ಕೆ ಸೂಕ್ತ ಕ್ರಮಗಳ ಅಗತ್ಯವಿದೆ. ಇಸ್ಲಾಮಿ ಕಾನೂನುಗಳನ್ನು ಇಸ್ಲಾಮಿ ರಾಷ್ಟ್ರ ಜಾರಿಗೊಳಿಸುತ್ತದೆ. ರಾಷ್ಟ್ರದ ಪೌರರೆಲ್ಲರೂ ಕಾನೂನಿಗೆ ಬದ್ಧರಾಗಿರಬೇಕು.

ಇಸ್ಲಾಮನ್ನು ಸ್ವೀಕರಿಸಲಿಕ್ಕಾಗಿ ಯಾರನ್ನೂ ಬಲಾತ್ಕರಿಸಬಾರದು. ಆದರೆ ಸ್ವಯಂ ಪ್ರೇರಣೆಯಿಂದ ಇಸ್ಲಾಮ್ ಸ್ವೀಕರಿಸಿ, ಇಸ್ಲಾಮಿ ವ್ಯವಸ್ಥೆಯನ್ನು ಪಾಲಿಸಲಾಗುವಂಥ ಸಮೂಹದಲ್ಲಿ ಸದಸ್ಯನಾದರೆ ಇಸ್ಲಾಮಿ ಕಾನೂನುಗಳ ಪಾಲನೆಯು ಆತನಿಗೆ ಕಡ್ಡಾಯವಾಗುತ್ತದೆ. ಉಲ್ಲಂಘಿಸಿದವರ ವಿಚಾರಣೆ ನಡೆಸಲಾಗುವುದು. ಅದು ಧಾರ್ಮಿಕ ವಿಶ್ವಾಸದ ಬದಲಾಗಿ ಕಾನೂನು ಮತ್ತು ಶಿಸ್ತಿನ ಸಮಸ್ಯೆಯಾಗಿದೆ.

**ಪ್ರವಾದಿ(ಸ) ಹೇಳಿದರು, "ಮರಣಕ್ಕಾಗಿ ಪ್ರಾರ್ಥಿಸದಿರಿ ಮತ್ತು ಮರಣವನ್ನು ಆಶಿಸಲೂ ಬಾರದು. ಯಾರಿಗಾದರೂ ಅಂತಹ ಪ್ರಾರ್ಥನೆ ಮಾಡಲೇಬೇಕೆಂದಿದ್ದರೆ ಹೀಗೆ ಹೇಳಲಿ– ಓ ಅಲ್ಲಾಹ್! ನಾನು ಜೀವಿಸುವುದು ಒಳ್ಳೆಯದೆಂದಿದ್ದರೆ ಅಲ್ಲಿಯ ವರೆಗೆ ನನ್ನನ್ನು ಜೀವಂತ ವಿರಿಸು. ಸಾಯುವುದೇ ಲೇಸೆಂದಿದ್ದರೆ ನನ್ನನ್ನು ಈ ಲೋಕದಿಂದ ಎತ್ತಿಬಿಡು."**
[ವರದಿ: ಅನಸ್(ರ)–ನಸಾಈ]

# ಸ್ವಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಸುಜೂದ್‌ನ ಸ್ವರೂಪ

**438.** ಇಬ್ನು ಅಬ್ಬಾಸ್ ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು. ನನಗೆ ಏಳು ಅಂಗಗಳೊಂದಿಗೆ ಸುಜೂದ್ ಮಾಡಲು ಆಜ್ಞಾಪಿಸಲಾಗಿದೆ. ಹಣೆ, ಮೂಗು (ಮೂಗಿನೆಡೆಗೆ ತೋರಿಸಿದರು), ಎರಡೂ ಕೈಗಳು, ಎರಡೂ ಮೊಣಗಂಟುಗಳು, ಹಸ್ತಗಳೊಂದಿಗೆ. ನಾವು ಬಟ್ಟೆ ಮತ್ತು ಕೂದಲನ್ನು ಸೇರಿಸಬಾರದೆಂದೂ ಆಜ್ಞಾಪಿಸಲಾಗಿದೆ.

**439.** ಅನಸ್ ಹೇಳುತ್ತಾರೆ- ನಾನು ಪ್ರವಾದಿಯವರನ್ನು ಹೇಗೆ ನಮಾಝ್ ಮಾಡುವುದಾಗಿ ಕಂಡಿದ್ದೇನೋ ಹಾಗೆಯೇ ಮಾಡುವೆನು. ಅದರಲ್ಲಿ ಕಡಿತ ಮಾಡಲಾರೆ. ಉಳಿದ ಹದೀಸ್ ಈ ಹಿಂದೆ ಬಂದಿದೆ.

**440.** ಅನಸ್ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ಸುಜೂದ್‌ನಲ್ಲಿ ಸಂತುಲನೆ ಪಾಲಿಸಿರಿ. ನಿಮ್ಮಲ್ಲಿ ಯಾರೂ ಸುಜೂದ್‌ನಲ್ಲಿ ನಾಯಿಯಂತೆ ಮೊಣ ಗಂಟನ್ನು ಬಿಡಿಸಿಡಬಾರದು (ಅರ್ಥಾತ್, ನಾಯಿಯಂತೆ ಕುಳಿತುಕೊಳ್ಳ ಬಾರದು)

## ಇಸ್ತಿರಾಹತ್ (ಕುಳಿತುಕೊಳ್ಳುವುದು)

**441.** ಮಾಲಿಕ್ ಬಿನ್ ಹುವೈರಿಸ್ ಲೈಸಿ ಹೇಳುತ್ತಾರೆ- ನಾನು ಪ್ರವಾದಿಯವರನ್ನು ನಮಾಝ್ ಮಾಡುವಾಗ ನೋಡಿದ್ದೇನೆ. ಪ್ರವಾದಿಯವರು ಬೆಸಸಂಖ್ಯೆಯ ರಕಅತ್ ನಿಂದ ಏಳುವುದಕ್ಕೆ ಮುಂಚೆ ಅಲ್ಪ ಹೊತ್ತು ಕುಳಿತುಕೊಳ್ಳುತ್ತಿದ್ದರು.

**442.** ಅಬೂ ಸಈದ್ ಖುದ್ರೀ ನಮಗೆ ನಮಾಝ್ ಮಾಡಿಸಿದರು. ಅವರು ಸುಜೂದ್‌ನಿಂದ ತಲೆಯೆತ್ತುವಾಗ, ಮತ್ತು ಸುಜೂದ್ ಮಾಡುವಾಗ ಹಾಗೂ ಎರಡು ರಕಅತ್‌ಗಳ ಬಳಿಕ ಎದ್ದು ನಿಲ್ಲುವಾಗ ಜೋರಾಗಿ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಿ ದರು. ನಾನು ಪ್ರವಾದಿಯವರನ್ನು ಹೀಗೆಯೇ ಮಾಡುವುದನ್ನು ಕಂಡಿದ್ದೇನೆಂದರು.

**443.** ಅಬ್ದುಲ್ಲಾ ಬಿನ್ ಉಮರ್ ನಮಾಝ್‌ನಲ್ಲಿ ಪದ್ಮಾಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ಅಬ್ದುಲ್ಲಾ ಹಾಗೆಯೇ ಮಾಡುವುದನ್ನು ಅವರ ಮಗ ಕಂಡಾಗ ಅವರನ್ನು ಅದರಿಂದ ತಡೆದರು. ನಮಾಝ್‌ನಲ್ಲಿ ಬಲಗಾಲನ್ನು ನೇರವಾಗಿಟ್ಟು ಎಡಗಾಲನ್ನು ಅಡ್ಡಲಾಗಿ ಇಡುವುದು, ಸುನ್ನತ್ ಆಗಿದೆ ಯೆಂದವರು ಹೇಳಿದರು. ನೀವೂ ಹಾಗೆ ಮಾಡುತ್ತೀರಲ್ಲಾ ಎಂದು ಅವರ ಮಗ ಹೇಳಿದಾಗ, ನನ್ನ ಕಾಲುಗಳಿಗೆ ನನ್ನ ಭಾರವನ್ನು ಹೊರಲಾಗುವುದಿಲ್ಲ ಎಂದರು.

## ಪ್ರವಾದಿಯವರ ನಮಾಝ್

**444.** ಅಬೂ ಹುಮೈದ್ ಸಾಇದೀ ಹೇಳುತ್ತಾರೆ- ನನಗೆ ಪ್ರವಾದಿಯವರ ನಮಾಝ್ ನಿಮಗಿಂತ ಹೆಚ್ಚು ನೆನಪಿದೆ. ಪ್ರವಾದಿವರ್ಯರು ನಮಾಝ್ ಮಾಡುವುದನ್ನು ನಾನು ನೋಡಿದ್ದೇನೆ. ಅವರು(ಪ್ರಾರಂಭದ) ತಕ್ಬೀರ್ ಹೇಳುವಾಗ ಎರಡೂ ಕೈಗಳನ್ನು ಭುಜದ ವರೆಗೆ ಎತ್ತುತ್ತಿದ್ದರು. ರುಕೂಅ್ ಮಾಡುವಾಗ ಎರಡೂ ಕೈಗಳನ್ನು ಮೊಣಗಂಟಿನ ಮೇಲಿಡುತ್ತಿದ್ದರು. ಬೆನ್ನನ್ನು ಬಾಗಿಸುತ್ತಿದ್ದರು. ಅಲ್ಲಿಂದ ತಲೆ ಎತ್ತು ವಾಗ ಪ್ರತಿಯೊಂದು ಅವಯವವೂ ತನ್ನ ಸ್ಥಾನಕ್ಕೆ ಮರಳುವ ರೀತಿಯಲ್ಲಿ ನೇರವಾಗುತ್ತಿದ್ದರು. ತರುವಾಯ ಸುಜೂದ್ ಮಾಡುತ್ತಿದ್ದರು. ಎರಡೂ ಕೈಗಳನ್ನು ನೆಲದ ಮೇಲಿ ಡುತ್ತಿದ್ದರು. ಹೆಚ್ಚು ಬಿಡಿಸುತ್ತಿರಲಿಲ್ಲ. ಮುಷ್ಠಿ ಹಿಡಿದಂತೆ ಮುಚ್ಚುತ್ತಲೂ ಇರುತ್ತಿರ ಲಿಲ್ಲ. ಎರಡು ಪಾದಗಳ ಬೆರಳುಗಳು ಕಿಬ್ಲಾದ ಕಡೆಗಿರುತ್ತಿತ್ತು. ಎರಡು ರಕಅತ್‌ಗಳಾದ ಬಳಿಕ ಎಡ ಕಾಲ ಮೇಲೆ ಕುಳಿತಿರುತ್ತಿದ್ದರು. ಬಲಗಾಲನ್ನು ನೇರವಾಗಿರಿ ಸುತ್ತಿದ್ದರು. ಕೊನೆಯ ರಕಅತ್‌ನಲ್ಲಿ ಕುಳಿತಿರುವಾಗ, ಬಲಗಾಲನ್ನು ಮುಂದೆ ಮಾಡಿ ಇನ್ನೊಂದು ಕಾಲನ್ನು ನೇರವಾಗಿರಿಸಿ ನೆಲದ ಮೇಲೆ ಕುಳಿತು ಕೊಳ್ಳುತ್ತಿದ್ದರು.

## ಸಹೂವಿನ ಸುಜೂದ್

**445.** ಅಬ್ದುಲ್ಲಾ ಬಿನ್ ಮಾಲಿಕ್ ಬಿನ್ ಬುಹೈನಾ ಹೇಳುತ್ತಾರೆ- ಇವರು ಅಝ್ದ್ ಶನ್ವ ಗೋತ್ರದವರಾಗಿದ್ದು ಸಹಾಬಿಯಾಗಿದ್ದರು. (ಅದು ಬನೂ ಅಬ್ದ್ ಮನಾಫ್‌ನ ಒಪ್ಪಂದ ಬದ್ಧ ಗೋತ್ರವಾಗಿತ್ತು) ಪ್ರವಾದಿಯವರು ನಮಗೆ ಝುಹರ್ ನಮಾಝ್ ಮಾಡಿಸಿದರು. ಮೊದಲ ಎರಡು ರಕಅತ್‌ನ ನಂತರ ಕುಳಿತು ಕೊಳ್ಳಲಿಲ್ಲ. ಎದ್ದು ನಿಂತರು. ಜನರೂ ಅವರ ಜೊತೆಯಲ್ಲಿ ಎದ್ದು ನಿಂತರು. ನಮಾಝ್ ಪೂರ್ಣ ಗೊಂಡಾಗ ಜನರು, ಸಲಾಮ್ ಹೇಳುವುದನ್ನು ನಿರೀಕ್ಷಿಸುತ್ತಿದ್ದರು. ಪ್ರವಾದಿಯವರು ಕುಳಿತಲ್ಲಿಂದಲೇ ತಕ್ಬೀರ್ ಹೇಳಿದರು. ಸಲಾಮ್‌ಗಿಂತ ಮುಂಚೆ ಎರಡು ಸುಜೂದ್ ಮಾಡಿ ಅನಂತರ ಸಲಾಮ್ ಹೇಳಿದರು.



## ಸಿದ್ದೀಕುಲ್ ಅಕ್ಬರ್ - 26

ಇ.ಎನ್. ಇಬ್ರಾಹೀಮ್

# ಸಜ್ಜಾಹ್ ಮತ್ತು ಮಾಲಿಕಿಬ್ನು ನುವೈರಾ

ಬುತಾಹ್ ಪರ್ಶಿಯನ್ ಕೊಲ್ಲಿಯವರೆಗೂ ವ್ಯಾಪಿಸಿರುವ ಮದೀನಾದ ಪೂರ್ವಭಾಗದಲ್ಲಿರುವ ಒಂದು ಪ್ರದೇಶವಾಗಿದೆ. ಅದು ಆಗ್ನೇಯ ಭಾಗದಲ್ಲಿ ಯುಫ್ರಟಿಸ್ ನದಿಯ ಸಂಗಮ ಸ್ಥಳದ ವರೆಗೂ ಹರಡಿಕೊಂಡಿತ್ತು. ಅದು ತಮೀಮ್ ಗೋತ್ರದ ವಾಸಸ್ಥಳವಾಗಿದೆ. ಈ ಗೋತ್ರ ಅರೇಬಿಯಾಕ್ಕೆ ಇಸ್ಲಾಮ್ ಆಗಮಿಸುವುದಕ್ಕಿಂತ ಮೊದಲೇ ಅಲ್ಲಿ ಪ್ರಭಾವಿಯಾಗಿತ್ತು. ಈ ಗೋತ್ರದ ಜನರು, ಧೈರ್ಯ ಔದಾರ್ಯಗಳಿಗೆ ಪ್ರಸಿದ್ಧರಾಗಿದ್ದರು. ಅವರು ಅರಬ್ ಸಾಹಿತ್ಯರಂಗಕ್ಕೆ ನೀಡಿರುವ ಕೊಡುಗೆಗಳು ಕೂಡಾ ಅದಕ್ಕೆ ಕಾರಣವಾಗಿದೆ. ತಮೀಮ್ ಗೋತ್ರವನ್ನು ಹೊರಗಿಟ್ಟು ಅರೇಬಿಕ್ ಇತಿಹಾಸದಲ್ಲಿ ಒಂದು ಗ್ರಂಥವನ್ನು ರಚಿಸುವುದು ಕೂಡಾ ಸಾಧ್ಯವಾಗದು. ಅವರಿಗೆ ಈ ಪ್ರಾಮುಖ್ಯತೆ ದಕ್ಕಿರುವುದಕ್ಕೆ, ನೆಲಪರವಾದ ಕಾರಣಗಳು ಕೂಡಾ ಇವೆ. ಬುತಾಹ್ ಅರೇಬಿಯಾ, ಇರಾಕ್ ಮತ್ತು ಪರ್ಶಿಯಾದೊಡನೆ ಭೂ ಸಂಪರ್ಕವನ್ನು ಹೊಂದಿರುವ ಪ್ರದೇಶವಾಗಿದೆ. ಅದರಂತೆ ಬುತಾಹ್ ನಿವಾಸಿಗಳಿಗೆ ಈ ಪ್ರದೇಶಗಳೊಡನೆ ಸಹಜವಾದ ಸಂಪರ್ಕವಿತ್ತು. ಇದು ಬುತಾಹ್‌ನಲ್ಲಿ ವಿಭಿನ್ನ ಸಂಸ್ಕೃತಿ ಹರಡುವುದಕ್ಕೂ ಕಾರಣವಾಗಿತ್ತು. ಬುತಾಹ್ ನಿವಾಸಿಗಳು ವಿಗ್ರಹಾರಾಧಕರಾಗಿದ್ದರು. ಆದರೂ ಕ್ರೈಸ್ತ ಧರ್ಮ ವಿಶ್ವಾಸಿಗಳು ಕೂಡಾ ಅಲ್ಲಿ ಧಾರಾಳ ಸಂಖ್ಯೆಯಲ್ಲಿದ್ದರು. ಇವರೆಲ್ಲರೂ ತಮ್ಮ ತಮ್ಮ ರಕ್ಷಣೆಯ ವಿಚಾರದಲ್ಲಿ ಬದ್ಧ ಕಂಕಣರಾಗಿದ್ದರು. ಕಲಬ್ ಗೋತ್ರ ಪ್ರವಾದಿವರ್ಯರ(ಸ) ಕಾಲದಲ್ಲಿ ಇಸ್ಲಾಮನ್ನು ಸ್ವೀಕರಿಸಿರುವ ಗೋತ್ರವಾಗಿದೆ. ಇದು ಕೂಡಾ ತಮೀಮ್ ಗೋತ್ರದ ಒಂದು ವಿಭಾಗವಾಗಿತ್ತು. ಈ ಗೋತ್ರದ ಝಕಾತ್ ಸಂಗ್ರಹಕ್ಕಾಗಿ ಪ್ರವಾದಿವರ್ಯರು(ಸ) ತಮ್ಮ ದೂತರನ್ನು ನೇಮಿಸಿದ್ದರು.

ಬನೂ ಅಂಬರ್ ಕೂಡಾ ತಮೀಮ್ ಗೋತ್ರದ ಇನ್ನೊಂದು ವಿಭಾಗವಾಗಿದೆ. ಅವರನ್ನು ಕೂಡಾ ಕಲಬ್ ಗೋತ್ರವು ಝಕಾತನ್ನು ಪಾವತಿಸದಂತೆ ಮತ್ತು ಝಕಾತ್ ಪಾವತಿಸುವುದರಿಂದ ತಮ್ಮ ಸ್ವಾತಂತ್ರ್ಯದ ಹನನವಾವುದೆಂದು ವಾದಿಸಿ ಅಡ್ಡಿಪಡಿಸಲು ಪ್ರಯತ್ನಿಸುತ್ತಿತ್ತು. ಪ್ರವಾದಿವರ್ಯರ ಝಕಾತ್ ಸಂಗ್ರಹಕಾರರು ಬಂದಾಗ ಈ ಝಕಾತ್ ವಿರೋಧಿ ಗೋತ್ರಗಳನ್ನು ಇವರು ಶಸ್ತ್ರಾಸ್ತ್ರಗಳಿಂದ ಸ್ವಾಗತಿಸಿದರು. ಇದು ಪ್ರವಾದಿವರ್ಯರಿಗೆ ಅನಿರೀಕ್ಷಿತವಾದ ವಿಚಾರವಾಗಿತ್ತು. ಈ ಬಂಡಾಯವನ್ನು ಬಲಪ್ರಯೋಗಿಸಿ ನಿವಾರಿಸಲು ಅವರು(ಸ) ನಿರ್ಧರಿಸಿದರು. ಕಾನೂನುಬದ್ಧ ಆಡಳಿತ ನಡೆಸುವವರಿಗೆ ಇಂತಹ ಧಿಕ್ಕಾರವನ್ನು ಸಹಿಸುವುದು ಸಾಧ್ಯವಲ್ಲ.

ಪ್ರವಾದಿವರ್ಯರು(ಸ) ಕೂಡಾ ಇವರ ಬಂಡಾಯವನ್ನು ದಮನಿಸುವುದಕ್ಕಾಗಿ ಉಯೈನತಿಬ್ನು ಹಿಸ್ನಾರನ್ನು ನಿಯೋಜಿಸಿದರು. ಉಯೈನಾರ ಸೇನೆ ಈ ಬಂಡುಕೋರರನ್ನು ಸೆರೆಹಿಡಿದು, ಪ್ರತಿ ರೋಧಕ್ಕೆ ನಿಂತವರನ್ನು ವಧಿಸಿ ದಮನಿಸಿತು. ಇಲ್ಲಿ ಸೆರೆಹಿಡಿ ದವರನ್ನು ಮದೀನಾಕ್ಕೆ ಕರೆತಂದು ಪ್ರವಾದಿವರ್ಯರ ಸಮಕ್ಷಮ ದಲ್ಲಿ ಹಾಜರುಪಡಿಸಲಾಯಿತು.

ತಮೀಮ್ ಗೋತ್ರದ ಪ್ರಮುಖರನ್ನೊಳಗೊಂಡ ಒಂದು ತಂಡ ಪ್ರವಾದಿವರ್ಯರನ್ನು ಭೇಟಿಯಾಗಿ ಸೆರೆ ಸಿಕ್ಕಿರುವ ತಮ್ಮ ಪಿತರು, ಸಹೋದರರು ಮತ್ತು ಸಂತಾನಗಳನ್ನು ಬಿಡುಗಡೆಗೊಳಿಸುವುದಕ್ಕಾಗಿ ಮದೀನಾಕ್ಕೆ ತೆರಳಿತು. ಆದರೆ ಈ ತಂಡ ಪ್ರವಾದಿವರ್ಯರೊಂದಿಗೆ ಅಗೌರವ ಮತ್ತು ಉದ್ಧಟತನದಿಂದ ವರ್ತಿಸಿತು. ಅವರು ಪ್ರವಾದಿವರ್ಯರನ್ನು(ಸ) ಪ್ರವಾದಿವರ್ಯರ ಮನೆಯಂಗಳದಲ್ಲಿ ನಿಂತು ಹೀಗೆ ಕರೆದರು,

"ಯಾ ಮುಹಮ್ಮದ್! ಹೊರಗೆ ಬಾ. ನಮ್ಮ ಬಂಧುಗಳನ್ನು ಬಿಟ್ಟುಕೊಡು. ನಾವು ಹುನೈನ್ ಯುದ್ಧದಲ್ಲಿ ಸಹಾಯವನ್ನು ನಿನಗೆ ಮಾಡಿದ್ದೇವೆ. ನಾವು ಅರಬರಲ್ಲೇ ಕುಲೀನರು ಮತ್ತು ಪ್ರತಾಪಿಗಳಾಗಿದ್ದೇವೆ."

ಇದು ಪ್ರವಾದಿವರ್ಯರಿಗೆ ಕಿರುಕುಳವಾಗುವಂತಹ ವರ್ತನೆಯಾಗಿತ್ತೆಂದು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲವಷ್ಟೇ. ಸ್ವಲ್ಪ ಸಮಯ ಕಳೆದಾಗ ನಮಾಝ್‌ನ ಸಮಯವಾಯಿತು. ಪ್ರವಾದಿವರ್ಯರು ಮನೆಯಿಂದ ಹೊರಗೆ ಬಂದರು. ಪ್ರವಾದಿವರ್ಯರನ್ನು(ಸ) ಕಂಡೊಡನೆ ತಮೀಮ್‌ನ ಜನರು ಈ ರೀತಿ ಹೇಳಿದರು,

"ನಾವು ನಿಮ್ಮೊಡನೆ ಕುಲೀನತೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಬಂದಿದ್ದೇವೆ. ನಮ್ಮ ಪ್ರಶಂಸೆಯು ಸುಂದರವಾಗಿದೆ. ನಮ್ಮ ತೆಗಳಿಕೆ ನಿಂದಕವಾಗಿದೆ."

ಈ ರೀತಿ ಪ್ರವಾದಿವರ್ಯರನ್ನು(ಸ) ಬನೂ ತಮೀಮ್‌ನ ಅಕ್ರಅ ಇಬ್ನು ಹಾಬಿಸ್ ಸಂಬೋಧಿಸಿ ಹೇಳಿದರು. ಸಿಬರ್‌ಖಾನಿಬ್ನು ಬದ್ರ್ ತಮೀಮ್ ಗೋತ್ರವನ್ನು ಪ್ರಶಂಸಿ ಹಾಡಿದರು. ಅತಾರಿಬ್ನು ಹಾಜಿಬ್, ಅವರ ವೀರ ಪರಾಕ್ರಮಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು.

ಪ್ರವಾದಿವರ್ಯರು(ಸ) ತಮೀಮ್ ಗೋತ್ರದ ಈ ಸವಾಲನ್ನು ಸ್ವೀಕರಿಸುವುದೆಂದು ನಿರ್ಧರಿಸಿದರು.

ಅವರಿಗೆ ಉತ್ತರ ನೀಡುವುದಕ್ಕಾಗಿ ಪ್ರವಾದಿರ್ಯರು(ಸ) ತನ್ನ ಸಂಗಡಿಗರಾದ ಹಸ್ಸಾನಿಬ್ನು ಸಾಬಿತ್ ಮತ್ತು ಸಾಬಿತಿಬ್ನು ಕೈಸ್‌ರಿಗೆ ಸೂಚಿಸಿದರು. ಹಸ್ಸಾನ್ ಹಾಡುವ ಮೂಲಕ ಮತ್ತು ಸಾಬಿತ್ ಭಾಷಣ ನೀಡುವ ಮೂಲಕ ಪ್ರವಾದಿವರ್ಯರು(ಸ) ಮತ್ತು ಮುಸ್ಲಿಮರನ್ನು ಪ್ರಶಂಸಿಸಿದರು. ತಮೀಮ್‌ನ ತಂಡ ಸೋಲೊಪ್ಪಿ ಕೊಂಡು ಪ್ರವಾದಿವರ್ಯರಿಗೆ(ಸ) ಶರಣಾಯಿತು. ಆನಂತರ ಪ್ರವಾದಿವರ್ಯರು ಸೆರೆಯಾಳುಗಳನ್ನು ಬಿಟ್ಟುಕೊಟ್ಟರು. ಮಾತ್ರ ವಲ್ಲ ತಮೀಮ್‌ನ ಬೇರೆ ಬೇರೆ ಗೋತ್ರಗಳಿಗೆ ಬೇರೆ ಬೇರೆ ನಾಯಕರನ್ನು ಕೂಡಾ ನಿಶ್ಚಯಿಸಿ ಕೊಟ್ಟಿದ್ದರು.

ಆದರೆ ಪ್ರವಾದಿವರ್ಯರು ನಿಧನರಾದದ್ದೇ ತಡ ಈ ಗೋತ್ರ ದಲ್ಲಿ ಜಗಳ ಆರಂಭಗೊಂಡಿತು. ಅದು ಝಕಾತ್ ಪಾವತಿಸುವ ವಿಚಾರದಲ್ಲಿಯೇ ಜಗಳವಾಗಿತ್ತು. ಅವರ ನಡುವಿನ ಪೂರ್ವ ವೈಷಮ್ಯ ಕೂಡಾ ಜಗಳಕ್ಕೆ ಮತ್ತೊಂದು ಕಾರಣವಾಗಿತ್ತು. ಅವರಲ್ಲಿ ಒಂದು ವಿಭಾಗ ಝಕಾತನ್ನು ಖಲೀಫಾರಿಗೆ ನೀಡಬೇಕೆಂದು ವಾದಿಸಿದರೆ, ಇನ್ನೊಂದು ವಿಭಾಗವು ನೀಡ ಬೇಕಾಗಿಲ್ಲ, ಝಕಾತನ್ನು ತಾವೇ ವಿತರಿಸಿದರೆ ಸಾಕೆಂದು ವಾದಿಸುತ್ತಿದೆ. ಈ ವಿಭಾಗ ಅಬೂಬಕರ್‌ರಿಗೆ ಝಕಾತನ್ನು ಪಾವತಿಸದಿರುವ ಅಚಲವಾದ ನಿರ್ಧಾರವನ್ನು ತೊಟ್ಟಿದೆ. ತಾನೇ ಝಕಾತನ್ನು ವಿತರಿಸುವುದೆಂದು ಅದು ನಿರ್ಧರಿಸಿತು. ಈ ಭಿನ್ನಮತೀಯ ವಿಭಾಗದ ನಾಯಕತ್ವವನ್ನು ಯರ್‌ಬೂಲ್ ವಂಶವು ವಹಿಸಿಕೊಂಡಿದೆ. ಮಾಲಿಕಿಬ್ನು ನುವೈರಾ ಯರ್‌ಬೂಲ್ ಗೋತ್ರದ ಮುಖಂಡರಾಗಿದ್ದಾರೆ. ಕ್ರಮೇಣ ಮಾಲಿಕಿಬ್ನು ನುವೈರಾ ಝಕಾತನ್ನು ಪೂರ್ಣವಾಗಿ ನಿಷೇಧಿಸುವವರ ಪಕ್ಷವನ್ನು ಸೇರಿದರು. ಮದೀನಾದ ಇಸ್ಲಾಮಿಕ್ ರಾಷ್ಟ್ರದ ವಿರೋಧಿಯಾಗಿ ಮಾರ್ಪಟ್ಟರು.

ತಮೀಮ್ ಗೋತ್ರ ಪರಸ್ಪರ ಕಲಹ ನಿರತವಾಗಿರುವ ಈ ಸಂದರ್ಭದಲ್ಲಿ ಇರಾಕ್‌ನಿಂದ ಸಜ್ಜಾಹ್ ಎಂಬ ಪ್ರವಾದಿತ್ವವನ್ನು ವಾದಿಸುವ ಮಹಿಳೆ ತನ್ನ ಪರಿವಾರದೊಂದಿಗೆ ಬುತಾಹ್‌ಗೆ ಆಗಮಿಸಿದಳು. ಸಜ್ಜಾಹ್ ಯರ್‌ಬೂಲ್ ಕುಟುಂಬದ ಹಾರಿಸ್ ಎಂಬವರ ಪುತ್ರಿಯಾಗಿದ್ದರು. ಅವಳನ್ನು ಇರಾಕಿನ ತಗ್‌ಲುಬ್ ಗೋತ್ರಕ್ಕೆ ವಿವಾಹ ಮಾಡಿಕೊಡಲಾಗಿತ್ತು. ಆದುವೇ ಅವಳು ಬುತಾಹ್‌ನಿಂದ ಇರಾಕ್‌ನೆಡೆಗೆ ಹೋಗಲು ಕಾರಣವಾಗಿತ್ತು. ಅಲ್ಲಿ ಅಲ್‌ಜಝೀರಾ ಎಂಬಲ್ಲಿ ವಾಸಿಸುತ್ತಿದ್ದಳು. ಅಲ್ಲಿಗೆ ಹೋದ ನಂತರ ತನ್ನ ಸಂಬಂಧಿಕರ ಜತೆಯಲ್ಲಿ ಕ್ರೈಸ್ತಧರ್ಮವನ್ನು ಸ್ವೀಕರಿಸಿದ್ದಳು. ಸಜ್ಜಾಹ್ ಸಮರ್ಥೆ ಹಾಗೂ ಧೈರ್ಯಶಾಲಿಯಾಗಿರುವ ಓರ್ವ ಮಹಿಳೆಯಾಗಿದ್ದಳು. ತನಗೂ ಅದೃಶ್ಯ ವಿಚಾರಗಳು ತಿಳಿದಿವೆಯೆಂದು ಆಕೆ ವಾದಿಸುತ್ತಿದ್ದಳು. ಇರಾಕ್‌ನಲ್ಲಿರುವ ಯಹೂದಿಗಳು ಮತ್ತು ಕ್ರೈಸ್ತ ವಿಭಾಗಗಳು ಸಮಾನವಾಗಿ ಪ್ರವಾದಿವರ್ಯರೊಡನೆ(ಸ) ದ್ವೇಷವನ್ನು ಸಾಧಿಸುತ್ತಿತ್ತಷ್ಟೇ. ಅವರಂತೆ ಸಜ್ಜಾಹ್‌ಳೂ ಕೂಡಾ ಪ್ರವಾದಿವರ್ಯರನ್ನು ದ್ವೇಷಿಸತೊಡಗಿದಳು.

ಹೀಗಿರುವಾಗ, ಪ್ರವಾದಿವರ್ಯರು ನಿಧನರಾಗಿರುವ ಸುದ್ದಿ ಇರಾಕಿಗೂ ಪಸರಿಸಿದೆ. ಇದು ಸರಿಯಾದ ಸಂದರ್ಭವೆಂದು ಸಜ್ಜಾಹ್ ನಿರ್ಧರಿಸಿದಳು. ಅಬೂಬಕರ್‌ರೊಂದಿಗೆ ಯುದ್ಧ ಮಾಡಲೆಂದು ತನ್ನ ಸೇನಾ ಪರಿವಾರದೊಂದಿಗೆ ಅವಳು ಬುತಾಹ್‌ಗೆ ಹೊರಟು ಬಂದಳು. ಅವಳ ಸೇನೆಯಲ್ಲಿ ನಮಿರ್, ರಬೀಅ, ಇಯಾದ್ ಮತ್ತು ಶೈಬಾನ್ ಗೋತ್ರಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವಳು ಇರಾಕಿನಿಂದ ಬುತಾಹ್‌ಗೆ ಆಗಮಿಸಿ ಮೊದಲು ತಮೀಮ್ ಗೋತ್ರವನ್ನು ಭೇಟಿ ಮಾಡಿ ಸಹಕರಿಸುವಂತೆ ಕೇಳಿಕೊಂಡಳು. ಹೇಗೂ ಅವರು ಪರಸ್ಪರ ಕಾದಾಡುತ್ತಿರುವುದರಿಂದ ಅವರಲ್ಲಿ ಕೆಲವರನ್ನಾದರೂ ತನ್ನ ಪಕ್ಷವನ್ನು ಸೇರಿಸಿಕೊಳ್ಳ ಬೇಕೆಂಬುದು ಅವಳ ಉದ್ದೇಶವಾಗಿತ್ತು.

## ಹಿರಿಯ ಹೋರಾಟ

ಒಂದು ಯುದ್ಧರಂಗದಿಂದ ಮರಳುವಾಗ ಪ್ರವಾದಿ ಮುಹಮ್ಮದ್‌ರು ತಮ್ಮ ಅನುಯಾಯಿಗಳನ್ನುದ್ದೇಶಿಸಿ ಹೀಗೆ ಹೇಳಿದರು. "ನಾವು ಈಗ ಮಾಡಿದ್ದಕ್ಕಿಂತ ಹಿರಿದಾದ ಹೋರಾಟದ ಕಡೆಗೆ ಮರಳುತ್ತಿದ್ದೇವೆ."

ಹೊಸ ಎದುರಾಳಿಗಳು ಮತ್ತು ಹೋರಾಟದ ಕುರಿತು ಕೇಳಿದ ಅನುಯಾಯಿಗಳು ಸಹಜವಾಗಿಯೇ ವಿಚಾರಿಸಿದರು- "ಅದು ಯಾರ ವಿರುದ್ಧದ ಹೋರಾಟ?" ಪ್ರವಾದಿಯವರು ಹೇಳಿದರು, "ನಮ್ಮ ಸ್ವೇಚ್ಛೆಯ ವಿರುದ್ಧ ಹೋರಾಟ."

ಜಗತ್ತಿನ ಅತಿದೊಡ್ಡ ರಣರಂಗ ಮಾನವನ ಮನಸ್ಸಾಗಿದೆ. ಪರಸ್ಪರ ವಿರುದ್ಧವಾದ ಎರಡು ಶಕ್ತಿಗಳು ಅಲ್ಲಿ ನಿರಂತರವಾಗಿ ಹೋರಾಡುತ್ತಿರುತ್ತವೆ. ಒಳಿತು ಮತ್ತು ಕೆಡುಕಿನ ಶಕ್ತಿಗಳವು. ಎರಡು ಶಕ್ತಿಗಳೂ ಮನುಷ್ಯನ ಮನಸ್ಸನ್ನು ತನ್ನತ್ತ ಸೆಳೆಯಲು ಬಲವಾಗಿ ಸಂಘರ್ಷಿಸುತ್ತಿರುತ್ತವೆ. ತೀರ್ಮಾನ ಕೈಗೊಳ್ಳುವುದರಲ್ಲಿ ಅವು ನಿರ್ಣಾಯಕ ಪಾತ್ರ ವಹಿಸುತ್ತವೆ.



ಇಬ್ರಾಹೀಮ್ ಸಈದ್

ಲೋಕದಲ್ಲಿ ನಡೆಯುವ ಎಲ್ಲ ಯುದ್ಧ-ಸಂಧಿಗಳು, ಸಂಘರ್ಷ-ಶಾಂತಿಗಳು, ಒಳಿತು-ಕೆಡುಕುಗಳು, ನೀತಿ-ಅನೀತಿಗಳು, ನ್ಯಾಯ-ಅನ್ಯಾಯ ಇತ್ಯಾದಿಗಳ ಉದ್ಭವ ಕೇಂದ್ರ ಮಾನವನ ಮನಸ್ಸಾಗಿದೆ. ಮನುಷ್ಯನ ಎಲ್ಲ ಕೃತ್ಯಗಳ ಆಧಾರ ಮತ್ತು ಆರಂಭ ಬಿಂದು ಅವನ ಅಂತರಂಗ ವಾಗಿದೆ. ಅಲ್ಲಿ ನಡೆಯುವ ಸಂಘರ್ಷದ ಜಯಾಪಜಯಗಳೇ ಅವುಗಳ ಸ್ವರೂಪವನ್ನು ನಿರ್ಣಯಿಸುತ್ತವೆ.

ಮನಸ್ಸಿನ ಸಾಮರ್ಥ್ಯವು ಅಗಾಧವಾಗಿದೆ. ಅದನ್ನು ಅಳತೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಲೋಕದ ಅತ್ಯಧಿಕ ಸಂಹಾರ ಶಕ್ತಿಯುಳ್ಳ ಬಾಂಬಿಗಿಂತಲೂ ಹೆಚ್ಚಿನ ಶಕ್ತಿ ಅದಕ್ಕಿದೆ. ಬಾಂಬ್ ಸಹಿತ ಎಲ್ಲವನ್ನೂ ಪ್ರಾಯೋಗಿಕ ರೂಪಕ್ಕೆ ಇಳಿಸುವುದಕ್ಕಿಂತ ಮುಂಚೆ ಅದರ ರೂಪರೇಖೆ ಮನಸ್ಸಿನಲ್ಲಿ ಉಂಟಾಗುತ್ತದೆ. ಆದ್ದರಿಂದ ಅಂತಿಮ ವಿಶ್ಲೇಷಣೆಯಲ್ಲಿ ನಿರ್ಮಾಣ ಮತ್ತು ಸಂಹಾರ ನಡೆಸುವುದು ಮನಸ್ಸಾಗಿದೆ. ಅದನ್ನು ಅಧೀನಗೊಳಿಸಿ ನಿಯಂತ್ರಿಸಲು ಸಾಧ್ಯವಾಗುವವರೇ ಗಟ್ಟಿಗರು. ಹೆಚ್ಚಿನವರಿಗೆ ಅದು ಅಸಾಧ್ಯವಾಗಿದೆ.

ಯುದ್ಧ ರಂಗದಲ್ಲಿ ಎದುರಾಳಿಗಳೊಂದಿಗೆ ಹೋರಾಡಿ ಮಡಿಯಲು ಯಾವುದೇ ಕಷ್ಟವೆನಿಸದ ಹಲ ವರಿಗೆ ತಮ್ಮ ಇಚ್ಛೆಗಳ ಸೆರೆಯಿಂದ ಮುಕ್ತಿ ಹೊಂದು ವುದು ಅಸಾಧ್ಯವೆನಿಸುತ್ತದೆ. ಅತ್ಯುನ್ನತ ಧ್ಯೇಯಕ್ಕಾಗಿ ಪ್ರಾಣತ್ಯಾಗಕ್ಕೆ ಸ್ವಲ್ಪವೂ ಅಳುಕದ ಜನರು ಅನ್ಯಾಯವಾಗಿ ಕಬಳಿಸಿದ ಅನ್ಯರ ಸೊತ್ತುಗಳನ್ನು ಮರಳಿಸಲು ಸಿದ್ಧವಾಗದೆ ಇರುವುದನ್ನು ನಾವು ಕಾಣುತ್ತೇವೆ. ರಣರಂಗದಲ್ಲಿ ಗಾಯಗೊಂಡು ನೋವಿನಿಂದ ಚಡಪಡಿ ಸುವಾಗಲೂ ಸಂತೋಷವಾಗಿ ಅವುಗಳನ್ನೆಲ್ಲಾ ಸಹಿಸಿದರೂ ಸಂಗಾತಿಯ ಒಂದು ಆಕ್ಷೇಪ ಅಥವಾ ಕೆಟ್ಟ ಮಾತು ಅವನನ್ನು ರೇಗಿಸಿ ಬಿಡುತ್ತದೆ.

ಮನಸ್ಸು ಮರ್ಕಟದಂತೆ. ಎಲ್ಲ ರೀತಿಯ ನಿಯಂತ್ರಣಗಳನ್ನೂ ವಿಫಲಗೊಳಿಸಲು ಅದು ನಿರಂತರ ಶ್ರಮಿಸುವುದು. ಅಲ್ಲಿ ಉದಿಸುವ ಆಸೆ-ಆಕಾಂಕ್ಷೆಗಳಿಗೆ ಮಿತಿಯಿಲ್ಲ. ಅದರ ಹಿಂದೆ ಅನಿಯಂತ್ರಿತವಾಗಿ ಓಡುವವರು ಪಾಪಿಗಳು ಮತ್ತು ಅವರು ಪರಾಜಿತರಾಗುವರು. ಅವುಗಳ ಮೇಲೆ ನಿಯಂತ್ರಣ ಸಾಧಿಸಿದವರು ಜಯಶೀಲರಾಗುವರು.

## ಮೂಸಾ v/s ಫಿರ್‌ಔನ್- 13

ಅಖ್ಲಾಕ್ ಹುಸೈನ್

# ಪವಾಡಗಳು



**ಮೂ**ಸಾ ಎಷ್ಟು ದಿಗ್ಭ್ರಾಂತರಾಗಿದ್ದರೆಂದರೆ ಪ್ರಶ್ನೆ ಕೇಳುವ ಪಾವನ ಅಸ್ತಿತ್ವವು ಎಲ್ಲವನ್ನೂ ಬಲ್ಲವನೂ ನೋಡುವವನೂ ಆಗಿರುವನೆಂಬ ಪ್ರಜ್ಞೆಯೇ ಅವರಿಗೆ ಇರಲಿಲ್ಲ. ಕೈಯಲ್ಲೇನಿದೆಯೆಂಬುದನ್ನೂ ಆತ ಬಲ್ಲವನಾಗಿದ್ದನು. ಈ ಪ್ರಶ್ನೆಯನ್ನು ಮಾಹಿತಿ ಪಡೆಯಲಿಕ್ಕಾಗಿ ಕೇಳಲಾಗಿರಲಿಲ್ಲ. ಬದಲಾಗಿ, ನಿನ್ನ ಕೈಯಲ್ಲಿರುವುದು ಒಂದು ನಿರ್ಜೀವ ಲಾಠಿಯೆಂಬುದರ ಕಡೆಗೆ ಗಮನ ಸೆಳೆಯಲಿಕ್ಕಾಗಿತ್ತು. ಕೂಡಲೇ ಉತ್ತರಿಸಿದರು. ಅದರ ಗುಣ ವೈಶಿಷ್ಟ್ಯಗಳನ್ನೆಲ್ಲಾ ವಿವರಿಸತೊಡಗಿದರು.

ಮೂಸಾ (ಹೀಗೆ) ಉತ್ತರ ಕೊಟ್ಟರು- "ಇದು ನನ್ನ ಲಾಠಿ. ನಾನು ಇದನ್ನು ಊರಿಕೊಂಡು ನಡೆಯುತ್ತೇನೆ. ಇದರಿಂದ ಆಡುಗಳಿಗಾಗಿ ಎಲೆಗಳನ್ನು ಝಾಡಿಸುತ್ತೇನೆ. ಇದರಿಂದ ನಾನು ಇನ್ನೂ ಅನೇಕ ಪ್ರಯೋಜನಗಳನ್ನು ಪಡೆಯುತ್ತೇನೆ." (ತಾಹಾ: 18)

ಅಲ್ಲಾಹನ ಅಪ್ಪಣೆ- ಮೂಸಾ! ಅದನ್ನು ಎಸೆದು ಬಿಡು. (ತಾಹಾ: 19)

ಆಜ್ಞೆಯನ್ನು ಪಾಲಿಸುತ್ತಾ ಅದನ್ನು ನೆಲಕ್ಕೆಸೆದರು. ನೋಡುವುದೇನು? ನೆಲಕ್ಕೆ ಬಿದ್ದೊಡನೆ ಅಲ್ಲೊಂದು ವಿಚಿತ್ರ ನಡೆಯಿತು.

"ಅವರು ಎಸೆದು ಬಿಟ್ಟರು -ಹಠಾತ್ತನೆ ಅದೊಂದು ಓಡುತ್ತಿರುವ ಹಾವಾಗಿತ್ತು." (ತಾಹಾ: 20)

ಈಗ, ಮೂಸಾ ಗಾಬರಿಗೊಂಡರು. ಇದೇನಾಯಿತೆಂದು ಕೂಡಲೇ ಭಯದಿಂದ ಓಡಲಾರಂಭಿಸಿದರು. ತಿರುಗಿಯೂ ನೋಡಲಿಲ್ಲ. ನಾನೆಲ್ಲಿದ್ದೇನೆ. ಯಾವ ಪಾವನ ಅಸ್ತಿತ್ವದ ಮುಂದೆ ನಿಂತಿದ್ದೇನೆ ಎಂಬುದನ್ನೂ ಮರೆತು ಬಿಟ್ಟರು. ಅಲ್ಲಾಹನಿಗೆ ಅವರ ಮುಗ್ಧತೆ ಮತ್ತು ಈ ವರ್ತನೆ ಇಷ್ಟವಾಗಿರಬೇಕು. ಬಹಳ ಪ್ರೀತಿಯೊಂದಿಗೆ ಕೂಗಿ ಕರೆದನು. ಸಾಂತ್ವನ ನೀಡಿದನು. ಸಮಾಧಾನ ಪಡಿಸುತ್ತಾ ಹೀಗೆಂದನು,

"ಅದನ್ನು ಹಿಡಿದುಕೊಳ್ಳಿರಿ. ಹೆದರಬೇಡಿರಿ. ನಾವು ಅದನ್ನು ಪೂರ್ವಸ್ಥಿತಿಗೇ ತರುವೆವು." (ತಾಹಾ: 21)

ಅವರು ಹೆದರುತ್ತಾ ಅದನ್ನು ಹಿಡಿದಾಗ ಏನಾಶ್ಚರ್ಯ! ಅದು ಲಾಠಿಯಾಗಿಯೇ ಇತ್ತು. ಆಶ್ಚರ್ಯ, ದಿಗ್ಭ್ರಾಂತಿ ಹಾಗೂ ನಾಚಿಕೆಯ ಮಿಶ್ರ ಭಾವನೆಗಳಿಂದ ತಳಮಳಗೊಳ್ಳುತ್ತಿದ್ದಂತೆಯೇ ಇನ್ನೊಂದು ಆಜ್ಞೆ;

"ನಿಮ್ಮ ಕೈಯನ್ನು ಬಗಲಿನಲ್ಲಿಡಿರಿ. ಏನೊಂದೂ ಪ್ರಯಾಸವಿಲ್ಲದೆ ಹೊಳೆಯುತ್ತ ಹೊರಬರುವುದು. ಇದು ಎರಡನೆಯ ನಿದರ್ಶನ. ಏಕೆಂದರೆ ನಾವು ನಿಮಗೆ ನಮ್ಮ ದೊಡ್ಡ ನಿದರ್ಶನಗಳನ್ನು ತೋರಿಸುವವರಿದ್ದೇವೆ." (ತಾಹಾ: 22-23)

ಒಂದು ಸಾಲದ್ದಕ್ಕೆ ಇನ್ನೊಂದು. ಲಾಠಿಯು ಹೆಬ್ಬಾವಾದದ್ದು ಒಂದಾದರೆ, ಕೈಯು ಪ್ರಕಾಶಮಯವಾಗುತ್ತಿದೆ. ಏನೋ ವಿಶೇಷವಿರಬೇಕೆಂದು ಭಾವಿಸಿದರು. ಆದ್ದರಿಂದಲೇ ಅದನ್ನು ಸಂಕೇತಗಳೆನ್ನಲಾಗಿದೆ. ಈಗ ಅದರ ಮರ್ಮವೇನೆಂದು ತಿಳಿಯುವ ಮತ್ತು ಈ ಮಹಾನ್ ಕೊಡುಗೆಗಳನ್ನು ನೀಡಿದುದರ ಉದ್ದೇಶವನ್ನು ಅರಿಯುವ ಜಿಜ್ಞಾಸೆ ಅವರಲ್ಲಿ ಮೂಡಿತು.

ಮೂಸಾರಿಗೆ ನೀಡಲಾದ ಈ ಕೊಡುಗೆಗಳು, ತೋರಿಸಲಾದ ಪವಾಡಗಳು ಮತ್ತು ಮಹಾನ್ ದೌತ್ಯವನ್ನು ನೀಡಿದುದರಿಂದಾಗಿ ಅವರ ಪರಿಸ್ಥಿತಿ ಮತ್ತು ಪ್ರತಿಕ್ರಿಯೆಗಳು ಇನ್ನಿತರ ಕಡೆಗಳಲ್ಲಿ ವಿವರವಾಗಿ ಬಂದಿವೆ.

### ಪವಾಡಗಳ ಉದ್ದೇಶ

"ನಿಮ್ಮ ಲಾಠಿಯನ್ನು ಎಸೆದು ಬಿಡಿರಿ" (ಎಂದು ಅಪ್ಪಣೆಯಾಯಿತು) ಆ ಲಾಠಿಯು ಹಾವಿನಂತೆ ತೆವಳುತ್ತಿರುವುದನ್ನು ಕಂಡೊಡನೆ ಮೂಸಾ ಬೆನ್ನು ತಿರುಗಿಸಿ ಓಟಕ್ಕಿತ್ತರು ಮತ್ತು ಅವರು ತಿರುಗಿಯೂ ನೋಡಲಿಲ್ಲ. (ಅಪ್ಪಣೆಯಾಯಿತು) "ಮೂಸಾ, ಮರಳಿ ಬನ್ನಿರಿ, ಹೆದರಬೇಡಿರಿ, ನೀವು ಸಂಪೂರ್ಣ ಸುರಕ್ಷಿತರಾಗಿದ್ದೀರಿ. ನಿಮ್ಮ ಕೈಯನ್ನು ಜೇಬಿನೊಳಗೆ ಹಾಕಿರಿ, ಅದು ಪ್ರಕಾಶಿಸುತ್ತಾ ನಿರಾಯಾಸವಾಗಿ ಹೊರಬರುವುದು ಮತ್ತು ಭೀತಿಯಿಂದ ಪಾರಾಗಲಿಕ್ಕಾಗಿ ನಿಮ್ಮ ಬಾಹುಗಳನ್ನು ಬಿಗಿದುಕೊಳ್ಳಿರಿ. ನಿಮ್ಮ ಪ್ರಭುವಿನ ಕಡೆಯಿಂದ ಫಿರ್‌ಔನ್ ಮತ್ತು ಅವನ ಆಸ್ಥಾನಿಕರ ಮುಂದಿಡಲಿಕ್ಕಾಗಿ, ಇವೆರಡು ಪ್ರತ್ಯಕ್ಷ ನಿದರ್ಶನಗಳಾಗಿವೆ. ಅವರು ಮಹಾ ಆಜ್ಞೋಲ್ಲಂಘಕರಾಗಿದ್ದಾರೆ." (ಅಲ್ ಕಸಸ್: 31-32)

ಅವನೇ ನಿಮಗಾಗಿ ಆಕಾಶದಿಂದ ನೀರನ್ನು ಸುರಿಸಿದನು. ಅದನ್ನು ನೀವು ಸ್ವತಃ ಕುಡಿಯುತ್ತೀರಿ ಮತ್ತು ಅದರಿಂದ ನಿಮ್ಮ ಪ್ರಾಣಿಗಳಿಗೆ ಮೇವೂ ಉಂಟಾಗುತ್ತದೆ. ಅವನು ಈ ನೀರಿನ ಮೂಲಕ ಬೆಳೆ ಬೆಳೆಯಿಸುತ್ತಾನೆ. ಝೈತೂನ್ (ಜೀತ ವೃಕ್ಷ), ಖರ್ಜೂರ, ದ್ರಾಕ್ಷೆ ಮತ್ತು ಇತರ ನಾನಾ ವಿಧದ ಫಲಗಳನ್ನು ಉತ್ಪಾದಿಸುತ್ತಾನೆ. ವಿವೇಚಿಸುವವರಿಗೆ ನಿಶ್ಚಯವಾಗಿಯೂ ಇದರಲ್ಲಿ ಒಂದು ದೊಡ್ಡ ನಿದರ್ಶನವಿದೆ. ಅವನು ನಿಮಗಾಗಿ ಇರುಳು-ಹಗಲುಗಳನ್ನೂ ಸೂರ್ಯ-ಚಂದ್ರರನ್ನೂ ನಿಯಂತ್ರಿಸಿರುತ್ತಾನೆ. ಎಲ್ಲಾ ನಕ್ಷತ್ರಗಳೂ ಅವನ ಅಪ್ಪಣೆಯಿಂದ ನಿಯಂತ್ರಿತವಾಗಿವೆ. ಬುದ್ಧಿಜೀವಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ. (ಅನ್ನಹ್ಲ್: 10-12)

ಈ ಸೂಕ್ತಗಳಿಂದ ತಿಳಿದು ಬರುವುದೇನೆಂದರೆ ಲಾಠಿಯ ಸ್ವರೂಪವನ್ನು ಕಂಡು ಮೂಸಾ ತುಂಬಾ ಗಾಬರಿಗೊಂಡು ಭಯದಿಂದ ಓಡತೊಡಗಿದರು. ಆದರೆ ಅಲ್ಲಾಹನು ಅವರಿಗೆ ಕೂಡಲೇ ಸಮಾಧಾನ ಹೇಳಿದನು. ಭಯ ದೂರವಾದಾಗ ನೀವೇನೂ ಹೆದರಬೇಕಾಗಿಲ್ಲ. ನಿಮಗೇನೂ ಅಪಾಯ ಎದುರಾಗದು ಎಂದು ಸಾಂತ್ವನ ನೀಡಿದನು. ನಿಮ್ಮ ಮೇಲೆ ಈ ಮಹಾನ್ ಹೊಣೆಯನ್ನು ವಹಿಸಿಕೊಟ್ಟಿರುವ ಆ ಮಹಾನ್ ಅಸ್ತಿತ್ವವು ನಿಮ್ಮನ್ನು ಒಬ್ಬಂಟಿಯಾಗಿ ಬಿಡಲಾರನು. ಅಗತ್ಯ ಬಂದಾಗಲೆಲ್ಲ ನಿಮಗೆ ಸಹಾಯ ಮಾಡುವನು ಎಂದು ಹೇಳಿ ಅವರಿಗೆ ಅವನ ಸ್ಥಾನವನ್ನು ನೆನಪಿಸಿ, ತನ್ನನ್ನು ಭೇಟಿಯಾಗುವ ಶಿಷ್ಟಾಚಾರಗಳನ್ನು ಕಲಿಸಿದನು. ನೀವಂತೂ ಅಲ್ಲಾಹನ ಸಂದೇಶ ವಾಹಕರಾಗಿರುವಿರಿ. ಅಲ್ಲಾಹನ ಆಪ್ತ ದಾಸರ ಮೇಲೆ ಆತನ ಅನುಗ್ರಹಗಳು ವರ್ಷಿಸುತ್ತಲಿರುತ್ತದೆ. ಆದ್ದರಿಂದ ಹೆದರುವುದೇಕೆ? ಹೆದರಬೇಕಾದವರು ನೀವಲ್ಲ. ಆತನ ಆಜ್ಞೋಲ್ಲಂಘನೆ ಮಾಡುವವರು ಮತ್ತು ಅವನಿಂದ ತಿರಸ್ಕರಿಸಲ್ಪಟ್ಟವರಾಗಿದ್ದಾರೆ ಎಂದು ಹೇಳಿದನು.

ಅನಂತರ ಅವರಿಂದ ಮುಂದಾಗಿ ಬರಲಿದ್ದ ಪ್ರಶ್ನೆಗೆ ಮೊದಲೇ ಉತ್ತರವನ್ನು ನೀಡುತ್ತಾನೆ. ಅಂದರೆ ದಾಸನಿಂದ ಏನಾದರೂ ತಪ್ಪಾದರೆ ಮತ್ತು ಅದಕ್ಕಾಗಿ ಅವನು ತೌಬಾ ಮಾಡಿದರೆ ಅವನನ್ನು ಪ್ರಭು ಶಿಕ್ಷಿಸುವುದಿಲ್ಲ. ಬದಲಾಗಿ ಕ್ಷಮಿಸಿ ಬಿಡುತ್ತಾನೆ. ಈ ರೀತಿ ಅವರು ಮನದಲ್ಲೇ ಹೆದರುತ್ತಿದ್ದ ತನ್ನ ತಪ್ಪಿಗೆ ಮುಂಗಡ ಕ್ಷಮೆಯ ಪರವಾನಿಗೆಯೂ ಲಭಿಸಿತು. ತರುವಾಯ ಅವರೊಂದಿಗೆ ಹೀಗೆ ಹೇಳಲಾಯಿತು, ನಿಮಗೆ ನೀಡಲಾಗುವುದು ಕೇವಲ ಈ ಎರಡು ಪವಾಡಗಳಲ್ಲ. ನಿಮಗೆ ವಹಿಸಿಕೊಡಲಾದ ಈ ಮಹಾನ್ ಹೊಣೆಗಾರಿಕೆಯನ್ನು ಏನೊಂದೂ ಭಯವಿಲ್ಲದೆ ನಿರ್ವಹಿಸಲಿಕ್ಕಾಗಿ ಇನ್ನೂ ಏಳು ದೃಷ್ಟಾಂತಗಳನ್ನು ಮತ್ತು ಸಂಕೇತಗಳನ್ನು ನೀಡಲಾಗುತ್ತದೆ.


**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |

**ಗಲ್ಫ್ ರಾಷ್ಟ್ರಗಳಲ್ಲಿ**

| | | |
|---|---|---|
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |

website: www.sanmarga.com
email: sanmargamatter@gmail.com


# ಭಾರತದಲ್ಲಿ ಇಸ್ಲಾಮೀ ಹಣಕಾಸು ಸಂಸ್ಥೆಗಳಿಗೆ ಒಂದು ಮಾರ್ಗಸೂಚಿ

## ಇಸ್ಲಾಮೀ ಬ್ಯಾಂಕಿಂಗ್- 58

ಪ್ರೊ| ಎಂ.ಎ. ಬಾಗ್‌ಸಿರಾಜ್

ಇಸ್ಲಾಮಿಕ್ ಹಣಕಾಸು ಸಂಸ್ಥೆಗಳನ್ನು ಆರಂಭಿಸಬೇಕೆಂಬುದು ಭಾರತದ ಪ್ರತಿಯೋರ್ವ ಮುಸ್ಲಿಮರ ಬಯಕೆಯಾಗಿದೆ. ಆದರೂ ಅದರ ನಿಯಮಗಳು ಹಾಗೂ ಕಾರ್ಯ ವಿಧಾನಗಳ ಬಗ್ಗೆ ಅವರ ತಿಳುವಳಿಕೆಯಲ್ಲಿ ಪ್ರದೇಶದ ಪರಿಸ್ಥಿತಿ, ಸಂಪನ್ಮೂಲಗಳ ಲಭ್ಯತೆಯ ಪ್ರಕಾರ ಇಸ್ಲಾಮೀ ಹಣಕಾಸು ಸಂಸ್ಥೆಗಳನ್ನು (**Islamic Financial Institution**) ಪ್ರಾರಂಭಿಸುವ ಕುರಿತು ಮಾರ್ಗ ಸೂಚಿಯನ್ನು ಇಲ್ಲಿ ವಿವರಿಸಲಾಗುವುದು. **IFI in India programme, problem and prospects** ಎಂಬ ಹೆಸರಿನಲ್ಲಿ 1996–2010ರ ಕಾಲಾವಧಿಯಲ್ಲಿ ಕಿಂಗ್ ಅಬ್ದುಲ್ ಅಝೀಝ್ ಯುನಿವರ್ಸಿಟಿಯ ಸಹಾಯದಲ್ಲಿ ನಡೆದಿರುವ ಸಮೀಕ್ಷಾ ಅಧ್ಯಯನವನ್ನು ಆಧಾರವಾಗಿಟ್ಟು ಈ ಪ್ರಬಂಧವನ್ನು ತಯಾರಿಸಲಾಗಿದೆ.

ಈ ಪ್ರಬಂಧವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಒಂದನೇ ಭಾಗದಲ್ಲಿ ಇಸ್ಲಾಮೀ ಹಣಕಾಸು ಸಂಸ್ಥೆ ಪ್ರಾರಂಭಿಸಲು ಯಾವೆಲ್ಲ ಘಟಕಗಳ ಅಗತ್ಯವಿದೆ ಎಂಬುದನ್ನು ವಿವರಿಸಲಾಗಿದೆ. ಭಾಗ ಎರಡರಲ್ಲಿ ಭಾರತೀಯ ಪರಿಸ್ಥಿತಿಯಲ್ಲಿ ಭಿನ್ನಭಿನ್ನವಾದ ಮಾದರಿಗಳನ್ನು ವಿವರಿಸಲಾಗಿದೆ. ಮೂರನೇ ಭಾಗದಲ್ಲಿ ಸಂಸ್ಥೆಯನ್ನು ಆರಂಭಿಸಿದ ಬಳಿಕ ಅದರ ಬೆಳವಣಿಗೆ, ಏಳಿಗೆಗಾಗಿ ತಾನೇನು ಮಾಡಬೇಕೆಂಬ ಸೂಚನೆಗಳು ಅಡಕವಾಗಿವೆ. ಇಸ್ಲಾಮೀ ಹಣಕಾಸು ಸಂಸ್ಥೆಗಳು ಭಾರತದಲ್ಲಿ ಇಸ್ಲಾಮಿಕ್ ಬ್ಯಾಂಕುಗಳು ಆರಂಭವಾಗುವುದಕ್ಕೆ ಮೆಟ್ಟಿಲಾಗಬೇಕು. ಮಧ್ಯಾವಧಿಯಲ್ಲಿ ಕೆಲವು ಸಂಸ್ಥೆಗಳು ಪತನಗೊಂಡಿರುವುದು ಆತ್ಮವಿಶ್ವಾಸ ಕಳಕೊಳ್ಳುವುದಕ್ಕೂ ಕಾರಣವಾಗಿದೆ. ಆದರೆ ಪತನದಿಂದ ಪಾಠವನ್ನು ಕಲಿತು ಇದು ಅಸ್ತಿತ್ವದಲ್ಲುಳಿಯುವಂತಹ ಸಂಸ್ಥೆಗಳೆಂದು ಮುಸ್ಲಿಮರು ಪ್ರಯತ್ನಿಸಬೇಕಾಗಿದೆ.

1. ಇಸ್ಲಾಮಿಕ್ ಸಂಸ್ಥೆ ಪ್ರಾರಂಭಿಸಲು ಅಗತ್ಯವಾದ ನಿಬಂಧನೆಗಳು:

ಅಚಂಚಲ ಬಯಕೆ ಮತ್ತು ಸ್ಪಷ್ಟಗುರಿ; ಇಸ್ಲಾಮಿಕ್ ಹಣಕಾಸು ಸಂಸ್ಥೆಗಳನ್ನು ಪ್ರಾರಂಭಿಸುವುದಕ್ಕೆ ದೃಢವಾದ ಆಗ್ರಹ ಮತ್ತು ನಿರ್ಣಾಯಕ ಗುರಿಯಿರಬೇಕು. ಬಡ್ಡಿರಹಿತ ಸಾಲ ಕೊಡುವಂತಹ ಚಾರಿಟೇಬಲ್ ಸಂಘವೋ ಅಥವಾ ಲಾಭನಷ್ಟ ಪಾಲುಗಾರಿಕೆಯಲ್ಲಿ ಕಾರ್ಯ ನಿರ್ವಹಿಸುವ ವಾಣಿಜ್ಯ–ಹಣಕಾಸು ಸಂಸ್ಥೆಯೋ ಪ್ರಾರಂಭಿಸುವುದೆಂಬ ಬಗ್ಗೆ ಸ್ಪಷ್ಟವಾದ ನಿರ್ಣಯವಾಗಿರಬೇಕು.

2. ಸಾಧ್ಯತಾ ಅಧ್ಯಯನ ಪ್ರೊಜೆಕ್ಟ್ ರಿಪೋರ್ಟ್: ಪ್ರದೇಶಗಳು ಹೊಂದಿರುವ ಗುಣಕ್ಕೆ ತಕ್ಕಂತೆ ತಜ್ಞರ ನೆರವು ಪಡೆದು ಪ್ರಾರಂಭಿಸಲು ಬಯಸುವ ಸಂಸ್ಥೆಗಳ ಸಾಧಕ ಬಾಧಕಗಳ ಕುರಿತು ಅಧ್ಯಯನವನ್ನು ನಡೆಸಬೇಕಾಗಿದೆ. ಪ್ರೊಜೆಕ್ಟ್ ರಿಪೋರ್ಟ್‌ನಲ್ಲಿ ಯಾವ ರೀತಿಯ ಸಂಸ್ಥೆಯನ್ನು ಪ್ರಾರಂಭಿಸಲಾಗುವುದು. ಅದಕ್ಕೆ ಯಾವ್ಯಾವ ಸಂಪನ್ಮೂಲಗಳನ್ನು ಹೊಂದಿರಬೇಕು. ಎಷ್ಟು ಖರ್ಚು ತಗಲುವುದು, ನಿರೀಕ್ಷಿತ ಪ್ರಯೋಜನ ಯಾವುದು... ಆಡಳಿತಾತ್ಮಕ (ಘಟನವಾಳಿಗಳು) ಹೇಗೆ ಪ್ರಾರಂಭಿಸುವುದು ಎಂಬುದು ಪರಾಮರ್ಶಿಸಲ್ಪಡಬೇಕು.

3. ಸಾರ್ವಜನಿಕ ಜಾಗೃತಿ: ಪ್ರಾರಂಭಿಸುವ ಸಂಸ್ಥೆಯ ಗುಣವೈಶಿಷ್ಟ್ಯಗಳು, ಅದರ ಸಾಧನೆಗಳನ್ನು ಸಾರ್ವಜನಿಕ ವಲಯಕ್ಕೆ ತಿಳಿಸಲು ಮತ್ತು ಅವರಿಂದ ಸಹಕಾರವನ್ನು ಯೋಚಿಸಲು ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬೇಕು.

4. ಫಲಾನುಭಾವಿಗಳ ನಿರ್ಣಯ ಯಾವ ವಿಭಾಗ ಸಂಸ್ಥೆಯಿಂದ ಫಲಾನುಭವಿಗಿರಬೇಕೆಂಬ ಕಾರ್ಯ ಇಸ್ಲಾಮೀ ಹಣಕಾಸು ಸಂಸ್ಥೆಗೆ ತುಂಬ ಪ್ರಾಮುಖ್ಯ ವಿಚಾರವಾಗಿರುತ್ತದೆ. ಕೆಲವು ಸಂಸ್ಥೆಗಳು ಬಡತನ ರೇಖೆಗಿಂತ ಕೆಳಗಿರುವವರಿಗೆ ಸಹಾಯ ನೀಡುವ ಬಡ್ಡಿರಹಿತ ಸಾಲಗಳ್ನು ಮಾತ್ರವೇ ಉದ್ದೇಶವಾಗಿರಿಸುತ್ತದೆ. ಇನ್ನು ಕೆಲವು ಸಣ್ಣ ಪ್ರಮಾಣದ ವ್ಯಾಪಾರಿಗಳನ್ನು ಉದ್ದೇಶವಾಗಿರಿಸಿಕೊಳ್ಳುತ್ತವೆ. ಕೆಲವು ಸಂಸ್ಥೆಗಳು ಮಧ್ಯಮ ವರ್ಗವನ್ನು ಗುರಿಯಾಗಿರಿಸಿಕೊಂಡಿರುತ್ತವೆ. ಫಲಾನುಭವಿಗಳ ಗುಣಕ್ಕೆ ತಕ್ಕಂತೆ ಸಂಸ್ಥೆಗಳ ನೀತಿ–ಕಾರ್ಯಕ್ರಮಗಳು ರೂಪಿಸಬೇಕು.

# ಪತಿ-ಪತ್ನಿ: ಒಲವೇ ನಮ್ಮ ಬದುಕು

ಮಹಿಳಾ ವೇದಿಕೆ

✍ ರಹೀನಾ ತೊಕ್ಕೊಟ್ಟು

**ಮಾ**ನವ ಎಂಬ ಯಂತ್ರಕ್ಕೆ ಮನೆ ಎಂಬ ಸ್ಥಳಾವಕಾಶ ಇದ್ದಾಗಲೇ ಆತ ಸುರಕ್ಷಿತ. ಕೂರಲು ಮನೆ ಇದ್ದರೆ ಸಾಕು, ತಿನ್ನದಿದ್ದರೂ ಕುಡಿಯದಿದ್ದರೂ ಯಾರಿಗೂ ತಿಳಿಯದು. ಮನೆ ಇಲ್ಲದೆ ಇದ್ದರೆ ಏನು ಮಾಡೋದು ಎಂಬ ಸಾಮಾನ್ಯ ಮಾತು ಸಾಮಾನ್ಯ ಜನರ ಬಾಯಿಂದ ಆಗಾಗ ಉದುರುತ್ತಿರುವುದು ನಾವು ಕೇಳಿದ್ದೇ ಆಗಿದೆ.

ಮನೆ, ವೀಡ್, ಅಗ, ಇಲ್ಲ್, ಘರ್, Home, House ಮುಂತಾದ ಪದಗಳಲ್ಲಿ ನಾವು ವಾಸಿಸುವ ಕೇಂದ್ರವನ್ನು ಗುರುತಿಸುತ್ತೇವೆಯಾದರೂ ಅರಬಿ ಭಾಷೆಯಲ್ಲಿ ಅತ್ಯಂತ ಸುಂದರವಾದ ಪದವನ್ನು ಮನೆಗೆ ಬಳಸಲಾಗುತ್ತದೆ. 'ಮಸ್ಕನ್' ಎಂಬುದೇ ಆ ಪದ. ಅದರ ಅರ್ಥವಾದರೋ 'ಶಾಂತಿಯ ಕೇಂದ್ರ' ಎಂದು. ಬಹಳ ಅರ್ಥಪೂರ್ಣವಾದ ಈ ಪದ ಮನೆ ಎಂಬ ವಾಸಸ್ಥಾನಕ್ಕೆ ಅನ್ವರ್ಥವಾಗಿಯೇ ಇದೆ. ಮಸ್ಕನ್ ಎಂಬ ಪದ ಆಲಿಸಲೇ ಬಹಳ ಹಿತವಾಗಿರುವಾಗ ಆ ಸ್ಥಳವೂ ಅಷ್ಟೇ ಸಮಾಧಾನದ ಕೇಂದ್ರವಾಗಬೇಕಾದುದು ಕುಟುಂಬದ, ಸಮಾಜದ ಹಿತದೃಷ್ಟಿಯಿಂದ ಬಹಳ ಅಗತ್ಯವಾಗಿದೆ.

ಪ್ರವಾದಿ(ಸ) "ಒಬ್ಬನು ಸದ್ಗುಣ ಶೀಲೆಯಾದ ಪತ್ನಿ, ವಾಸಿಸಲು ಅತ್ಯುತ್ತಮವಾದ ಮನೆ, ಪ್ರಯಾಣಿಸಲೊಂದು ವಾಹನ ಈ ಮೂರು ವಸ್ತುಗಳನ್ನು ಹೊಂದುವುದರಲ್ಲಿ ಯಾವುದೇ ದುಂದುಗಾರಿಕೆ ಇಲ್ಲ" ಎಂದು ಹೇಳಿದ್ದಾರೆ. ಮಸ್ಕನ್‌ನ ಕೀಲಿಕೈಯಾದ ಪುರುಷನು ಕುಟುಂಬದ ಶಾಂತಿ ನೆಮ್ಮದಿಯನ್ನು ಕಾಪಾಡಲು, ಹೆಚ್ಚಿಸಲು ಪ್ರಧಾನ ಪಾತ್ರ ವಹಿಸುತ್ತಾನೆ. ಆತನೇ ಅಲ್ಲಿ ಪ್ರಧಾನಿ. ಆದರೆ ಆತ ಅದರಲ್ಲಿ ವಿಫಲನಾದರೆ ಖಂಡಿತ ಆತ ಪ್ರಶ್ನಾರ್ಹ ನಾಗುತ್ತಾನೆ ಎಂಬುದು ಸತ್ಯ.

**ಕುಟುಂಬ:** ಮದುವೆ ಎಂಬ ಸಾಮಾಜಿಕ ಬದ್ಧತೆಯಿಂದ ಆರಂಭವಾಗುವ ಕುಟುಂಬಕ್ಕೆ ಮನೆ ಎಂಬುದು ಮೂಲಭೂತ ಅಗತ್ಯಗಳಲ್ಲಿ ಅತ್ಯಂತ ಪ್ರಧಾನವಾದುದು. ಆ ಮನೆಯಲ್ಲಿ ಪತಿ, ಪತ್ನಿ ಎಂಬ ಗಾಲಿಗಳು ಸಾಮಾಜಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ಮನೆ ಸುಭದ್ರವಾಗಿರುತ್ತದೆ. ಆ ಗಾಲಿಯಲ್ಲಿ ಪ್ರೀತಿ, ವಿಶ್ವಾಸ, ಕರುಣೆ, ಪರಸ್ಪರ ಸಹಕಾರ ಇದ್ದಾಗ ಮಾತ್ರ ಆ ಮನೆ ಶಾಂತಿಯ ಕೇಂದ್ರವಾಗಬಹುದು. ಅನ್ಯಥಾ ಅದೇ ಮನೆ ಸಮಾಜಕಂಟಕವಾಗಬಹುದು.

**ಪತ್ನಿ:** ಶಾಂತಿಯ ಕೇಂದ್ರಕ್ಕೆ ಪತ್ನಿಯೇ ರಾಣಿ, ಪತಿಯ ತೋಳ್ತೆಕ್ಕೆಯಲ್ಲಿ ಆಕೆ ಭದ್ರತೆಯ ಅನುಭವ ಹೊಂದುತ್ತಾಳೆ. ಆಕೆಗೆ ನೋವಿನ, ಅಶಾಂತಿಯ, ಒಂಟಿತನದ ಕಾಟ ಇರದು. ತನ್ನೆಲ್ಲಾ ನೋವು, ಬೇಸರವನ್ನು ಪತಿಯ ಎದೆಯಲ್ಲಿ ಒರಗಿ ಪರಿಹರಿಸಿಕೊಳ್ಳಬಲ್ಲಳು. "ಮಾನವನಿಗೇನಾದರೂ ಸಾಷ್ಟಾಂಗವೆರಗಲು ವಿಧಿಸುತ್ತಿದ್ದರೆ ನಾನು ಪತಿಗೆ ಮಾಡಲು ಆದೇಶಿಸುತ್ತಿದ್ದೆ" ಎಂಬ ಪ್ರವಾದಿ(ಸ) ನುಡಿಯಿಂದ ಆಕೆಯೂ ಪ್ರೇರಣೆಗೊಳ್ಳುತ್ತಾಳೆ. ನಾನು ಪತಿಗೆ ಸಾಷ್ಟಾಂಗವೆರಗುತ್ತಿದ್ದೆ ಎಂಬ ಹಿತವಾದ ಭಾವನೆಯೂ ಆಕೆಯ ಮನದಲ್ಲಿ ನಲಿದಾಡುತ್ತದೆ. ಅಂತಹ ಗಾಢವಾದ ವ್ಯವಸ್ಥೆಯಾಗಿದೆ, ಸಂಬಂಧವಾಗಿದೆ ಪತಿ-ಪತ್ನಿಯರದ್ದು. ತನ್ನ ಪತಿಯ ಪ್ರೀತಿಯನ್ನು ಕಳೆದುಕೊಳ್ಳಲು ಆಕೆ ಎಂದೂ ಇಷ್ಟಪಡುವುದಿಲ್ಲ. ಅದರಲ್ಲಿ ಪಾಲಾಗುವುದನ್ನಂತೂ ಆಕೆ ಕನಸಿನಲ್ಲಿಯೂ ಊಹಿಸಲಾರಳು. ನನ್ನ ಪತಿಯ ಎದೆಗೂಡಿಗೆ ನಾನೊಬ್ಬಳೇ ರಾಣಿ. ಆ ತೋಳ ಅಪ್ಪುಗೆ ನನಗೆ ಮಾತ್ರ ಮೀಸಲು ಎಂಬ ಅಹಮಿನಲ್ಲೇ ಆಕೆ ಕಾಲ ಕಳೆಯುತ್ತಾಳೆ. ಪತಿ ದುಡಿದು, ದಣಿದು ಬರುವಾಗ ಆಕೆ ಮನೆಯಲ್ಲಿದ್ದುಕೊಂಡು ಆತನಿಗೆ ಇಷ್ಟವಾದ ಆಹಾರ ತಯಾರಿಸಿ, ಸ್ನಾನಕ್ಕೆ ಬಿಸಿ ನೀರು ಕಾಯಿಸಿ, ಶುಚಿಗೊಳಿಸಿದ ವಸ್ತ್ರ, ಮನೆ, ಪಾತ್ರೆ, ಪಗಡೆಗಳಿಂದ ಕಾಯುತ್ತಿರುತ್ತಾಳೆ. ಮನೆಯನ್ನು ಒಪ್ಪಓರಣವಾಗಿಟ್ಟುಕೊಂಡು ಪತಿಯಿಂದ ಹೊಗಳಿಕೆಯ ಮಾತಿಗೆ ಅಪೇಕ್ಷಿಸುತ್ತಾಳೆ. ಸ್ವಾದಿಷ್ಟ ಆಹಾರ ತಯಾರಿಸಿ ಹೊಟ್ಟೆ ತುಂಬಾ ಬಡಿಸಲು ಉತ್ಸುಕಳಾಗಿ ಆತನ ಸಂತೋಷವನ್ನೂ ಹೊಗಳಿಕೆಯನ್ನೂ ನಿರೀಕ್ಷಿಸುತ್ತಾಳೆ. ತನ್ನ ಉಡುಪಿಗೆ ಪರಿಮಳ ಹಚ್ಚಿ ಪತಿಯ ಆಲಿಂಗನಕ್ಕೆ ಕಾಯುತ್ತಾಳೆ.

ತನ್ನ ಪತಿಯೇ ಮಹಾರಾಜ. ಆತನಷ್ಟು ಸುಂದರಾಂಗ ಯಾರೂ ಇರಲಾರರು. ನನ್ನ ಪತಿ ಪ್ರೀತಿಸುವ ಹಾಗೆ ಇನ್ನಾರ ಪತಿಯೂ ತನ್ನ ಪತ್ನಿಯನ್ನು ಪ್ರೀತಿಸಲಾರ ಎಂಬುದು ಆಕೆಯ ಆಲೋಚನೆ. ನನ್ನ ಪತಿಯ ಉಡುಪು ಇತರ ಪುರುಷರಿಗಿಂತ ಚೆನ್ನಾಗಿರಬೇಕು, ಭಿನ್ನವಾಗಿರಬೇಕು, ಸುಂದರನಾಗಿ ಕಾಣಬೇಕು ಎಂಬುದು ಆಕೆಯ ತುಡಿತ. ಮ್ಯಾಚಿಂಗ್ ಡ್ರೆಸ್ (ಸರಿಹೊಂದುವ), ಪ್ಯಾಂಟ್, ಶರ್ಟ್‌ನಲ್ಲಿ ಆತನನ್ನು ಶೃಂಗರಿಸಲು ಬಯಸುತ್ತಾಳೆ. ಹೊರಹೋಗುವಾಗ ನೀಟಾಗಿ ಎಲ್ಲರೂ ಮೆಚ್ಚುವಂತೆ ಆಗಬೇಕು ಎಂದು ಬಯಸುತ್ತಾಳೆ.



ಆಕೆ ಎಂದೂ ತನ್ನ ಪತಿಯನ್ನು ಇತರರೊಂದಿಗೆ ತೆಗಳುವುದಿಲ್ಲ. ಆತನ ದೌರ್ಬಲ್ಯವನ್ನು ಹೊರಗೆಡಹುವುದಿಲ್ಲ. ತನ್ನ ಮಕ್ಕಳೊಂದಿಗೆ ಪತಿಯ ಬಗ್ಗೆ ಸದಾ ಗೌರವಪೂರ್ಣವಾಗಿಯೇ ಮಾತಾಡುತ್ತಾಳೆ. ಮಕ್ಕಳನ್ನು ಪತಿ ಗದರಿಸಿದಾಗ, ಹೊಡೆದಾಗ ಆಕೆ ಪತಿಯ ಪರ ವಹಿಸುತ್ತಾಳೆ. ಮಕ್ಕಳೊಂದಿಗೆ ಹೇಳುತ್ತಾಳೆ, ತಂದೆ ಹೇಳಿದ ಹಾಗೆ ಕೇಳಬೇಕು, ಅವರು ನಿನ್ನ ಒಳ್ಳೆಯದಕ್ಕೆ ಶಿಕ್ಷೆ ಕೊಟ್ಟಿದ್ದಾರೆ ಎಂದು. ಪತಿಯ ಗೌರವಕ್ಕೆ ಮಕ್ಕಳು ಕುಂದುಂಟು ಮಾಡುವಾಗ ಮಕ್ಕಳನ್ನು ಆಕೆ ಗದರಿಸುತ್ತಾಳೆ. ಆಕೆ ಪತಿಯೊಂದಿಗೆ ಹೊಸ ಹೊಸ ಮಾಡೆಲ್‌ಗಳ ಡ್ರೆಸ್, ಸಾರಿ, ಸೌಂದರ್ಯ ಸಾಧನಗಳ ಬೇಡಿಕೆ ಇಡಲಾರಳು. ಮಕ್ಕಳು ಅಧಿಕ ಸವಲತ್ತು ಕೇಳಿದಾಗ ಪತಿಯ ಆರ್ಥಿಕ ಸ್ಥಿತಿಯನ್ನು ಅವರ ಮುಂದೆ ಆಕೆ ವಿವರಿಸುತ್ತಾಳೆ. ಅಗತ್ಯವಿಲ್ಲದ ವಸ್ತುಗಳನ್ನೆಂದೂ ಆಕೆ ಮನೆ ತುಂಬಿಸಲು ಪತಿಯನ್ನು ಒತ್ತಾಯಿಸುವುದಿಲ್ಲ. ಪತಿಯ ಸುಖಕ್ಕಾಗಿ ತನ್ನೆಲ್ಲಾ ಕನಸನ್ನು ಆಕೆ ನಿಗ್ರಹಿಸುತ್ತಾಳೆ. ಇದು ಹೊಂದಾಣಿಕೆಯಿಂದ ಬಾಳಲು ಇಷ್ಟಪಡುವ ಒಬ್ಬ ಹೆಣ್ಣಿನ, ಪತ್ನಿಯ ಗುಣ ಸ್ವಭಾವವಾದರೆ ಆಕೆಯನ್ನು ಯಾವ ಪುರುಷನಾದರೂ ಹೊಂದಿದರೆ ಖಂಡಿತಾ ಆತ ವಿಜಯಿಯಾದಂತೆ.

ಇಂತಹ ಪತ್ನಿಯ ಗುಣವನ್ನು ಕೆಲವರು ಉತ್ತಮಳು, ಗುಣವಂತೆ ಎಂದು ಹೊಗಳಿದರೆ ಇನ್ನು ಕೆಲವರು ಅಥವಾ ಸ್ತ್ರೀವಾದಿಗಳೆಂದು ಹೆಸರಿಸುವವರು ಇದನ್ನು ಪುರುಷ ಸಮಾಜವು ತನ್ನ ಬೇಳೆ ಬೇಯಿಸಲು ಮತ್ತು ಸ್ತ್ರೀಯನ್ನು ಶೋಷಿಸಲು ಈ ರೀತಿಯ ಮಾತುಗಳಿಂದ ಆಕೆಯನ್ನು ವಂಚನೆಗೊಳಪಡಿಸುತ್ತದೆ, ಆದ್ದರಿಂದ ಹೆಣ್ಣಿಗೇನೂ ಮನೆಯ ಚಾಕರಿ ಕಟ್ಟಿಟ್ಟದ್ದಲ್ಲ, ಹೆಣ್ಣು ಹೇಗೆ ಮನೆ ಕೆಲಸ ಮಾಡುತ್ತಾಳೋ ಅದೇ ರೀತಿ ಗಂಡು ಮಾಡಬೇಕು, ಆಗ ಮಾತ್ರ ಸಮಾನತೆ ಸಾಧ್ಯ ಎಂದು ವಾದಿಸಿದರೂ ಇದನ್ನು ಒಪ್ಪಬೇಕೆಂಬ ನಿಯಮವೇನೂ ಇಲ್ಲ. ಅದೇ ಮೇಲಿನ ನಿಯಮಗಳನ್ನು ಅವರು ಒಪ್ಪಬೇಕೆಂದೂ ಇಲ್ಲ. ಯಾಕೆಂದ್ರೆ ಸತ್ಯ ಮತ್ತು ಒಳಿತು ಮಾತ್ರ ಮನುಷ್ಯನ ಸುಖ, ಶಾಂತಿಗೆ ಹೇತುವೇ ಹೊರತು ಸೀಮಿತ ಜ್ಞಾನದ ಮನುಷ್ಯನ ತತ್ವ ಸಿದ್ಧಾಂತಗಳೆಂದೂ ಸುಖ, ಶಾಂತಿಗೆ ಹೇತುವಾಗಲು ಸಾಧ್ಯವಿಲ್ಲ ಎಂಬುದು ಪ್ರಪಂಚದ ನಿಯಮವಾಗಿದೆ. ಈ ರೀತಿ ವಾದಿಸುವ ವ್ಯಕ್ತಿ ಕೂಡ ಮನೆ ಎಂಬ ಶಾಂತಿಧಾಮಕ್ಕೆ ಬಂದಾಗ ಬಯಸುವುದು ಪರಸ್ಪರ ಪ್ರೀತಿಯ ಅಪ್ಪುಗೆಯನ್ನೇ. ಪತಿಯನ್ನು ಹೇಗೆ ಸಂತೋಷಗೊಳಿಸಲಿ ಎಂದು ಪತ್ನಿಯೂ, ಪತ್ನಿಯನ್ನು ಹೇಗೆ ಮೆಚ್ಚಿಸಲಿ ಎಂದು ಪತಿಯೂ ಆಲೋಚಿಸಿಕೊಂಡೇ ಮನೆ ತಲುಪುವುದು.

ಸೀಮಿತ ಸುಖ ಸೌಲಭ್ಯ ಮತ್ತು ಇತಿಮಿತಿಯಿಂದ ಮಾತ್ರ ಶಾಂತಿ ಗಳಿಸಲು ಸಾಧ್ಯವಾಗುವ ಮನುಷ್ಯ ಜೀವಿಗೆ ಪರಸ್ಪರ ಹೊಂದಾಣಿಕೆ ಮತ್ತು ಪ್ರೀತಿಯಿಂದ ಮಾತ್ರ ನೆಮ್ಮದಿ ಕಾಣಲು ಸಾಧ್ಯವೇ ಹೊರತು ಕಾನೂನು, ನಿಯಮ, ನೈತಿಕತೆಗೆ ಅತೀತವಾಗಿ ನಾವು ಪರಿಹಾರ ಕಾಣಲು ಸಾಧ್ಯವಿಲ್ಲ. ಇಂತಹ ಸಮಾನತಾವಾದಿಗಳು ಅರಿಯಬೇಕು, (13ನೇ ಪುಟಕ್ಕೆ)

# ಶರೀಅತ್‌ನಲ್ಲಿ ದಹೇಜ್‌ನ ಸ್ಥಾನಮಾನಗಳು

## ಕುಟುಂಬ ಒಂದು ಅಧ್ಯಯನ-40

ಪ್ರೊ| ಉಮರ್ ಹಯಾತ್ ಘೋರಿ

ಇಸ್ಲಾಮಿನ ಕೌಟುಂಬಿಕ ವ್ಯವಸ್ಥೆಯು ನ್ಯಾಯಾಧಾರಿತವಾಗಿದೆ. ಅದು ಸಮಾಜದ ಯಾವುದೇ ವ್ಯಕ್ತಿಯ ಮೇಲೆ ಅಕ್ರಮ ನಡೆಯುವುದನ್ನು ಸಹಿಸಲಾರದು ಅಥವಾ ಯಾವುದೇ ಶೋಷಣೆಯನ್ನು ಅನುಮತಿಸಲಾರದು. ಸಾಮಾಜಿಕ ಕ್ಷೇತ್ರದಲ್ಲಿ ಕುಟುಂಬ ವ್ಯವಸ್ಥೆಯನ್ನು ಕಟ್ಟಿ ಬೆಳೆಸುವಾಗ ನೀತಿಯತ್ತ ಗಮನಹರಿಸುತ್ತದೆ. ವಿವಾಹದ ವಿಚಾರದಲ್ಲಿ ಎರಡು ಕುಟುಂಬಗಳ ನಡುವೆ ಸಂಭ್ರಮವನ್ನು ಸೃಷ್ಟಿಸುತ್ತದೆ. ಹುಡುಗನ ತಂದೆಗೆ ತಮ್ಮ ಮನೆಯಲ್ಲಿ ಓರ್ವ ಸದಸ್ಯೆಯ ಹೆಚ್ಚಳವಾಯಿತೆಂಬ ಆನಂದವಾದರೆ ಓರ್ವ ಯುವತಿ ಮಗನ ಪತ್ನಿಯಾಗಿ ಬರುವುದು ಸಂಭ್ರಮವೇ. ಅದೇ ವೇಳೆ ಹುಡುಗಿಯ ತಂದೆಗೆ ಕೆಲವಾರು ವರ್ಷಗಳಿಂದ ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿದ ಮಗಳು ಪರಭಾರೆಯಾಗುವಳೆಂಬ ಒಂದು ಅನುಭವವಿದೆಯಾದರೂ ತನ್ನ ಜವಾಬ್ದಾರಿಯನ್ನು ಮುಗಿಸಿದ ತೃಪ್ತಿಯೂ ಅವರಲ್ಲಿ ಕಾಣಿಸುತ್ತದೆ. ಮಗಳ ಕುರಿತು ಎಷ್ಟೇ ಮಮತೆಯಿದ್ದರೂ ಅವಳನ್ನು ವಿವಾಹದಿಂದ ತಪ್ಪಿಸುವುದು ಆತನಿಗೆ ಸಾಧ್ಯವಿಲ್ಲವಷ್ಟೇ.

ಮುಸ್ಲಿಮ್ ಸಮುದಾಯದಲ್ಲಿ ಹುಡುಗಿಯ ತಂದೆ ತಾಯಿಗಳಿಗೆ ಕೊರತೆಯ ಅನುಭವವಾಗಬಾರದೆಂಬ ಕಾರಣದಿಂದ ಮದುವೆಯ ಪ್ರೊಪೋಸಲ್ ಹುಡುಗನ ಕಡೆಯಿಂದ ಮುಂದಿಡಲಾಗುತ್ತದೆ. ಅಂದರೆ ನಿಮ್ಮ ಹುಡುಗಿಯನ್ನು ನಮಗೆ ಕೊಡಿ ಅಥವಾ ನಮ್ಮ ಹುಡುಗನೊಂದಿಗೆ ಅವಳ ವಿವಾಹ ನಡೆಸಿಕೊಡಿ ಎಂದೇನು ಪ್ರೊಪೋಸಲ್ ಅಲ್ಲ. ಬದಲಾಗಿ ನಮ್ಮ ಮಗನನ್ನು ನಿಮ್ಮ ಮೇಲ್ನೋಟಕ್ಕೆ ವಹಿಸಿಕೊಳ್ಳಿರಿ ಎಂದು ಹೇಳಲಾಗುತ್ತದೆ. ಆನಂತರ ಸಂಬಂಧ ಸ್ವೀಕೃತವಾಗುತ್ತದೆ. ಇಲ್ಲಿ ಹುಡುಗಿಯ ತಂದೆಯ ಮೇಲೆ ಉಪಕಾರ ಭಾರವಿರುವುದಿಲ್ಲ. ಹುಡುಗನ ತಂದೆಗೆ ಹುಡುಗಿಯ ತಂದೆಯ ಮೇಲೆ ಉಪಕಾರ ಭಾರವಿರುತ್ತದೆ. ನಿಕಾಹನ್ನು ಕೂಡಾ ಹುಡುಗಿಯ ತಂದೆ ಬಂದು ಮಾಡಿಕೊಡುವುದಲ್ಲ. ಬದಲಾಗಿ ಹುಡುಗನ ತಂದೆಯೇ ದಿಬ್ಬಣವನ್ನು ಹುಡುಗಿಯ ಮನೆಗೆ ಕರೆದುಕೊಂಡು ಹೋಗುತ್ತಾರೆ. ಹುಡುಗಿಯ ತಂದೆಗೆ ಕೀಳರಿಮೆ-ಕೊರತೆಗಳು ಅನುಭವವಾಗಬಾರದೆಂಬುದು ಇದರ ಉದ್ದೇಶವಾಗಿದೆ. ಹುಡುಗಿಯಿರುವ ಮನೆ ತುಂಬ ಅವಶ್ಯಕ ಮತ್ತು ಪ್ರಾಮುಖ್ಯವೆಂಬ ಅರಿವು ಈ ಮೂಲಕ ಪ್ರಕಟಿಸಲಾಗುತ್ತದೆ.

ಹೆಣ್ಣಿನ ಮನೆಯವರಿಗೆ ಹುಡುಗಿಯನ್ನು ಕಳೆದುಕೊಳ್ಳುವ ದುಃಖವಾಗಲಿ, ಹುಡುಗಿಯಿದ್ದಾಳೆಂಬ ಕೀಳರಿಮೆಯಾಗಲಿ ಉಂಟಾಗಬಾರದೆಂಬುದನ್ನು ವಿವಾಹದ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದ ಪಾಲಿಸಬೇಕಾಗುತ್ತದೆ. ಮುಸ್ಲಿಮರ ನಿಜವಾದ ಮದುವೆಯೆಂದರೆ ಇದು. ವಿವಾಹಧನ(ಮಹ್ರ್) ವಧುವನ್ನು ಗೌರವಿಸುವ ನಿಟ್ಟಿಂದ ಜಾರಿಗೆ ಬಂದಿದೆ. ಮದುವೆಯ ಇಸ್ಲಾಮೀ ರೀತಿಯೆಂದರೆ ಇದು. ಅಂದರೆ ವರದಕ್ಷಿಣೆ ಎಂಬ ಪ್ರಶ್ನೆಗೆ ಯಾವುದೇ ಅವಕಾಶವೂ ಇಲ್ಲ.

ವರದಕ್ಷಿಣೆ ಮೊದಲನೆಯ ವಿಧ: ಹುಡುಗಿಯ ತಂದೆ ವಾತ್ಸಲ್ಯಭಾವದಿಂದ ಮನೆಮಾಡಿಕೊಳ್ಳುವುದಕ್ಕೆ ಕೆಲವು ಸಾಮಾನುಗಳನ್ನು ಕೊಡಲು ನೋಡುತ್ತಾರೆ. ಇದೊಂದು ಸಂದರ್ಭವಾಗಿದೆ. ಇದು ಮದುವೆಯಲ್ಲಿ ಬೇಡಿಕೆಯಾಗಿರಲಿಲ್ಲ ಅಥವಾ ಮದುವೆಯ ಶರ್ತವೂ ಆಗಿರುವುದಿಲ್ಲ. ಇದರ ವ್ಯವಸ್ಥೆಯನ್ನು ಹುಡುಗಿಯ ತಂದೆ ತನ್ನ ಇಚ್ಛಾನುಸಾರ ತನ್ನ ಆರ್ಥಿಕ ಸ್ಥಿತಿಗತಿಯ ಸಾಮರ್ಥ್ಯದಂತೆ ಮಾಡುತ್ತಾನೆ. ಈ ರೀತಿ ಸಾಮಾನು ನೀಡುವುದನ್ನೇ ವರದಕ್ಷಿಣೆಯೆಂದು ಹೇಳಲಾಗುತ್ತದೆ. ಪ್ರವಾದಿವರ್ಯರು(ಸ) ಫಾತಿಮಾರವರಿಗೆ(ರ) ಕೆಲವು ಸಾಮಾನು ಸರಂಜಾಮುಗಳನ್ನು ಕೊಟ್ಟಿದ್ದರಷ್ಟೇ. ಇದು ವರದಕ್ಷಿಣೆಯ ಮೊದಲನೇ ವಿಧದಲ್ಲಿ ಬರುತ್ತದೆ ಮತ್ತು ಒಂದು ಸಮತೋಲನದಲ್ಲಿದ್ದರೆ ಅದನ್ನು ಅಸಿಂಧುವೆಂದು ಹೇಳುವುದಕ್ಕೂ ಸಾಧ್ಯವಿಲ್ಲ.

# ಬಾಲಪಂಕ್ತಿ



✍ ನಜ್ಮುದ್ದೀನ್.

# ಸೌರ್ ಗುಹೆಗೆ

(ಕಳೆದ ಸಂಚಿಕೆಯಿಂದ)

**ಪ್ರ**ವಾದಿವರ್ಯರು(ಸ) ಮನೆಯ ಮುಂಬಾಗಿಲಿನಲ್ಲಿ ಹೊಂಚು ಹಾಕಿ ಕುಳಿತಿದ್ದ ಶತ್ರುಗಳಿಗೆ ಇದೊಂದೂ ಅರಿವಿಗೆ ಬರಲಿಲ್ಲ. ಆದರೂ ಮೆಲ್ಲಗೆ ಸಂದಿನಿಂದ ಒಳಗೆ ಇಣುಕಿ ನೋಡಿದರು.

"ಹಾ। ನಿದ್ರಿಸುತ್ತಿದ್ದಾರೆ. ನಿದ್ರಿಸಲಿ ಬೆಳಗಾತವಾಗಲಿ ನೋಡುವಾ!" ಎನ್ನುತ್ತಾ ಅವರು ಬೆಳಗಾಗುವವರೆಗೆ ನಿದ್ರಿಸದೆ ಕಾದು ಕುಳಿತರು.

ಮುಂಜಾನೆಯ ಅರುಣೋದಯದ ವೇಳೆ ಅಲಿ(ರ) ಎದ್ದರು. ಎಲ್ಲಾ ಸಿದ್ಧತೆಯೊಂದಿಗೆ ಬಾಗಿಲನ್ನು ತೆರೆದು ಪರಿಸರ ನೋಡುತ್ತಾ ಮಂದಹಾಸ ಬೀರಿದರು.

ಕೂಡಲೇ ಕುರೈಶರು ಎದ್ದು ನಿಂತರು. ಖಡ್ಗವನ್ನೆತ್ತಿ ದಾಳಿಗೆ ಸಿದ್ಧರಾದರು. ಅಲಿಯವರು(ರ), "ನೀವು ಯಾರು? ನಿಮಗೇನಾಗ ಬೇಕು?" ಎಂದು ಏನೂ ತಿಳಿಯದಂತೆ ಕೇಳಿದರು.

ಅಲಿಯವರ ಮಾತು ಕೇಳಿ ಕುರೈಶರು ಬೆಚ್ಚಿಬಿದ್ದರು.

"ಎಲ್ಲಿ? ಆ ಮುಹಮ್ಮದ್ ಎಲ್ಲಿ? ನಾವು ಅವನನ್ನು ಹುಡುಕಿಕೊಂಡು ಬಂದಿದ್ದೇವೆ" ಎಂದು ಕೇಳಿದರು.

"ಅವರು ಇಲ್ಲಿಲ್ಲ."

"ಏನಂದ್ರಿ!" ಎನ್ನುತ್ತಾ ಅಲಿಯವರನ್ನು ಬದಿಗೆ ಸರಿಸಿ ಒಳಗೆ ನುಗ್ಗಿದ್ದರು. ಮನೆಯಲ್ಲಿ ತುಂಬಾ ಹುಡುಕಾಡಿದ ನಂತರ ಪೆಚ್ಚು ಮೋರೆ ಹಾಕಿ ಹೊರಬಂದರು.

"ಅವನು ಎಲ್ಲಿ ಹೋದ?" ಎನ್ನುತ್ತಾ ಪ್ರವಾದಿಯವರನ್ನು ಹುಡುಕುತ್ತಾ ಕೋಪದಿಂದ ಕುದುರೆಯನ್ನೇರಿ ನಾಲ್ಕೂ ದೆಸೆಗಳಿಗೆ ಹೋದರು.

ಅರ್ಧ ರಾತ್ರಿಯಲ್ಲಿ ಕುರೈಶರ ಕಣ್ತಪ್ಪಿಸಿ ಹೊರಬಂದ ಪ್ರವಾದಿವರ್ಯರು(ಸ) ತಡ ಮಾಡದೆ ಅಪ್ತ ಸಂಗಾತಿ ಅಬೂಬಕರ್‌ರವರ(ರ) ಮನೆಯ ಕಡೆ ಧಾವಿಸಿದರು.

"ನಾವು ಈಗಲೇ ಇಲ್ಲಿಂದ ಹೊರಡಬೇಕು ಮಿತ್ರಾ" ಎಂದು ಅಬೂಬಕರ್‌ರೊಂದಿಗೆ ಹೇಳಿದರು.

ಅಬೂಬಕರ್‌ರವರು(ರ) ಈಗಾಗಲೇ ಸಿದ್ಧರಾಗಿದ್ದರು. ಅತಿ ಅಗತ್ಯವಾದ ಕೆಲವು ವಸ್ತುಗಳೊಂದಿಗೆ ಪ್ರವಾದಿವರ್ಯರು ತನ್ನ ಆಪ್ತ ಸಂಗಾತಿಯೊಂದಿಗೆ ಯಾತ್ರೆ ಹೊರಟರು.

ಮರಳ ದಿಣ್ಣೆಗಳನ್ನು ಭೇದಿಸುತ್ತಾ ಮುಳ್ಳುಗಂಟಿಗಳನ್ನು ದಾಟಿ ಅವರು ಸಾಗುತ್ತಿದ್ದರು. ಅದು ಬಹಳ ಸಾಹಸಿಕವಾದ ಯಾತ್ರೆಯಾಗಿತ್ತು.

ಮರುದಿನ ಮುಂಜಾನೆಯ ಮಂಜು ಪಸರಿಸುತ್ತಿದ್ದ ಸಮಯ. ಅರುಣೋದಯದ ಕೆಂಪು ಬಾನಲ್ಲಿ ಮೂಡಿದೆ. ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತಿದೆ. ಬೆಳಕು ಹರಿಯಿತು.

ಸೌರ್ ಪರ್ವತದ ಸಮೀಪ ಅವರು ತಲುಪಿದ್ದಾರೆ. ನಮಗೀಗ ಸ್ವಲ್ಪ ವಿಶ್ರಾಂತಿ ಬೇಕಾಗಿದೆ ಅಲ್ಲವೇ. ಈ ಹಗಲು ಹೊತ್ತಿನಲ್ಲಿನ ಪ್ರಯಾಣ ಅಪಾಯಕಾರಿ. ಶತ್ರುಗಳು ಬೇರೆ ನಮ್ಮನ್ನು ಹುಡುಕುತ್ತಿದ್ದಾರೆ. ಕೆಲವು ದಿವಸಗಳ ತನಕ ಅಡಗಿ ಕುಳಿತುಕೊಳ್ಳಲು ತಾಣ ಬೇಕಾಗಿದೆ ಅದನ್ನು ಹುಡುಕೋಣ ಎಂದು ಅಬೂಬಕ್ಕರ್‌ರೊಂದಿಗೆ ಪ್ರವಾದಿವರ್ಯರು ಹೇಳಿದರು. **(ಮುಂದುವರಿಯುವುದು)**



## ಅರಬಿ ಸುಡೊಕು 76

| | | | | | |
|---|---|---|---|---|---|
| | | | | | |
| | ب | ا | ث | ح | |
| | ج | | | ت | |
| | ت | | | ث | |
| | ا | ح | ب | ج | |
| | | | | | |

ಆಟದ ನಿಯಮ:

ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

ಅರಬಿ ಸುಡೊಕು 75ರ ಉತ್ತರ

| | | | | | |
|---|---|---|---|---|---|
| ح | ب | ج | ت | ا | ث |
| ت | ث | ا | ج | ح | ب |
| ث | ج | ح | ب | ت | ا |
| ا | ت | ب | ح | ث | ج |
| ب | ح | ث | ا | ج | ت |
| ج | ا | ت | ث | ب | ح |

## ಜಾಗತಿಕ ರಾಷ್ಟ್ರಗಳ ಪಕ್ಷಿನೋಟ

### 31) ಕೆನಡಾ

ಸರಕಾರಿ ಹೆಸರು : ಕೆನಡಾ
ರಾಜಧಾನಿ : ಒಟ್ಟಾವಾ
ಸ್ವಾತಂತ್ರ್ಯ : 1867 ಜುಲೈ 1
ಒಟ್ಟು ವಿಸ್ತೀರ್ಣ : 99,84,670 ಚದರ ಕಿಲೋ ಮೀಟರ್
ಅಂದಾಜು ಜನಸಂಖ್ಯೆ : 3,38,55,103
ಸ್ಥಳ (Location) : ಉತ್ತರ ಅಮೇರಿಕದ ಉತ್ತರ ಭಾಗ
ಪ್ರಚಲಿತ ಭಾಷೆಗಳು : ಇಂಗ್ಲಿಷ್, ಫ್ರೆಂಚ್
ಧರ್ಮಗಳು : ಪ್ರೊಟೆಸ್ಟೆಂಟ್, ರೋಮನ್ ಕೆಥೋಲಿಕ್, ಈಸ್ಟರ್ನ್ ಆರ್ಥಡಾಕ್ಸ್, ಯಹೂದಿ
ನಾಣ್ಯ (Currency) : ಕೆನಡಿಯನ್ ಡಾಲರ್
ಸಂಘಟನೆಗಳು : ವಿಶ್ವಸಂಸ್ಥೆ, ಏಶಿಯಾ–ಪೆಸಿಫಿಕ್ ಇಕನಾಮಿಕ್ ಕೊ ಆಪರೇಶನ್, ಕಾಮನ್ವೆಲ್ತ್ ಆಫ್ ನೇಶನ್ಸ್, ಆರ್ಗನೈಝೇಶನ್ ಫಾರ್ ಇಕನಾಮಿಕ್ ಕೊ–ಆಪರೇಶನ್ ಆ್ಯಂಡ್ ಡೆವಲೆಪ್‌ಮೆಂಟ್, ನಾರ್ಥ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಝೇಶನ್

ಜಗತ್ತಿನ 2ನೇ ದೊಡ್ಡ ದೇಶ (ವಿಸ್ತೀರ್ಣ)

### 32) ಕೇಪ್ ವೆರ್ಡೆ

ಸರಕಾರಿ ಹೆಸರು : ರಿಪಬ್ಲಿಕ್ ಆಫ್ ಕೇಪ್ ವೆರ್ಡೆ
ರಾಜಧಾನಿ : ಪ್ರಾಯ (Praia)
ಸ್ವಾತಂತ್ರ್ಯ : 1975 ಜುಲೈ 5
ಒಟ್ಟು ವಿಸ್ತೀರ್ಣ : 4,033 ಚದರ ಕಿಲೋ ಮೀಟರ್
ಅಂದಾಜು ಜನಸಂಖ್ಯೆ : 5,30,000
ಸ್ಥಳ (Location) : ಅಟ್ಲಾಂಟಿಕ್, ಪಶ್ಚಿಮ ಆಫ್ರಿಕಾ ಕರಾವಳಿಗೆ ಸಮೀಪ
ಪ್ರಚಲಿತ ಭಾಷೆಗಳು : ಪೋರ್ಚುಗೀಸ್, ಕ್ರಿಯೋಲ್
ಧರ್ಮಗಳು : ಕ್ರಿಶ್ಚಿಯನ್
ನಾಣ್ಯ (Currency) : ಕೇಪ್ ವೆರ್ಡೆ ಎಸ್ಕುಡೊ
ಸಂಘಟನೆಗಳು : ವಿಶ್ವಸಂಸ್ಥೆ

ಜಗತ್ತಿನ 172ನೇ ದೊಡ್ಡ ದೇಶ (ವಿಸ್ತೀರ್ಣ)

### 33) ಮಧ್ಯ ಆಫ್ರಿಕನ್ ಗಣರಾಜ್ಯ

ಸರಕಾರಿ ಹೆಸರು : ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್
ರಾಜಧಾನಿ : ಬಾಂಗುಯಿ
ಸ್ವಾತಂತ್ರ್ಯ : 1960 ಆಗಸ್ಟ್ 13
ಒಟ್ಟು ವಿಸ್ತೀರ್ಣ : 6,22,436 ಚದರ ಕಿಲೋ ಮೀಟರ್
ಅಂದಾಜು ಜನಸಂಖ್ಯೆ : 43,43,000
ಸ್ಥಳ (Location) : ಮಧ್ಯ ಆಫ್ರಿಕಾ
ಪ್ರಚಲಿತ ಭಾಷೆಗಳು : ಫ್ರೆಂಚ್, ಸಾಂಗೊ, ಬಂಡಾ, ಬಾಯಾ ಮತ್ತಿತರ ಪ್ರಾದೇಶಿಕ ಭಾಷೆಗಳು
ಧರ್ಮಗಳು : ಕ್ರಿಶ್ಚಿಯನ್, ಇಸ್ಲಾಮ್ ಮತ್ತಿತರ ಸಾಂಪ್ರದಾಯಿಕ ನಂಬಿಕೆಗಳು
ನಾಣ್ಯ (Currency) : ಸಿ.ಎಫ್.ಎ. ಫ್ರಾಂಕ್ (CFA franc)
ಸಂಘಟನೆಗಳು : ವಿಶ್ವಸಂಸ್ಥೆ

ಜಗತ್ತಿನ 44ನೇ ದೊಡ್ಡ ದೇಶ (ವಿಸ್ತೀರ್ಣ)

## ನ್ಯಾಯಾಂಗಕ್ಕೂ ತಲೆ ಹಾಕಿತೇ ಭ್ರಷ್ಟಾಚಾರ? (5ನೇ ಪುಟದಿಂದ)

ಆದ್ದರಿಂದಲೇ ದೆಹಲಿ ಉಚ್ಚ ನ್ಯಾಯಾಲಯವು ಭಾರತದ ಮುಖ್ಯ ನ್ಯಾಯಾಧೀಶರ ಕಚೇರಿಯನ್ನು ಆರ್.ಟಿ.ಐ. ವ್ಯಾಪ್ತಿಗೆ ತರಬೇಕೆಂದು ತೀರ್ಪಿತ್ತಾಗ ಅದನ್ನು ಎಲ್ಲರೂ ಸ್ವಾಗತಿಸಿದ್ದರು. ಆದಾಗಿಯೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಬಹಳ ಕಷ್ಟದಿಂದಲೇ ತಮ್ಮ ಆಸ್ತಿಯನ್ನು ವೆಬ್‌ಸೈಟಿಗೆ ನೀಡಲು ಮುಂದಾಗಿದ್ದರು.

ಇಲ್ಲಿನ ನ್ಯಾಯಮೂರ್ತಿಗಳು ಕೂಡಾ ಇದೇ ಸಮಾಜದಿಂದ ಬೆಳೆದು ಬಂದವರೇ ಹೊರತು ಆಕಾಶದಿಂದ ಇಳಿದು ಬಂದವರಲ್ಲ. ಆದರೂ ಈ ಸಮಾಜದ ಪರಿಸ್ಥಿತಿಯನ್ನು ಅವಲೋಕಿಸುವಾಗ ಅಪರಂಜಿಯಂತೆ ಇಲ್ಲಿ ನ್ಯಾಯ ನೆಲೆಯೂರಬೇಕಾದರೆ ದೇವನು ಆಕಾಶದಿಂದಲೇ ನ್ಯಾಯಮೂರ್ತಿಗಳನ್ನು ಇಳಿಸಬೇಕೋ ಏನೋ? ನ್ಯಾಯಾಂಗದಲ್ಲಿ ನುಸುಳಿದ ಭ್ರಷ್ಟಾಚಾರವು ದೇಶದ ಅಭಿವೃದ್ಧಿಗೆ ಮಾರಕ. ಇದನ್ನು ಮೊಳಕೆಯಲ್ಲಿಯೇ ಚಿವುಟುವ ಅಗತ್ಯವಿದೆ. ಅದಕ್ಕೂ ಮುನ್ನ ಇದರ ಸತ್ಯಾಸತ್ಯತೆಯನ್ನು ಪರಾಮರ್ಶಿಸಬೇಕು.

ಇಲ್ಲಿನ ಅಧಿಕಾರಿಗಳ, ರಾಜಕಾರಣಿಗಳ ಆಸ್ತಿಗಳ ಕುರಿತು ತನಿಖೆ ನಡೆಸಲಾಗುತ್ತದೆ. ಅದೇ ರೀತಿ ಇಲ್ಲಿ ನ್ಯಾಯಾಧೀಶರ ಸೊತ್ತುವಿತ್ತಗಳ ಸಾಚಾತನದ ಕುರಿತೂ ತನಿಖೆ ನಡೆಸಬೇಕು. ನ್ಯಾಯ-ಅನ್ಯಾಯಗಳ ಕುರಿತು ತೀರ್ಪು ನೀಡುವ ಅಂಗವೇ ಹೊಲಸಾದರೆ ಆ ನಾಡಿನ ಪರಿಸ್ಥಿತಿ ಹೇಗಿರಬಹುದು? ನ್ಯಾಯವನ್ನು ಎತ್ತಿ ಹಿಡಿದು ಕಾಪಾಡಬೇಕಾದವರ ಮೇಲೆಯೇ ಇಂತಹ ಆರೋಪ ನಿಜಕ್ಕೂ ಮಾನಸಿಕವಾಗಿಯೂ ಆಘಾತಗೊಳ್ಳುವಂತಹದ್ದೇ. ದೇಶದ ಚಾರಿತ್ರ್ಯಕ್ಕೇ ಇದು ಕೊಡಲಿಯೇಟು ಹಾಕಬಹುದು. ಏನಿದ್ದರೂ ಇದರ ನಿಜಾಂಶ ಹೊರಬರಲೇಬೇಕಾಗಿದೆ.

ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಇರುವುದನ್ನು ಯಾರೂ ಅಲ್ಲಗಳೆಯಲಾರರು. ವ್ಯವಸ್ಥೆಯ ಮೇಲೆ ಬೆರಳು ತೋರಲಾದಾಗಲೇ ನೀರು ತಲೆಯ ಮೇಲಕ್ಕೆ ಬಂದಿದೆ ಎಂದು ಭಾವಿಸಬೇಕಾಗುತ್ತದೆ. ಈ ಬಗ್ಗೆ ತ್ವರಿತವಾಗಿ ಗಮನಹರಿಸಬೇಕಾದುದು ಅಗತ್ಯ. ಅನ್ಯಥಾ ಇಡೀ ವ್ಯವಸ್ಥೆಯೇ ಹಾಳುಬಿದ್ದು ಗಬ್ಬು ನಾರತೊಡಗಬಹುದು. ಏಕೆಂದರೆ ಜನತೆಗೆ ಕನಿಷ್ಠ ಭರವಸೆ ಇರುವುದೇ ಈಗ ನ್ಯಾಯಾಂಗದ ಮೇಲೆ. ಕಾರ್ಯಾಂಗ, ಶಾಸಕಾಂಗಗಳಂತೂ ಅಪನಂಬಿಕೆಯ ಕೆಸರಿನಲ್ಲಿಯೇ ಮುಳುಗಿ ಬಿಟ್ಟಿವೆ. ಒಂದು ವೇಳೆ ನ್ಯಾಯಾಂಗದ ಮೇಲಿನ ಈ ಆರೋಪಗಳ ಬಗ್ಗೆ ತ್ವರಿತ ಕಾರ್ಯಾಚರಣೆ ನಡೆಯದೆ ಹೋದರೆ ಜನರಲ್ಲಿರುವ ನ್ಯಾಯಾಂಗದ ಮೇಲಿನ ಅಲ್ಪಸ್ವಲ್ಪ ಗೌರವವೂ ಹೊರಟುಹೋದೀತು.

ಕಥೆ

# ತಿರುಗು ಬಾಣ



✍ ಮುಹಮ್ಮದ್ ಅಶೀರುದ್ದೀನ್, ಮಂಜನಾಡಿ

**ಸು**ಮಲತ ತುಂಬು ಗರ್ಭಿಣಿಯಾಗಿದ್ದಾಗಲೂ ಗಂಡನ ಕಿರಿಕಿರಿ ಕೀಟಲೆ ತಪ್ಪಿದ್ದಲ್ಲ. ರಾತ್ರಿ ಕಂಠಪೂರ್ತಿ ಕುಡಿದು ಅಮಲಿನ ನಶೆಯಲ್ಲಿ ಹೊಡೆಯುತ್ತಲೂ ಬಡಿಯುತ್ತಲೂ ಕತ್ತು ಹಿಸುಕುತ್ತಲೂ ಇರುವುದು ಆತನ ವಾಡಿಕೆಯಾಗಿತ್ತು. ತನ್ನೊಂದಿಗೆ ಸಪ್ತಪದಿ ತುಳಿದದ್ದು ಒಬ್ಬ ಕುಡುಕ ಎಂದು ತಿಳಿದದ್ದು ಮದುವೆಯ ಎರಡು ತಿಂಗಳ ಬಳಿಕ. ಆ ಪಿಂಡನಿಂದ ಒಂದು ನಯಾ ಪೈಸೆಯ ಉಪಕಾರವೂ ದೊರೆಯಲಿಲ್ಲ. ಜೀವನ ಸುಖ ಸಂಸಾರದಿಂದ ಸಾಗಿಸಲು ಅವನಿಂದ ಸಾಧ್ಯವಾಗಲಿಲ್ಲ. ಬಡವನಾದರೂ ಕುಡಿಯುವುದರಲ್ಲಿ ಯಾವ ರಿಯಾಯಿತಿಯೂ ಇರಲಿಲ್ಲ. ಅವಳಿಗೆ ಸಿಗುವ ಬೆರಳೆಣಿಕೆಯಷ್ಟು ಸಂಬಳದ ಅರ್ಧಭಾಗವನ್ನು ಅವನಿಗೆ ಮೀಸಲಿಡಬೇಕಿತ್ತು. "ಬಡ ಹೆಣ್ಮಕ್ಕಳ ಸ್ಥಿತಿಯ ಈ ಕಷ್ಟ ಯಾರು ಅರಿತಾರು?" ತನ್ನಲ್ಲೇ ಆಕೆ ತನ್ನ ನೋವನ್ನು ನುಂಗಿಕೊಳ್ಳುತ್ತಿದ್ದಳು. ಆಕೆ ಗಂಡುಮಗುವನ್ನು ಹಡೆದಾಗ ಮನಸಲ್ಲಿ ಏನೋ ಒಂಥರ ಸಂತೃಪ್ತಿ ಸಂತೋಷ. ಗಂಡನ ಹಿಂಸೆ ಅವಳನ್ನು ಕಾಡುತ್ತಿದ್ದರೂ ತನ್ನ ಮಗ ನಿತೇಶ್‌ನನ್ನು ಮುದ್ದಾಗಿ ಬೆಳೆಸಿದಳು. ಕಷ್ಟದ ಹೊರೆಯನ್ನು ಹೊತ್ತುಕೊಂಡಿದ್ದಾಗಲೂ ತಾನು ಉಪವಾಸವಿದ್ದು ಅವನನ್ನು ಉಣಿಸುತ್ತಿದ್ದಳು.

ಒಂದು ದಿನ ಗಂಡ ಕುಡಿದು ಮನೆಗೆ ಹಿಂತಿರುಗುವ ವೇಳೆ ಬಹುದೊಡ್ಡ ಟ್ರಕ್ಕೊಂದು ಅವನ ಪ್ರಾಣ ಪಕ್ಷಿಯನ್ನು ಅಟ್ಟಿಸಿಕೊಂಡು ಹೋಯಿತು. ಗಂಡನನ್ನು ಅಗಲಿ ಆಕೆ ವಿಧವೆ ಪಟ್ಟ ಧರಿಸಿದಳು. ಮಗ ಓದಬೇಕು, ಕಲಿತು ದೊಡ್ಡವನಾಗಬೇಕು, ಉನ್ನತ ವಿದ್ಯೆ ಪಡೆಯಬೇಕೆಂಬ ಆಕೆಯ ಛಲದ ಫಲವಾಗಿ ಆತ ಕಲಿತು ಬೆಳೆದು ನಿಂತ. ಕಂಪೆನಿಯ ಆಜ್ಞೆ ಮೇರೆಗೆ ಅಮೇರಿಕಕ್ಕೆ ಹಾರಲು ವಿಮಾನ ರೆಡಿಯಾಗಿ ನಿಂತಿತ್ತು. ಆಕೆಯಲ್ಲಿ ಭರವಸೆಯ ಗೋಪುರವ ಕಟ್ಟಿದ. ಕೆಲವೇ ಕ್ಷಣದಲ್ಲಿ ಮಗನ ಹೊತ್ತ ವಿಮಾನ ಬಾನಂಚಿನಲ್ಲಿ ಹಾರಿ ಮಾಯವಾಯಿತು.

ವರ್ಷಗಳು ಸಂದರೂ ಮಗನ ಪತ್ರವಿಲ್ಲ, ಫೋನ್ ಕರೆಯಿಲ್ಲ. ಆ ಮುದಿ ದೇಹಕ್ಕೆ ಜೀವವಿದೆಯೇ ಸತ್ತಿದೆಯೇ ಎಂದು ತಿಳಿಯಲು ಆತ ಪತ್ರ ಕೂಡ ಬರೆಯಲಿಲ್ಲ. ಆಕೆಯ ನೆರವಿಗೆ ಯಾರೂ ಸಹ ಇಲ್ಲ. ಸಮಾಜ ಸೇವಕರ ಕೈಯಿಂದ ಅರಳಿದ ಗುಡಿಸಲಾಗಿತ್ತು ಆಕೆಯ ಪಾಲಿನ ಆಶ್ರಯತಾಣ. ಹೊತ್ತಿನ ಊಟಕ್ಕಾಗಿ ರಸ್ತೆ ಬದಿಯ ಕಸಕಡ್ಡಿಗಳನ್ನು, ಗುಜರಿಗಳನ್ನು ಹೆಕ್ಕುವುದು ಅನಿವಾರ್ಯವಾಗಿತ್ತು. ದಿನ ಕಳೆದಂತೆ ಕೂದಲು ನೆರೆತಿತು. ರಕ್ತ ಹೆಪ್ಪುಗಟ್ಟಿತು. ಚರ್ಮ ಸುರುಟಿತು. ಎಲುಬುಗಳು ಬಾಗಿ ಬೆಂಡಾಯಿತು. ಇನ್ನೂ ಮಗನ ನಿರೀಕ್ಷೆಯಲ್ಲಿ...

ಆದರೆ ಅವನು ಫಾರಿನ್ ಕನ್ಯೆಯರೊಡನೆ ಚಕ್ಕಂದವಾಡುತ್ತಿದ್ದ. ಮೋಜಿಗಾಗಿ ಹಣ ವ್ಯಯಿಸಿ ಬಾರ್ ಮಾಲೀಕರ ಜೇಬು ತುಂಬಿಸುತ್ತಿದ್ದ. ಜೀವನದ ಮುದಿ ವಯಸ್ಸಿನಲ್ಲಿಯೂ ಮರಣ ವಾಸನೆ ಸವಿಯುತ್ತಿರುವಾಗಲೂ ತಿಪ್ಪೆಗಳನ್ನು ಹೆಕ್ಕಿ ದುಡಿದು ತಿನ್ನುತ್ತಿದ್ದಳು. ಹಲವು ವರ್ಷದ ಬಳಿಕ ಆತ ಊರಿಗೆ ವಾಪಸಾದ. ಕಲಾ ವಿನ್ಯಾಸದಿಂದ ರಾರಾಜಿಸುವ ಎರಡು ಅಂತಸ್ತಿನ ಬಂಗಲೆಯನ್ನು ಕಟ್ಟಿಸಿದ. ಅವಶ್ಯಕ್ಕಿಂತ ಅನಾವಶ್ಯವನ್ನು ತುಂಬಿಸಿಟ್ಟ. ಕೈಯಾಳುಗಳನ್ನು ಸೇವಕರನ್ನು ನೇಮಿಸಿದ. ನಾನಾ ವಿಧದ ಕಾರುಗಳನ್ನು ಶೇಖರಿಸಿಟ್ಟ. ಇನ್ನೂ ಆ ಮುದಿ ಜೀವ ಟೊಳ್ಳು ಗುಡಿಸಲಿನೊಳಗೆ ಕೊಳೆಯುತ್ತಿತ್ತು. ಆತ ಹೆತ್ತವಳನ್ನು ಮರೆತು ಐಶಾರಾಮದಲ್ಲಿ ಮೆರೆದಿದ್ದ. ಅದು ಅವನಿಗೊಂದು ಸವಾಲಾಯಿತು. ಬಹುದೊಡ್ಡ ಬಂಗಲೆಯಲ್ಲಿ ಕೊಳೆತ ಜೀವವನ್ನು ತುಂಬಿಸಲು ಇಷ್ಟವಿರಲಿಲ್ಲ. ವೃದ್ಧಾಶ್ರಮದ ಚಿತ್ರಣ ತೇಲಿಬಂತು. ಊರವರ ಪಿಸುಗುಸು ಮತ್ತೊಂದು ಸವಾಲಾಯಿತು. ಆ ಮುದಿ ಜೀವಕ್ಕೆ ಮನೆಯ ಮೂಲೆಯಲ್ಲಿ ಜಾಗ ಕೊಟ್ಟು ಕುಳ್ಳಿರಿಸಿದ. ತಂದದ್ದನ್ನು ತಿಂದುಂಡು ಮಲಗುತ್ತಿದ್ದಳು. ದಿನ ಕಳೆದಂತೆ ರೋಗವು ಆಕೆಯ ಬೆನ್ನು ಹಿಡಿಯಿತು. ಕೆಮ್ಮು, ಜ್ವರ, ಆಯಾಸ, ಬಲಹೀನತೆ ಆವರಿಸಿತು. ಆತನಿಗೂ ಹೆಂಡತಿ ಮಕ್ಕಳಿಗೂ ಅಸಹ್ಯವೆನಿಸಿತು. ಪೀಡೆಯನ್ನು ತೊಲಗಿಸಲು ಹಾತೊರೆಯುತ್ತಿದ್ದರು. ಅವಳ ಸೇವೆ ಮಾಡಲು ವೈದ್ಯರ ಹತ್ತಿರ ಕೊಂಡು ಹೋಗಿ ತೋರಿಸಲು ಸಮಯವಿರಲಿಲ್ಲ. ಅವರು ಮೋಜಿನ ಸರಸದಲ್ಲಿ ತಲ್ಲೀನರಾಗಿದ್ದರು. ರೋಗವು ಬೆಂಬಿಡದೆ ಕಾಡಿತು. ಗೆಳೆಯರಿಂದ ಅವಮಾನವಾಯಿತು, ನಾಚಿಕೆಯಾಯಿತು. ಬೇರೆ ದಾರಿ ಕಾಣದೆ ಪಾಳುಬಿದ್ದ ಕೊಠಡಿಗೆ ನೂಕಿ ಬಿಟ್ಟರು. ತಿನ್ನಲು ಕುಡಿಯಲು ಸಾಧ್ಯವಾಗದೆ ಒಣರೊಟ್ಟಿ, ನೀರು ದಿನಗಳವರೆಗೆ ಕೊಳೆಯುತ್ತಿತ್ತು. ಆ ಕೊಠಡಿಯಲ್ಲಿ ತಿಗಣೆಗಳು, ಗೆದ್ದಲು, ಜೇಡ ಬಲೆ ನೇಯ್ದು ಬಿಡಾರ ಹೂಡಿದವು.

ಕೆಲವು ದಿನ ಕಳೆದಾಗ ಆಕೆಗೆ ಅವರ ಮನಃಸ್ಥಿತಿ ಅರ್ಥವಾಯ್ತೇನೋ. ತಟ್ಟನೆ ತನ್ನ ಗಂಟನ್ನು ತೋಳಿಗಿರಿಸಿ ಬಂಗಲೆಯಿಂದ ಹೊರಗಿಳಿದಳು. ಆಗ ಅವರ ಮುಖದ ಕಾಂತಿ ಹಾಲು ಕುಡಿದಷ್ಟು ಸಂತೋಷದಿಂದ ಕಂಗೊಳಿಸುತ್ತಿತ್ತು. ಹೀಗೆ ಸ್ಮಶಾನಗಳು, ಬಸ್‌ಸ್ಟಾಂಡ್‌ಗಳು, ಫುಟ್‌ಪಾತ್‌ಗಳು, ಅಂಗಡಿ ಮುಂಗಟ್ಟುಗಳು ಆಕೆಯ ಆಶ್ರಯ ತಾಣವಾಯಿತು. ಮಸೀದಿ, ದೇವಸ್ಥಾನದ ಮೆಟ್ಟಿಲುಗಳು ಅಭಯ ಕೇಂದ್ರವಾಯಿತು. ಮಗ ಕಾರಿನಲ್ಲಿ ತಿರುಗುತ್ತಾ ಉಲ್ಲಾಸ ಪಡುತ್ತಿರುವಾಗಲೂ ಆಕೆಯ ಬಗ್ಗೆ ಕಿಂಚಿತ್ತೂ ಯೋಚನೆಯಿರಲಿಲ್ಲ. ದುಃಖವಾಗಲಿಲ್ಲ, ಬೇಸರಪಡಲಿಲ್ಲ. ದಿನಗಳು ಸರಿದಾಗ ವಿಧಿಯ ಲೀಲೆಯಂತೆ ಎಲ್ಲೋ ಒಂದು ಕಸದ ರಾಶಿಯಲ್ಲಿ ಶವವಾಗಿ ಕೊಳೆತು ಹೋದಳು. ತನ್ನನ್ನು ಸಾಕಿ ಸಲಹಿದ ಅಮ್ಮ ಆತನ ಪಾಲಿಗೆ ಪೀಡೆಯಾದಳು. ಊರಿನ ಜನ ಗುಸುಗುಸು ಮಾಡಿದರು. ಹಣದ ಪ್ರಭಾವದಿಂದ ಅದು ಕೆಲವು ದಿನಕ್ಕೆ ಸೀಮಿತವಾಗಿತ್ತು. ಲಕ್ಷಾಂತರ ಹಣ ಸಂಪಾದಿಸಿ ಪತ್ನಿ ಮಕ್ಕಳ ಹೆಸರಲ್ಲಿ ಬರೆದಿಟ್ಟು ಮಕ್ಕಳನ್ನೆಲ್ಲ ಉನ್ನತ ರೀತಿಯಲ್ಲಿ ಬೆಳೆಸಿದ. ಎಲ್ಲರೂ ಫಾರಿನ್‌ಗೆ ಹಾರಿದರು. ಕಾಲ ಕಳೆದಂತೆ ಈತನ ಬಲವು ಕುಂದಿತು. ಕೂದಲು ಬೆಳ್ಳಗಾಯಿತು. ಚರ್ಮವು ಸುರುಟಿತು. ದೇಹ ಬೆಂಡಾಯಿತು. ಎದ್ದು ನಡೆಯಲು ಅಸಾಧ್ಯವಾಯಿತು. ಹೊತ್ತಿನ ಊಟ ಸರಿ ಹೋಗುತ್ತಿರಲಿಲ್ಲ. ಆತನ ಬೆನ್ನು ಹಿಡಿದದ್ದು ಕ್ಯಾನ್ಸರ್ ಎಂದು ತಿಳಿಯಿತು. ಆಸ್ತಿಯ ಮುಕ್ಕಾಲು ಭಾಗ ವೈದ್ಯರಿಗೆ ಸುರಿದ. ಊರಿನ ಜನ, "ಇಂತಹವರಿಗೆ ಹೀಗೇ ಆಗಬೇಕು. ಇದು ಅವನ ಅಮ್ಮನ ಶಾಪ. ಸಾಯಲಿ, ನರಳಿ ನರಳಿ ಸಾಯಲಿ" ಎಂದು ಶಪಿಸುತ್ತಿದ್ದರು. ಯಾರೂ ಸಹಾಯದ ಹಸ್ತ ಚಾಚಲಿಲ್ಲ. ಸೇವಕರು ದೂರ ಸರಿದರು. ಮಾತೆಯ ಶಾಪ ತಿರುಗು ಬಾಣದಂತೆ ಬಲವಾಗಿ ಹಿಡಿಯಿತು. ವೈದ್ಯರಿಗೆ ಸುರಿಯಲು ಹಣವಿಲ್ಲದಿದ್ದುದರಿಂದ ವೈದ್ಯರೂ ದೂರ ಸರಿದರು. ಹೀಗೆ ವರ್ಷಗಳ ವರೆಗೆ ನರಳಿ ನರಳಿ ಶವವಾಗಿ ಕೊಳೆತನು. ಮಕ್ಕಳಿಗೆ ತಿಳಿಸಿದಾಗ ಒಬ್ಬನೆಂದ, "ಸ್ಸಾರಿ, ನನಗೆ ಬರಲಿಕ್ಕಾಗಲ್ಲ. ಅಗತ್ಯವಾದ ಮೀಟಿಂಗಿದೆ." ಇನ್ನೊಬ್ಬನೆಂದ, "ನನ್ನ ಮಗಳ ಹುಟ್ಟುಹಬ್ಬ." ಒಬ್ಬೊಬ್ಬರು ಒಂದೊಂದು ಕಾರಣ ಹೇಳಿ ತಪ್ಪಿಸಿದರು. ಕೊನೆಗೆ ಸ್ಮಶಾನದ ಸೇವಕರು ಕೊಂಡು ಹೋಗಿ ಬೂದಿ ಮಾಡಿದರು. ಐಶಾರಾಮದಿಂದ ಎದ್ದು ನಿಂತಿದ್ದ ಬಂಗಲೆ ಕಂಗೊಳಿಸುತ್ತಿತ್ತು. ಇನ್ನೂ ಯಾರಿಗೆ? ಅದು ಅನಾಥವಾಗಿದೆ...

## ಪತಿ-ಪತ್ನಿ: ಒಲವೆ ನಮ್ಮ ಬದುಕು

(11ನೇ ಪುಟದಿಂದ)

ನೋವು, ದುಃಖ, ಸಂತೋಷ, ಅನಾರೋಗ್ಯ ಮನುಷ್ಯನಿಗೆ ಬರುವುದಾದರೂ ಹೆಣ್ಣು ಗಂಡೆಂಬ ಜೀವಿಯಲ್ಲಿ ಸಂವೇದನೆಯನ್ನು ಅನುಭವಿಸುವ, ತಾಳಿಕೊಳ್ಳುವ ಮತ್ತು ಸಹಿಸಿಕೊಳ್ಳುವ ಶಕ್ತಿ ಖಂಡಿತಾ ಬೇರೆ ಬೇರೆಯಾಗಿರುವಾಗ ಅದ್ಹೇಗೆ ದೈಹಿಕವಾದ ಕೆಲಸವನ್ನು ನಾವು ಇಬ್ಬರೂ ಮಾಡಿದಾಗ ಸಮಾನತೆ ಸಾಧ್ಯ ಎಂದು ವಾದಿಸಬಹುದು?

ಉತ್ತಮ ಪತ್ನಿಯ ಪಟ್ಟಿಗಳು ನಮ್ಮ ಮುಂದಿರುವಾಗ ಉತ್ತಮ ಪತಿಯ ಪಟ್ಟಿಯೂ ಇರಬೇಕಾದುದು ತೀರಾ ಅಗತ್ಯ. ಆತ ದುಡಿದು ಬರುವಾಗ ಪತ್ನಿ ಮನೆಯಲ್ಲಿದ್ದುಕೊಂಡು ಮನೆಯನ್ನು ಒಪ್ಪ ಓರಣವಾಗಿಟ್ಟುಕೊಂಡು ಆಕೆಯೂ ಶೃಂಗರಿಸಿಕೊಂಡಿರಬೇಕೆಂಬುದು ಅವನ ಆಸೆ. ನನ್ನಿಂದ ನನ್ನ ಪತ್ನಿ ಸಂತೋಷಗೊಳ್ಳಬೇಕು. ಆಕೆಗೆ ನಾನು ಹಿತಚಿಂತಕನೆಂಬ ಅರಿವು ಬರಬೇಕೆಂಬುದು ಅವನ ಬಯಕೆ. ಪತ್ನಿ ಗರ್ಭಿಣಿಯಾದಾಗ ಸಂತೋಷ ಪಡುವ ಪತಿ ತುಂಬು ಬಸುರಿಯಾದ ಪತ್ನಿಯನ್ನು ಕಂಡು ಹೆಮ್ಮೆ ಪಡುತ್ತಾನೆ, ಸಂತೋಷ ಪಡುತ್ತಾನೆ. ಆಕೆಗೆ ಬೇಕಾದ ಅಗತ್ಯಗಳನ್ನು ಕೂಡಲೇ ಪೂರೈಸುವಲ್ಲಿ ಸಂತೋಷ ಪಡುತ್ತಾನೆ. ವೈದ್ಯರಲ್ಲಿ ಕರೆದುಕೊಂಡು ಹೋಗಲು ಆತ ಹೆಮ್ಮೆ ಪಡುತ್ತಾನೆ. ಪತ್ನಿಯ ಮಾನಸಿಕ, ದೈಹಿಕ ಸುಖಕ್ಕಾಗಿ ಮತ್ತು ಆಕೆಯನ್ನು ಸಂತೃಪ್ತಿಪಡಿಸಲು ಆತ ಉತ್ಸುಕನಾಗಿರುತ್ತಾನೆ. ಅದಕ್ಕಾಗಿ ಪ್ರಯತ್ನಿಸುತ್ತಾನೆ.

ಪತ್ನಿ ಮನೆಕೆಲಸ ಮಾಡಲು ಕಷ್ಟಪಡುತ್ತಿರುವಾಗ ಮನದಲ್ಲೇ ಪತ್ನಿಯ ಬಗ್ಗೆ ಕನಿಕರ ಪಡುವ ಪತಿ ಇತರ ಸದಸ್ಯರ ಉಪಸ್ಥಿತಿಯಿಂದ ಮೌನ ವಹಿಸುತ್ತಾನೆ. ತನ್ನ ತಾಯಿ, ಒಡಹುಟ್ಟಿದವರಿಗಾಗಿ ಅಡುಗೆ ಮುಂತಾದ ಕೆಲಸದಲ್ಲಿ ಒದ್ದಾಡುವಾಗ ಪತ್ನಿಯನ್ನು ಕಂಡು ಮನದಲ್ಲೇ ಆಕೆಯ ಬಗ್ಗೆ ಪ್ರೀತಿ, ಅಭಿಮಾನ, ಹೆಮ್ಮೆಯನ್ನು ಹೆಚ್ಚಿಸಿಕೊಂಡಿರುತ್ತಾನೆ.

ಆಕೆ ಮನೆ ಕೆಲಸ ಮಾಡುವಾಗ ಆಕೆಯೊಂದಿಗೆ ಸರಸವಾಡಬೇಕು, ಮೈಕೈ ಮುಟ್ಟಿ ಆಕೆಯನ್ನು ಭೇಡಿಸಬೇಕೆಂದು ಬಯಸುತ್ತಾನೆ. ಮನೆಯಲ್ಲಿ ಇತರರಿರುವಾಗಲೂ ಕದ್ದುಮುಚ್ಚಿ ಮುದ್ದಿಸಬೇಕೆಂದು ಬಯಸುತ್ತಾನೆ. ಆಕೆಯ ತಲೆ ಬಾಚಬೇಕು, ಸ್ನಾನ ಮಾಡಿಸಬೇಕು ಎಂಬುದೂ ಆತನ ಮನದಾಳದ ಬಯಕೆಗಳು. ಪತ್ನಿ ಏನಾದರೂ ಅನಾರೋಗ್ಯದಿಂದ ಮಲಗಿದರೆ ಆತ ಚಡಪಡಿಸುತ್ತಾನೆ. ಹೊರಗೆ ಹೋದಲ್ಲಿ ಆತನಿಗೆ ಸರಿಯಾಗಿ ಕೆಲಸ ಮಾಡಲೂ ಆಗದು. ಬಸುರಿಯಾದರಂತೂ ಆತ ದಿನರಾತ್ರಿ ಆಕೆಯ ಬಗ್ಗೆ ಆಲೋಚಿಸುತ್ತಿರುತ್ತಾನೆ. ಸುಗಮ ಹೆರಿಗೆಯಾಗುವ ತನಕವೂ ಆತನಿಗೆ ನೆಮ್ಮದಿ ಇರುವುದಿಲ್ಲ. ಆಕೆಗೆ ಅಸೌಖ್ಯವಾದಾಗ ರಾತ್ರಿಯೆದ್ದು ಕೈಯೆತ್ತಿ ದೇವನಲ್ಲಿ ಬೇಡುತ್ತಾನೆ. ಕಣ್ಣೀರಿಳಿಸುತ್ತಾನೆ. ಹೆರಿಗೆ ಆಗಿ ತನ್ನ ಮಗುವಿಗೆ ಆಕೆ ಹಾಲುಣಿಸುವಾಗ ಆತ ಸಂಭ್ರಮಿಸುತ್ತಾನೆ. 4 ವಿವಾಹವಾಗಲು ಅವಕಾಶವಿದ್ದಾಗಲೂ ಒಂದೇ ಪತ್ನಿಯಲ್ಲಿ ಆತ ಸಂತೃಪ್ತಿಯನ್ನು ಕಾಣಲು ಬಯಸುತ್ತಾನೆ. ಆಕೆಯನ್ನು ಇತರರು ನಿಂದಿಸುವುದಾಗಲಿ, ಕೀಳಾಗಿ ಕಾಣುವುದಾಗಲಿ ಮಾಡಿದರೆ ಆತನಿಂದ ಸಹಿಸಲು ಸಾಧ್ಯವಾಗದು.

ಬಸ್, ಕಚೇರಿ, ದಾರಿಯಲ್ಲಿ ಇತರ ಸ್ತ್ರೀಯರನ್ನು ನೋಡಿ ಅವರ ಸೌಂದರ್ಯ, ಉಡುಪು ಹಾಗೂ ಅವರ ವ್ಯಕ್ತಿತ್ವದ neetness ನೋಡಿ ಅದೇ ರೀತಿ ನನ್ನ ಪತ್ನಿಯೂ ಆಗಬೇಕು, ಅವರಿಗಿಂತ ಚೆನ್ನಾಗಿ ಡ್ರೆಸ್ ಮಾಡಿಕೊಂಡಿರಬೇಕು, ತಲೆಗೂದಲನ್ನು ಚೆನ್ನಾಗಿ ಬಾಚಿಕೊಂಡಿರಬೇಕು, ವಿಭಿನ್ನವಾದ ಆಭರಣದಿಂದ ಶೃಂಗರಿಸಿಕೊಂಡಿರಬೇಕು, ಕೈಗಳಿಗೆ ಮೆಹಂದಿ ಹಚ್ಚಬೇಕು, ಕಣ್ಣಿಗೆ ಕಾಡಿಗೆ ಹಚ್ಚಿ ಕಂಗೊಳಿಸಬೇಕು ಮುಂತಾದ ಸೌಂದರ್ಯದ ಅತಿರೇಕವನ್ನು ಆಕೆ ತಲುಪಬೇಕೆಂದು ಬಯಸುತ್ತಾನೆ. ತನ್ನ ಪತ್ನಿಯ ಸೌಂದರ್ಯದ ಆಸ್ವಾದನೆ ಇನ್ನಾರಿಗೂ ಆಗಬಾರದು. ಆದರೂ ಆಕೆಯನ್ನು ಇತರರು ಸೌಂದರ್ಯ ಗುಣದಿಂದ ಮೆಚ್ಚಬೇಕೆಂಬುದು ಮನದಾಳದ ತುಡಿತ.

ಹೀಗೆ ಪರಸ್ಪರ ಪತಿ-ಪತ್ನಿಯರು ತಮ್ಮ ಅಭಿರುಚಿ, ಹವ್ಯಾಸಗಳನ್ನು ಅರ್ಥಮಾಡಿಕೊಂಡು ಜೀವಿಸಿದ್ದೇ ಆದರೆ ಸಮಸ್ಯೆ ಇರದು. ಈ ಎಲ್ಲಾ ಸೂತ್ರಗಳನ್ನು ನಾವು ಅಂಧತೆಯೆಂದೋ ಮೌಢ್ಯತೆ ಎಂದೋ ಬಂಧನ ಎಂದೋ ಅರ್ಥೈಸಿದ್ದೇ ಆದರೆ ಮನುಷ್ಯ ಸಂಕುಲದ ನಾಶಕ್ಕೆ ಅಥವಾ ಧರ್ಮದ ನಾಶಕ್ಕೆ ಹೇತುವಾಗುವುದರಲ್ಲಿ ಸಂಶಯವಿಲ್ಲ. ಯಾಕೆಂದ್ರೆ ಇಂತಹ ಪ್ರೀತಿ ವಿಶ್ವಾಸದ ಸಿದ್ಧಾಂತಕ್ಕೆ ಅತೀತವಾದ ಯಾವುದೇ ಮಾನವ ನಿರ್ಮಿತ ವ್ಯಾಖ್ಯಾನಕ್ಕೆ ಕೂಡ ಜೀವನ ಕಲ್ಪಿಸಿ ಕೊಡಲು ಸಾಧ್ಯವಿಲ್ಲ. ಪ್ರತಿಯೊಂದು ಮನುಷ್ಯ ಹೃದಯ ಕೂಡ ಪ್ರೀತಿ-ವಿಶ್ವಾಸ, ನಂಬಿಕೆ, ಕರುಣೆಯನ್ನು ಇತರರಿಂದ ಬಯಸುವಾಗ, ಅದಕ್ಕಿಂತ ಭಿನ್ನವಾದ ಮಾನಸಿಕ ಸ್ಪರ್ಶವನ್ನು ಅಥವಾ ಪ್ರೀತಿ, ಕರುಣೆ ಎಂಬ ಸ್ಪರ್ಶವನ್ನು ನೀಡಿ ಮನುಷ್ಯ ಸಂಬಂಧವನ್ನು ಗಟ್ಟಿಗೊಳಿಸಬಹುದು ಎಂದು ಆಲೋಚಿಸಿದ್ದೇ ಆದರೆ ಅದು ಸಾಧ್ಯವಿಲ್ಲದ ಮಾತು. ಯುರೋಪು, ಅಮೇರಿಕಾದಂತಹ ದೇಶಗಳಲ್ಲಿ ವಿಚ್ಛೇದನೆಯಂತಹ ಪ್ರಕರಣಗಳು ಊಟ ಮಾಡಿ ಕೈ ತೊಳೆದಷ್ಟು ಸುಲಭ. ಹಾಗೆ ಅಲ್ಲಿ ತಂದೆ ಯಾರೆಂದು ಗುರುತಿಸಲಾಗದ ಮಕ್ಕಳ ಸಂಖ್ಯೆಯಲ್ಲಿಯೂ ಗಣನೀಯ ಹೆಚ್ಚಳವು ಸಾಮಾಜಿಕ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಅದೇ ಸಂಸ್ಕೃತಿಯನ್ನು ನಾವು ಇಷ್ಟಪಡುವುದಾದರೆ ಬರುವ ಎಲ್ಲಾ ಅನಾಹುತಗಳಿಗೆ ತಯಾರಾಗಿರುವುದು ಒಳಿತು. ಪ್ರವಾದಿ(ಸ) ನುಡಿಯಂತೆ ಒಬ್ಬನಿಗೆ ಸದ್ಗುಣ ಶೀಲೆಯಾದ ಪತ್ನಿ ದೊರೆತರೆ ಆತ ವಿಜಯಿಯಾದಂತೆ. ಒಬ್ಬ ತಂದೆ ತನ್ನ ಹೆಣ್ಣು ಮಗಳಿಗೆ ಸೂಕ್ತವಾದ ವಿದ್ಯಾಭ್ಯಾಸ ನೀಡಿ, ಸೂಕ್ತ ವರ ನೋಡಿ ವಿವಾಹ ಮಾಡಿದ್ದೇ ಆದರೆ ಆತ ಸ್ವರ್ಗ ಗಳಿಸಬಹುದು ಎಂದು. ಮಸ್ಕನ್‌ನ ಕೀಲಿಕೈ ಪುರುಷನಾಗಿರುವಾಗ ಅದರ ಶಾಂತಿ, ಸಂತೋಷ ಕಾಪಾಡಲು ಆತ ಪ್ರಧಾನ ಪಾತ್ರ ವಹಿಸಬೇಕಾದ ಅಗತ್ಯವಿದೆ.

# ಅಲ್ಲಲ್ಲಿ ಈದ್ ಸೌಹಾರ್ದ ಕೂಟಗಳು




● **ಮಂಗಳೂರು:** ಬಹುಸಂಸ್ಕೃತಿ ಹಾಗೂ ವಿವಿಧತೆ ಎನ್ನುವುದು ದೇವನು ಸೃಷ್ಟಿಸಿದ ವ್ಯವಸ್ಥೆಯಾಗಿದ್ದು ನಾಗರಿಕರು ಇದನ್ನು ಅರ್ಥೈಸಿ ಶಾಂತಿಯುತ ಜೀವನ ನಡೆಸಲು ಮುಂದಾಗಬೇಕು. ಪವಿತ್ರ ಕುರ್‌ಆನ್ ಬಹುಸಂಸ್ಕೃತಿ, ಬಹುಸಮಾಜವನ್ನು ಮಾನ್ಯ ಮಾಡಿದೆಯಲ್ಲದೇ, ಏಕದೇವನನ್ನು ಯಾರು ಆರಾಧಿಸುವುದಿಲ್ಲವೋ ಅವರ ಆರಾಧ್ಯರನ್ನು ತೆಗಳಬಾರದೆಂದು ಮುಸ್ಲಿಮರಿಗೆ ಆದೇಶಿಸುವ ಮೂಲಕ ಸಾಮಾಜಿಕ ಸೌಹಾರ್ದತೆಗೆ, ಇನ್ನೊಂದು ಧರ್ಮವನ್ನು ಗೌರವಿಸಿ, ಆದರಿಸುವುದಕ್ಕೆ ಕಲಿಸಿದೆ ಎಂದು ಶಾಂತಿ ಪ್ರಕಾಶನದ ವ್ಯವಸ್ಥಾಪಕ ಮುಹಮ್ಮದ್ ಕುಂಞಿ ಹೇಳಿದರು. ಅವರು ದ.ಕ. ಜಿಲ್ಲಾ ನಿವೃತ್ತ ಶಿಕ್ಷಣ ಸಂಯೋಜಕ ರಹ್ಮತುಲ್ಲಾ, ಕನ್ಸಲ್ಟಿಂಗ್ ಇಂಜಿನಿಯರ್ ಎಂ.ಪಿ. ಖಲೀಲ್ ಜಂಟಿಯಾಗಿ ಜಮಾಅತೆ ಇಸ್ಲಾಮೀ ಹಿಂದ್ ಬೋಳಾರ ವರ್ತುಲದ ಅಶ್ರಯದಲ್ಲಿ ಇಲ್ಲಿನ ಶಾದಿಮಹಲ್‌ನಲ್ಲಿ ಸೆ. 19ರಂದು ಹಮ್ಮಿಕೊಂಡಿದ್ದ ಈದ್ ಸೌಹಾರ್ದ ಕೂಟದಲ್ಲಿ ಮಾತಾಡುತ್ತಿದ್ದರು.

ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಅಸೋಸಿಯೇಶನ್ ಮಂಗಳೂರು ಘಟಕದ ಸಂಚಾಲಕ ಅಶೋಕ್ ಕುಮಾರ್, ಮಾತಾಡಿ ಇಂಥ ಸೌಹಾರ್ದ ಕೂಟಗಳು ನಮ್ಮ ನಡುವಿನ ಅನುಮಾನಗಳನ್ನು ಹೋಗಲಾಡಿಸಲು ಉಪಯುಕ್ತವಾಗಿದೆ ಎಂದರು. ದ.ಕ. ಜಿಲ್ಲಾ ವಿದ್ಯಾಧಿಕಾರಿ ಮೋಸೆಸ್ ಜಯಾಶೇಖರ್ ಮಾತಾಡಿ, ಇಂಥ ಕೂಟಗಳು ಇನ್ನಷ್ಟು ಹೆಚ್ಚಬೇಕು. ಹಬ್ಬಗಳ ಸಂದರ್ಭದಲ್ಲಿ ಪರಸ್ಪರ ಧರ್ಮೀಯರು ಒಟ್ಟು ಸೇರುವುದು ಅಪನಂಬಿಕೆಯನ್ನು ಇಲ್ಲವಾಗಿಸುವುದಕ್ಕೆ ಉಪಯುಕ್ತ ಎಂದು ಈದ್ ಶುಭಾಶಯ ಕೋರಿದರು.

ರಹ್ಮತುಲ್ಲಾ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು. ಜಮಾಲುದ್ದೀನ್ ಹಿಂದಿ ಕಾರ್ಯಕ್ರಮ ನಿರೂಪಿಸಿದರು. ದ.ಕನ್ನಡ ಜಿಲ್ಲಾ ಡಿಡಿಪಿಐ ಚಾಮೇಗೌಡ, ಜ. ಇಸ್ಲಾಮೀ ಮಂಗಳೂರು ಶಾಖೆಯ ಅಧ್ಯಕ್ಷ ಕೆ.ಎಂ. ಅಶ್ರಫ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುಮಾರು 100 ಮಂದಿ ದೇಶ ಬಾಂಧವರೂ ಸೇರಿದಂತೆ 250 ಮಂದಿ ಹಾಜರಿದ್ದರು.




● **ಮಡಿಕೇರಿ:** "ವೈವಿಧ್ಯತೆಗಳು ಪ್ರಪಂಚದ ಸಾಮಾನ್ಯ ನಿಯಮಗಳಲ್ಲಿ ಒಂದು. ಬಹು ಸಂಸ್ಕೃತಿಯನ್ನು ಉಳಿಸಿಕೊಂಡೇ ಸಹಬಾಳ್ವೆ ನಡೆಸುವುದು ಇಂದಿನ ಅಗತ್ಯ. ನಕಲಿ ಧರ್ಮ ವಿಶ್ವಾಸಿಗಳಿಂದ ಧರ್ಮವನ್ನೂ, ನಕಲಿ ದೇಶ ಪ್ರೇಮಿಗಳಿಂದ ದೇಶವನ್ನೂ ರಕ್ಷಿಸಬೇಕಾಗಿದೆ. ನೈಜ ಧರ್ಮ, ನೈಜ ರಾಷ್ಟ್ರಪ್ರೇಮ ಎಂದೂ ಸಮಸ್ಯೆಗಳನ್ನು ಹುಟ್ಟು ಹಾಕಿಲ್ಲ. ಇಂದಿನ ಯುವ ಪೀಳಿಗೆಗೆ ಮಾದರಿ ಎಂಬುದು ಒಂದಿಲ್ಲ. ಆದರ್ಶಗಳ ಹಾಗೂ ಮಾರ್ಗದರ್ಶನಗಳ ಅಭಾವವನ್ನು ಇಂದಿನ ಯುವಪೀಳಿಗೆ ಎದುರಿಸುತ್ತಿದೆ. ಸಮಾಜದಲ್ಲಿ ಹೊಣೆಗಾರರು ಎನಿಸಿಕೊಂಡವರೂ ಮುಂದಿನ ಪೀಳಿಗೆಗೆ ಉತ್ತಮ ಸಂದೇಶವನ್ನು ನೀಡುವ ನೈತಿಕ ಅರ್ಹತೆಯನ್ನು ಹೊಂದಿರುವುದಿಲ್ಲ. ಇದು ಅತ್ಯಂತ ಕಳವಳಕಾರಿ ಬೆಳವಣಿಗೆ" ಎಂದು ಮಂಗಳೂರಿನ ಶಾಂತಿ ಪ್ರಕಾಶನದ ವ್ಯವಸ್ಥಾಪಕ ಮುಹಮ್ಮದ್ ಕುಂಞಿ ವಿಷಾದಿಸಿದರು.

ಅವರು ಪತ್ರಿಕಾಭವನದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ಮಡಿಕೇರಿ ಶಾಖೆ ಏರ್ಪಡಿಸಿದ್ದ 'ಈದ್ ಸೌಹಾರ್ದ ಕೂಟ'ದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

'ಶಕ್ತಿ' ದಿನಪತ್ರಿಕೆ ಪ್ರಧಾನ ವ್ಯವಸ್ಥಾಪಕ ಜಿ. ಚಿದ್ವಿಲಾಸ್ ಮಾತನಾಡುತ್ತಾ, "ಸಮಾಜದಲ್ಲಿ ಅಶಾಂತಿಯನ್ನು ಹುಟ್ಟು ಹಾಕುವ ಶಕ್ತಿಗಳನ್ನು ಆಯಾ ಸಮುದಾಯದವರೇ ಗುರುತಿಸಿ ತಡೆದಲ್ಲಿ ಅದು ಸಮಾಜದಲ್ಲಿ ಮಾದರಿಯಾದೀತು. ಸೌಹಾರ್ದ ಕೂಟಗಳನ್ನು ಎಲ್ಲಾ ಸಮುದಾಯಗಳೂ ನಡೆಸುವಂತಾಗಬೇಕು. ಈ ನಿಟ್ಟಿನಲ್ಲಿ ಜಮಾಅತೆ ಇಸ್ಲಾಮಿಯ ಶ್ರಮ ಶ್ಲಾಘನೀಯ" ಎಂದರು.

ಸಂತ ಮೈಕಲ್ ಚರ್ಚ್‌ನ ಧರ್ಮಗುರು ರೆ। ಫಾ। ವಿಲ್‌ಫ್ರೆಡ್ ಹಾರೈಸಿದರು. ಮುಹಮ್ಮದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತೌಸೀಫ್ ಸ್ವಾಗತಿಸಿದರು. ಉಮರ್ ಮೌಲವಿ ಕುರ್‌ಆನ್ ಪಠಿಸಿದರು. ಅಬ್ದುಲ್ಲಾ ಕಾರ್ಯಕ್ರಮ ನಿರೂಪಿಸಿದರು. ಸ್ಥಾನೀಯ ಸಂಚಾಲಕ ಮುಹಮ್ಮದ್ ಹನೀಫ್ ವೇದಿಕೆಯಲ್ಲಿದ್ದರು.

● **ತೊಕ್ಕೊಟ್ಟು:** ಇಲ್ಲಿನ ಚೆಂಬುಗುಡ್ಡೆಯಲ್ಲಿ ಜಮಾಅತೆ ಇಸ್ಲಾಮೀ ಉಳ್ಳಾಲ ಮಹಿಳಾ ವರ್ತುಲದ ವತಿಯಿಂದ ಸೆ. 18ರಂದು ಈದ್ ಸೌಹಾರ್ದ ಕೂಟ ಏರ್ಪಡಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ ಅನುಪಮ ಮಹಿಳಾ ಮಾಸಿಕದ ಸಂಪಾದಕಿ ಶಹನಾಝ್ ಮಾತಾಡುತ್ತಾ, "ನಾವು ಪರಸ್ಪರರ ನಂಬಿಕೆಗಳನ್ನು ಗೌರವಿಸಿದಾಗ ಸಮಾಜದಲ್ಲಿ ಶಾಂತಿಯುತವಾಗಿ ಬದುಕಲು ಸಾಧ್ಯ. ಧರ್ಮಗಳೆಂದೂ ಪರಸ್ಪರ ಕಿತ್ತಾಡಲು ಬೋಧಿಸುವುದಿಲ್ಲ. ಹಬ್ಬಗಳು ಪರಸ್ಪರರನ್ನು ಅರಿತಕೊಳ್ಳಲು ಸಹಾಯಕವಾಗುತ್ತದೆ" ಎಂದರು.

ಊಟೋಪಚಾರದ ವ್ಯವಸ್ಥೆ ಮಾಡಲಾಗಿತ್ತು. 15 ಮಂದಿ ದೇಶ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

● **ಸಿಂಧೂನೂರು:** ಸೆ. 16ರಂದು ಎಸ್.ಐ.ಓ. ಸಿಂಧೂನೂರು ಘಟಕದ ವತಿಯಿಂದ ನಗರದ ಎಸ್.ಡಿ.ಎಂ.ಟಿ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ 'ಈದ್ ಸೌಹಾರ್ದ ಕೂಟ' ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಯಾಗಿ ಶಿಕ್ಷಕರಾದ ಸಬ್ಜಾ ಅಲಿ ಮಾತಾಡಿ, "ಹಬ್ಬಗಳು ಮಾನವ ಪ್ರೇಮದ ಬೆಳವಣಿಗೆಯನ್ನು ಸೂಚಿಸುತ್ತವೆ. ಇಂದಿನ ವಿದ್ಯಾರ್ಥಿಗಳು ಅಶ್ಲೀಲತೆಗೆ ಮಾರು ಹೋಗುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಕೆಟ್ಟ ಪರಣಾಮ ಉಂಟಾಗುತ್ತದೆ. ವಿದ್ಯಾರ್ಥಿಗಳು ಸಮಾಜದಲ್ಲಿ ಕೀರ್ತಿಯನ್ನು ತರಲು ಪ್ರಯತ್ನಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಎಸ್‌ಡಿಎಂಟಿ ಕಾಲೇಜಿನ ಪ್ರಾಂಶುಪಾಲರಾದ ಪಂಪಾಪತಿ ಮಾತನಾಡಿ, "ಇಂತಹ ಕಾರ್ಯಕ್ರಮವು ಸುಂದರ ಸಮಾಜ ಕಟ್ಟಲು ನೆರವಾಗುತ್ತದೆ. ಶಿಕ್ಷಕರು ಒಂದು ರೀತಿಯಲ್ಲಿ ಬಾವಿ ಇದ್ದ ಹಾಗೆ. ವಿದ್ಯಾರ್ಥಿಗಳು ಖಾಲಿ ಬಿಂದಿಗೆ ಇದ್ದ ಹಾಗೆ. ವಿದ್ಯಾರ್ಥಿಗಳು ಮರಳಿ ಮನೆಗೆ ಹೋಗುವಾಗ ಖಾಲಿ ಬಿಂದಿಗೆಯನ್ನು ತುಂಬಿಕೊಂಡು ಹೋಗಬೇಕು" ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಕಾರ್ ಅಹ್ಮದ್ ನಿರೂಪಿಸಿದರು. ಮುರ್ತುಝುರುಲ್ಲಾ ಖಾನ್ ಪ್ರಾಸ್ತಾವಿಕ ಭಾಷಣ ಮಾಡಿ ಧನ್ಯವಾದವಿತ್ತರು.

● **ಹಾಸನ:** ಜಮಾಅತೆ ಇಸ್ಲಾಮೀ ಹಿಂದ್ ಹಾಸನ ಶಾಖೆಯ ವತಿಯಿಂದ ಹೆಚ್. ಎಸ್. ಪುರ ರಸ್ತೆಯಲ್ಲಿರುವ ಇಸ್ಲಾಮಿಕ್ ಸೆಂಟರ್‌ನಲ್ಲಿ ಈದ್ ಸೌಹಾರ್ದ ಕೂಟವು ಇತ್ತೀಚೆಗೆ ಜರಗಿತು.

ಶಾಂತಿ ಪ್ರಕಾಶನ ಮಂಗಳೂರು ಇದರ ವ್ಯವಸ್ಥಾಪಕರಾದ ಮುಹಮ್ಮದ್ ಕುಂಞಿಯವರು ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ನಗರದ ಜೀವನ ಹಳ್ಳಿ ಶಾಖಾ ಮಠದ ಸಂಗಮೇಶ್ವರ ಸ್ವಾಮೀಜಿ, ಜಿಲ್ಲಾ ವರಿಷ್ಠಾಧಿಕಾರಿ ಶರತ್ ಚಂದ್ರ, ಹಾಸನ ಜಿಲ್ಲಾಧಿಕಾರಿ ನವೀನ್ ರಾಜಸಿಂಗ್, ಕೃಷ್ಣಾ ಕಾಲೇಜಿನ ಪ್ರಾಂಶುಪಾಲರಾದ ವೈ.ಸಿ. ಉದಯ ಕುಮಾರ್, ಅಂತೋನಿ ಚರ್ಚ್‌ನ ಧರ್ಮಗುರು ಅಡ್ನಡೇ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಹಿತನುಡಿಗಳನ್ನಾಡಿದರು. ಜಮಾಅತ್ ಸ್ಥಾನೀಯ ಅಧ್ಯಕ್ಷ ಅಬ್ದುಲ್ ಖಾಲಿಕ್ ಅತಿಥಿಗಳನ್ನು ಸ್ವಾಗತಿಸಿದರು.



● **ಯಾದಗಿರಿ:** ಜಮಾಅತೆ ಇಸ್ಲಾಮೀ ಹಿಂದ್ ಯಾದಗಿರಿ ವತಿಯಿಂದ ನಗರದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಈದ್ ಸೌಹಾರ್ದ ಕೂಟವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾಧಿಕಾರಿ ಡಾ। ಕೆ.ಜಿ. ಜಗದೀಶ್ ಮಾತನಾಡುತ್ತಾ, "ಹಬ್ಬಗಳು ಶಾಂತಿ ಮತ್ತು ಸೌಹಾರ್ದತೆಯ ಪ್ರತೀಕಗಳಾಗಬೇಕು. ನಾವು ಮೊದಲು ಮನುಷ್ಯರು. ಆದ ಕಾರಣ ಮಾನವೀಯತೆಯ ಆಧಾರದಲ್ಲಿ ಜೀವನ ಸಾಗಿಸುವಂತಾಗಬೇಕು" ಎಂದು ಹೇಳಿದರು.

ಪೊಲೀಸ್ ವರಿಷ್ಠಾಧಿಕಾರಿ ಡಿ. ರೂಪಾ ಮಾತನಾಡುತ್ತಾ, "ಇಂತಹ ಸೌಹಾರ್ದ ಕಾರ್ಯಕ್ರಮಗಳು ಸಮಾಜದಲ್ಲಿ ಸಾಮರಸ್ಯ ಮೂಡಿಸಲು ಸಹಕಾರಿಯಾಗಿವೆ" ಎಂದು ನುಡಿದರು. ಲಾಲ್ ಹುಸೇನ ಇಲಕಲ್ ಮಾತ ನಾಡುತ್ತಾ, "ಹಬ್ಬಗಳು ಇಂದು ಆತಂಕದ ವಾತಾವರಣ ಸೃಷ್ಟಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಈದ್ ಸೌಹಾರ್ದ ಕೂಟಗಳು ಸಮಾಜದಲ್ಲಿ ಶಾಂತಿ, ಸಹೋದರತೆ ಮತ್ತು ಸಮಾನ ತೆಯ ಸಂದೇಶವನ್ನು ಸಾರುವ ಕೆಲಸ ವನ್ನು ಮಾಡುತ್ತಿವೆ" ಎಂದರು. ಅಧ್ಯಕ್ಷತೆ ವಹಿಸಿದ್ದ ಜ.ಇ. ವಲಯ ಸಂಚಾಲಕ ಮುಹಮ್ಮದ್ ಯೂಸುಫ್ ಕನ್ನಿ ಮಾತನಾಡುತ್ತಾ, "ದೇಶ ಸ್ವತಂತ್ರ ಗೊಂಡು 60 ವರ್ಷಗಳ ನಂತರವೂ ಇಂದು ಸಹೋದರತೆ ಹಾಗೂ ಶಾಂತಿಗಾಗಿ ಶ್ರಮಿಸುವ ಅನಿವಾರ್ಯತೆ ಉಂಟಾಗಿದೆ. ಆಯಾ ಧರ್ಮದ ಅನುಯಾಯಿಗಳು ಸ್ವಧರ್ಮದ ಸಾರವನ್ನು ಅರಿಯುವ ಅವಶ್ಯಕತೆ ಇದೆ" ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ನಾಗರತ್ನ ಅನ್‌ಪೂರ ಸಂದರ್ಭೋಚಿತವಾಗಿ ಮಾತನಾಡಿದರು. ನಗರ ಸಭೆ ಮಾಜಿ ಅಧ್ಯಕ್ಷ ಅಝೀಝ್ ಅಹ್ಮದ್ ಶಹ್ನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ಥಾನೀಯ ಅಧ್ಯಕ್ಷ ಗುಲಾಂ ಮಹಬೂಬ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಜಿದ್ ಅಬ್ದುಲ್ ಬಾರಿ ಕುರ್‌ಆನ್ ಪಠಿಸಿದರು. ಆಸಿಫ್ ಮುದಗಲ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 29 ❖ 1985 ನವೆಂಬರ್ 03–09

### ಸಮಗ್ರ ಮಾನವೀಯತೆ?

ಭಾರತೀಯ ಜನತಾ ಪಕ್ಷವು ಈಗ ಅನ್ಯ ಪಕ್ಷಗಳೊಂದಿಗಿನ ಸಂಬಂಧ ಕಡಿದುಕೊಂಡ ಸ್ವತಂತ್ರ ಪಕ್ಷವಾಗಿದೆ. ಜನತಾ ಪಕ್ಷದೊಂದಿಗೆ ವಿಲೀನವಾಗಿ ಬೇರ್ಪಡುವ ವರೆಗಿನ ಕೆಲವು ವರ್ಷಗಳ ಅದರ ರಾಜಕೀಯ ಧೋರಣೆ, ಕಾರ್ಯ ವಿಧಾನಗಳಲ್ಲಿ ಸ್ವಾಯತ್ತತೆಯನ್ನು ಸಾಧಿಸಿದ ನಂತರ ಈಗ ಅದು ತನ್ನ ಹಿಂದಿನ ಜನಸಂಘ ಯುಗದತ್ತ ಮರಳಲು ಸಿದ್ಧತೆಗಳನ್ನು ಮಾಡಿಕೊಂಡಿದೆ. ಇದು ಗಾಂಧಿನಗರದಲ್ಲಿ ಜರುಗಿದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ದ್ವಿದಿನ ಸಭೆಯಲ್ಲಿ ವಿಶದವಾಗಿದೆ. ಅದರಲ್ಲಿ ಪಕ್ಷವು ಜನಸಂಘದ ಸ್ಥಾಪಕರಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರವರ ಸಮಗ್ರ ಮಾನವೀಯತೆಯ(Integral Humanism) ತತ್ವಶಾಸ್ತ್ರವನ್ನು ಅನುಸರಿಸುವ ತೀರ್ಮಾನ ಮಾಡುವ ಮೂಲಕ 1977ರಲ್ಲಿ ಜನತಾ ಪಕ್ಷದೊಂದಿಗೆ ವಿಲೀನವಾಗಿ ಕಳೆದುಕೊಂಡಿದ್ದ ತನ್ನ ರೂಪವನ್ನು ಮತ್ತೊಮ್ಮೆ ಗಳಿಸಿಕೊಂಡಿದೆ ಎಂಬ ವಿಶ್ವಾಸವನ್ನು ಮೂಡಿಸಿದೆ.

# ಹೂಡೆ: ಆದರ್ಶ ಇಸ್ಲಾಮಿಕ್ ಸೆಂಟರ್ ಉದ್ಘಾಟನೆ




**ಉಡುಪಿ:** ಹೂಡೆ ತೋನ್ಸೆಯಲ್ಲಿ ನೂತನವಾಗಿ ನಿರ್ಮಿಸಲಾದ 3,000 ಚದರ ಅಡಿ ವಿಸ್ತೀರ್ಣದ ಆದರ್ಶ ಇಸ್ಲಾಮಿಕ್ ಸೆಂಟರನ್ನು ಮಂಗಳೂರು ಕಚ್ಚೀ ಮೆಮನ್ ಮಸೀದಿಯ ಖತೀಬರಾದ ಮೌ। ಸಯ್ಯದ್ ಯೂಸುಫ್‌ರವರು ಸೆ. 22ರಂದು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್‌ಐಓ ರಾಷ್ಟ್ರೀಯ ಅಧ್ಯಕ್ಷ ಕೆ.ಕೆ. ಸುಹೈಲ್ ಮಾತನಾಡುತ್ತಾ, "ಧರ್ಮವಿರುವುದು ಸಾಮಾಜಿಕ ಸಾಮರಸ್ಯಕ್ಕಾಗಿಯೇ ಹೊರತು ಕೋಮು ಸಂಘರ್ಷಕ್ಕಲ್ಲ. ಧರ್ಮವು ಒಟ್ಟು ಅಭಿವೃದ್ಧಿಯನ್ನು ಸಾರುತ್ತದೆ. ಸಾಮಾಜಿಕ ಬದಲಾವಣೆಗೆ ಅದು ಪ್ರೇರಕವಾಗಿದೆ" ಎಂದು ಹೇಳಿದರು.

ಜ.ಇ. ಹಿಂದ್ ಕರ್ನಾಟಕ–ಗೋವಾ ರಾಜ್ಯ ಕಾರ್ಯದರ್ಶಿ ಹಾಮಿದ್ ಹುಸೈನ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಉಡುಪಿ ತಾಲೂಕು ಪಂಚಾಯತ್ ಸದಸ್ಯೆ ವೆರೋನಿಕಾ ಕರ್ನೆಲಿಯೋ, ಎಸ್.ಐ.ಓ. ರಾಜ್ಯಾಧ್ಯಕ್ಷ ಶೌಕತ್ ಅಲಿ, ಜ.ಇ. ರಾಜ್ಯ ಸಲಹಾ ಸಮಿತಿ ಸದಸ್ಯ ಕೆ.ಎಂ. ಶರೀಫ್, ತೋನ್ಸೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಜ್ಯೋತಿ ಲೂವಿಸ್, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ವೆಂಕಟೇಶ್ ಕುಂದರ್‌ರವರು ಮಾತನಾಡಿದರು. ಜ.ಇ. ಹಿಂದ್ ವಲಯ ಸಂಚಾಲಕ ಅಬ್ದುಸ್ಸಲಾಮ್ ಯು., ಉಡುಪಿ ಜಿಲ್ಲಾ ಪಂಚಾಯತ್ ಸದಸ್ಯ ಜನಾರ್ಧನ ತೋನ್ಸೆ, ದಾರುಸ್ಸಲಾಮ್ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಬೈಕಾಡಿ ಅಹ್ಮದ್ ಸಾಹೇಬ್, ಉಡುಪಿ ಜಿಲ್ಲಾ ಮುಸ್ಲಿಮ್ ಒಕ್ಕೂಟದ ಅಧ್ಯಕ್ಷ ಕಾಸಿಮ್ ಬಾರ್ಕೂರು ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಆದರ್ಶ ಗ್ರಂಥಾಲಯದ ಉದ್ಘಾಟನೆ



**ತೊಕ್ಕೊಟ್ಟು:** ಇತ್ತೀಚೆಗೆ ಇಲ್ಲಿನ ಚೆಂಬುಗುಡ್ಡೆಯಲ್ಲಿ ಸ್ಥಾನೀಯ ಯೂತ್‌ವಿಂಗ್ ಜ.ಇ.ಯ 'ಆದರ್ಶ ಗ್ರಂಥಾಲಯ'ದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಉಳ್ಳಾಲ ಪುರಸಭಾ ಅಧ್ಯಕ್ಷರಾದ ಬಾಸಿಲ್ ಡಿಸೋಜ, "ಗ್ರಂಥಾಲಯದ ಸ್ಥಾಪನೆ ಊರಿನಲ್ಲಿ ಶಾಂತಿ ಸೌಹಾರ್ದವನ್ನು ಕಾಪಾಡುವಲ್ಲಿ ನೆರವಾಗಬಲ್ಲುದು. ಸಮಾಜದಲ್ಲಿ ಸೌಹಾರ್ದತೆಯನ್ನು ಕೆಡಿಸಬಲ್ಲ ಅನುಮಾನಗಳು ಆಗಾಗ ಸೃಷ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಧರ್ಮದ ನಿಜ ತಿಳಿವನ್ನು ಕೊಡುವ ಗ್ರಂಥಗಳು ಒಂದೆಡೆ ಸಿಗುವುದು ಬಹಳ ಒಳ್ಳೆಯದು" ಎಂದು ಹೇಳಿದರು. ಸನ್ಮಾರ್ಗ ಸಂಪಾದಕ ಏ.ಕೆ. ಕುಕ್ಕಿಲ ಮುಖ್ಯ ಭಾಷಣ ಮಾಡಿದರು. ಯೂತ್‌ವಿಂಗ್ ಉಳ್ಳಾಲ ಸಂಚಾಲಕ ಅಬ್ದುರ್ರಹೀಮ್ ಸಮಾರೋಪ ಭಾಷಣ ಮಾಡಿದರು. ಸ್ಥಾನೀಯ ಸಂಚಾಲಕ ಮನ್ಸೂರ್ ಪ್ರಾಸ್ತಾವಿಕವಾಗಿ ಮಾತಾಡಿದರು. ಸಹ ಸಂಚಾಲಕ ಶಾಕಿರ್ ಧನ್ಯವಾದವಿತ್ತರು. ಸಿನಾನ್ ಕುರ್‌ಆನ್ ಪಠಿಸಿದರು. ಮುಹಮ್ಮದ್ ಮುಬೀನ್ ಕಾರ್ಯಕ್ರಮ ನಿರೂಪಿಸಿದರು.

# ಈದ್ ಸೌಹಾರ್ದ ಕೂಟ




● **ಗಂಗೊಳ್ಳಿ:** ಬೋರ್ಡ್ ಹಿಂದುಸ್ತಾನಿ ಹಿ.ಪ್ರಾ. ಶಾಲೆಯಲ್ಲಿ ಜ.ಇ. ಹಿಂದ್ ಮಹಿಳಾ ಘಟಕದ ವತಿಯಿಂದ ಇತ್ತೀಚೆಗೆ ಈದ್ ಸೌಹಾರ್ದ ಕೂಟ ಆಯೋಜಿಸಲಾಯಿತು.

"ನಾವೆಲ್ಲಾ ಒಬ್ಬ ಸೃಷ್ಟಿಕರ್ತನ ದಾಸರು. ಜಾತಿ, ಮತ, ಭಾಷೆ ಎಂಬ ಭೇದ ಭಾವವನ್ನು ಲೆಕ್ಕಿಸದೇ ಎಲ್ಲರೂ ಒಟ್ಟಾಗಿ ಈದ್‌ನ ಸವಿಯನ್ನು ಆಚರಿಸೋಣ" ಎಂದು ಗುಲ್ನಾರ್ ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಡಾ। ರುಖ್ಸಾರ್ ಅಂಜುಮ್ (ಅಜ್ಜರಕಾಡು ಆಸ್ಪತ್ರೆ, ಉಡುಪಿ), ಶ್ರೀದೇವಿ ಕಟ್ಟೆ (ಚಿನ್ಮಯೀ ಆಸ್ಪತ್ರೆ, ಕುಂದಾಪುರ), ಡಾ। ಮಧು ಮಯೂರಿ (ಆದರ್ಶ ಆಸ್ಪತ್ರೆ, ಕುಂದಾಪುರ) ಮತ್ತು ಹೂಡೆಯ ಸಾಲಿಹಾತ್ ಗರ್ಲ್ಸ್ ಸ್ಕೂಲ್‌ನ ಪ್ರಾಂಶುಪಾಲೆ ನಫೀಸಾ ಫಾತಿಮಾ ಸಂದರ್ಭೋಚಿತವಾಗಿ ಮಾತಾಡಿದರು.

ಅನುಪಮ ಉಪಸಂಪಾದಕಿ ಕುಲ್ಸೂಮ್ ಅಬೂಬಕರ್ ಅಧ್ಯಕ್ಷತೆ ವಹಿಸಿದ್ದರು. ಖನ್ಸಾ ಎಂ.ಎಚ್. ಕಾರ್ಯಕ್ರಮ ನಿರೂಪಿಸಿದರು.

● **ಉಡುಪಿ:** ಜಿಐಓ ಉಡುಪಿಯ ವತಿಯಿಂದ ಇತ್ತೀಚೆಗೆ ನಗರದ ಮೌರ್ಯ ಹೋಟೇಲಿನಲ್ಲಿ ಈದ್ ಸೌಹಾರ್ದ ಕೂಟವನ್ನು ಹಮ್ಮಿಕೊಳ್ಳಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸರಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಿಡಿಯೂರು ಇದರ ಕೋಆರ್ಡಿನೇಟರ್ ನಿಕೇತನ ಮಾತನಾಡಿ, "ಗತಕಾಲದ ಉತ್ತಮ ಮನುಷ್ಯರ ಚರಿತ್ರೆಗಳನ್ನು ಮಕ್ಕಳ ಮುಂದೆ ಪುನರಾವರ್ತಿಸಿದರೆ ಅದರ ಪ್ರಭಾವವು ಮಕ್ಕಳ ಮೇಲೆ ಬೀಳುವುದು ಹಾಗೂ ಶ್ಲೋಕ ಅಥವಾ ಕುರ್‌ಆನಿನ ಸೂಕ್ತಗಳಾಗಲಿ ಮೊದಲು ಮಾನವನನ್ನಾಗಿಸುವ ಶಿಕ್ಷಣ ನೀಡುತ್ತವೆ" ಎಂದರು.

ಇನ್ನೋರ್ವ ಅತಿಥಿಯಾದ ಮಾಧವಿ ಭಂಡಾರಿ (ಹೆಚ್.ಓ.ಡಿ. ಹಿಂದಿ ವಿಭಾಗ ಪಿ.ಪಿ.ಸಿ ಕಾಲೇಜ್) ಮಾತಾಡಿ "ಇತರರ ಸೇವೆಯಿಂದ ನಮ್ಮ ಮನಸ್ಸು ಸಮಾಧಾನಪಡುತ್ತದೆ ಅಲ್ಲದೆ ಸಂತೃಪ್ತಗೊಳ್ಳುತ್ತದೆ" ಎಂದರು.

ಅಧ್ಯಕ್ಷತೆ ವಹಿಸಿದ್ದ ಹುಮೈರಾ (ಜ.ಇ. ಹಿಂದ್ ಮಹಿಳಾ ವಿಭಾಗ ಕಾರ್ಕಳ) ಮಾತನಾಡಿ, "ಮೊದಲಿನ ಭಾವೈಕ್ಯತೆಯು ಇಂದು ಜನರಲ್ಲಿ ಕಾಣುತ್ತಿಲ್ಲವಾದುದರಿಂದ ಇಂತಹ ಕೂಟಗಳು ಜನರ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ" ಎಂದರು.

ಅಫ್ರೀನ್ ಕುರ್‌ಆನ್ ಪಠಿಸಿದರು. ಫರಹತ್ ದಾವೂದ್ ಪ್ರಾಸ್ತಾವಿಕ ಭಾಷಣ ಮಾಡಿದರು. ಹಫ್ಸಾ ಕುಕ್ಕಿಕಟ್ಟೆ ಕಾರ್ಯಕ್ರಮ ನಿರೂಪಿಸಿದರು. ಸಬೀಹಾ ಅಸಾದಿ ಧನ್ಯವಾದವಿತ್ತರು.

# ಫಿತ್ರ್ ಝಕಾತ್

● **ಪಾಣೆಮಂಗಳೂರು:** ಜ.ಇ. ಹಿಂದ್‌ನ ಪಾಣೆ ಮಂಗಳೂರು ಶಾಖೆಯ ಸಮಾಜ ಸೇವಾ ಘಟಕದ ವತಿಯಿಂದ ಬಂಟ್ವಾಳ ತಾಲೂಕಿನ ಆಯ್ದ 312 ಕುಟುಂಬಗಳಿಗೆ 21,633 ರೂಪಾಯಿಯ ಫಿತ್ರ್ ಝಕಾತ್ ವಿತರಿಸಲಾಯಿತು.

● **ಬೆಂಗರೆ ಕಸ್ಬಾ:** ಜ.ಇ. ಹಿಂದ್ ಸ್ಥಾನೀಯ ವರ್ತುಲವು 69,876 ರೂಪಾಯಿಯನ್ನು ಫಿತ್ರ್ ಝಕಾತ್ ಆಗಿ ಸಂಗ್ರಹಿಸಿ, 314 ಬಡ ಕುಟುಂಬಗಳಿಗೆ ವಿತರಿಸಿದೆ. ಹಾಗೆಯೇ 44 ಸಾವಿರ ರೂಪಾಯಿಯನ್ನು ರಮಝಾನ್ ಕಿಟ್ ಹಾಗೂ ಬಟ್ಟೆ ಬರೆಯಾಗಿ 27 ಕುಟುಂಬಗಳಿಗೆ ವಿತರಿಸಿತ್ತು.

## ವರ ಬೇಕಾಗಿದ್ದಾರೆ

**ಆಂಗ್ಲ ಮಾಧ್ಯಮ ಶಾಲೆಯಲ್ಲಿ ಉಪನ್ಯಾಸಕಿಯಾಗಿರುವ ಖುಲಾ ಪಡೆದ ಹುಡುಗಿಗೆ ಧಾರ್ಮಿಕ ಹಿನ್ನೆಲೆಯ ವರ ಬೇಕಾಗಿದೆ. ಉಡುಪಿ, ದ.ಕ.ದವರಿಗೆ ಆದ್ಯತೆ.**

**ಸಂಪರ್ಕಿಸಿರಿ:**
**Box No: 231**
C/o. Sanmarga Weekly,
P.B. No. 16,
Mangalore - 575001

# ಹಜ್ಜ್ ಕ್ಯಾಂಪ್

**ಬೋಳಂಗಡಿ: ಜಮಾಅತೆ ಇಸ್ಲಾಮೀ ಹಿಂದ್ ಪಾಣೆಮಂಗಳೂರು ಶಾಖೆಯ ಆಶ್ರಯದಲ್ಲಿ ಸೆ. 26ರಂದು ಇಲ್ಲಿನ ಹವ್ವಾ ಜುಮಾ ಮಸೀದಿಯಲ್ಲಿ ಹಜ್ಜ್ ಯಾತ್ರಾರ್ಥಿಗಳ ತರಬೇತಿ ಶಿಬಿರ (ಹಜ್ಜ್ ಕ್ಯಾಂಪ್) ಜರಗಿತು.**

**ಹಜ್ಜ್‌ನ ವಿಧಿ ವಿಧಾನಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಗಾಗಿ ಆಗಮಿಸಿದ ಖತೀಬರಾದ ಮೌ। ಯಹ್ಯಾ ತಂಙಳ್ ಮದನಿ ಹಾಗೂ ಮೌ। ಮುಹಮ್ಮದ್ ಫೈಝಿ ಮಂಜೇಶ್ವರ ವಿವರಿಸಿದರು. ಪ್ರಶ್ನೋತ್ತರ ಕಾರ್ಯಕ್ರಮವೂ ಜರಗಿತು. ಜ.ಇ. ವಲಯ ಸಂಚಾಲಕ ಅಬ್ದುಸ್ಸಲಾಮ್ ಯು. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರಂಭದಲ್ಲಿ ಹಸನಾತ್ ಮಸೀದಿಯ ಇಮಾಮರಾದ ನೀರಾಡ್ ಮುಹಮ್ಮದ್ ಮೌಲವಿ ಕುರ್‌ಆನ್ ಪಠಿಸಿ ನಂತರ ಕಾರ್ಯಕ್ರಮವನ್ನು ನಿರೂಪಿಸಿದರು.**

EXIDE
INDUSTRIES LIMITED
GEM BATTERY CENTRE 2, Sunflower Apartments,
Opp. St. Andrew's Church, Vasco-da-gama, Goa
Tel: 0832-2511270 / 2519066 Email: gembatteriesgoa@indiatimes.com

AIT
Aysha INTERNATIONAL TRAVELS
K. M. Haris
Abdul Samad
HAJ & UMRAH
(Mangalore to Mangalore)
NORMAL CLASS Rs. 1,65,000.00 | ECONOMY CLASS Rs. 1,85,000.00 | DELUXE CLASS Rs. 1,95,000.00
Domestic & International Air Tickets, Passport Service, Emigration,
Visa Stamping, Visit Visa Saudi & Dubai, Umrah Stamping, Certificate Attestation
WAKALA
جاكتى تراويلس
المستشارون الايد العاملة المعترف لدى الحكومة الهندية وزارة العمل
ترخص: ٠٣٤٠/موم/ابر/١٠٠٠/٣٤/٤/٨١٥٣/٢٠٠٨
سعودى كونصليت رقم البطاقة: ٢٩١/١٠
تراويل هاوس
رقم التسجيل : ٤٨٣٠/كير/بارت/٧٦٦٤/٢٠٠٦
RIYADH: (+966-1) 4065989 • JEDDAH: (+966-2) 6422882 • DAMMAM: 0557920082
SADANANDA TOWERS ANNEX, 1ST FLOOR, D-NO. 2-2-62B7, CITY BUS STAND UDUPI-576101.
Ph : 0820-4294313 Fax : 0820-4294313 Mob: 9620441544, 9880172472, 9900380336 E-mail : haris_yachi@yahoo.com




To.______________________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಅಕ್ಟೋಬರ್ 03 – 09 / 1431 ಶವ್ವಾಲ್ 24 – 30




'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 28-09-2010 (Tuesday) & 30-09-2010 (Thursday)

## ಬಾಬರಿ ಮಸೀದಿ ಪರಿಸರದಲ್ಲಿ ಧ್ವಂಸಗೊಂಡ ನಾಲ್ಕು ಮಸೀದಿಗಳನ್ನು ಮರೆತದ್ದೇಕೆ?

**ಫೈಝಾಬಾದ್:** ಬಾಬರಿ ಮಸೀದಿ ಪ್ರಕರಣದ ಕುರಿತು ದೇಶವು ನ್ಯಾಯಾಲಯದ ತೀರ್ಪಿಗೆ ಕಾದು ಕುಳಿತಿರುವಾಗ ಬಾಬರಿ ಮಸೀದಿಯ ಜೊತೆಗೆ ನೆಲಸಮವಾದ ಇತರ ನಾಲ್ಕು ಮಸೀದಿಗಳನ್ನು ಮರೆತು ಬಿಡಲಾಗಿದೆ.

ಬಾಬರಿ ಮಸೀದಿಯ ಆವರಣದಲ್ಲಿರುವ, ಹಿಂದೂಗಳು ಉಪಯೋಗಿಸುತ್ತಿದ್ದ ರಾಮ್ ಚಪೂತ್ರ ಅಲ್ಲದೆ ವಿವಾದಕ್ಕೊಳಪಡದೇ ಇದ್ದ ನಾಲ್ಕು ಮಸೀದಿಗಳನ್ನು, 13 ಕಬರ್‌ಸ್ಥಾನವನ್ನು ಮತ್ತು ಖ್ವಾಜಾ ಹಾತಿಕ್ ಮಜಾರ್ ದರ್ಗಾವನ್ನು ಕರಸೇವಕರು 92ರ ಡಿಸೆಂಬರ್ 6ರಂದು ಧ್ವಂಸಗೊಳಿಸಿದ್ದಾರೆಂದು ಸುನ್ನಿ ವಕ್ಫ್ ಬೋರ್ಡಿನ ಪರವಾಗಿ ಫೈಝಾಬಾದ್ ಹಿಲಾಲ್ ಕಮಿಟಿ ಬಹಿರಂಗಪಡಿಸಿದೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಆದರೆ ಈ ವಿಷಯ ಬಹಿರಂಗವಾದ ಕೂಡಲೇ ವಿಶ್ವಹಿಂದೂ ಪರಿಷತ್ ನೇತಾರ ಅಶೋಕ್ ಸಿಂಘಾಲ್ ಇದರ ವಿರುದ್ಧ ರಂಗಕ್ಕಿಳಿದಿದ್ದಾರೆ. ಅಲ್ಲಿ ಮಸೀದಿಗಳೇ ಇರಲಿಲ್ಲವೆಂದು ಅವರು ವಾದಿಸುತ್ತಿದ್ದಾರೆ. ಹಿಲಾಲ್ ಕಮಿಟಿಯ ಖಾಲಿಕ್‌ರವರು ದಾಖಲೆಗಳ ಪ್ರತಿಯನ್ನು ಮಾಧ್ಯಮಗಳಿಗೆ ಒದಗಿಸಿದ್ದಾರೆ. ಬಾಬರಿ ಮಸೀದಿ ಪುನರ್ ನಿರ್ಮಾಣವಾಗಬೇಕೆಂದು ಆಗ್ರಹಿಸುವವರೂ ಈ ಮಸೀದಿಯ ಕುರಿತು ನಿರ್ಲಕ್ಷ್ಯ ವಹಿಸಿದ್ದಕ್ಕೆ ಖೇದ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ಬಾಬರಿ ಮಸೀದಿಯ ಸುತ್ತಲಿರುವ ಇತರ 19 ಮಸೀದಿಗಳ ಮೇಲೆಯೂ ಕರಸೇವಕರು ದಾಳಿ ಮಾಡಿದ್ದರು. ಆಗಿನ ಕೇಂದ್ರ ಗೃಹಸಚಿವ ಎಸ್.ಬಿ. ಚವ್ಹಾಣ್, ಅಯೋಧ್ಯೆ ಹಾಗೂ ಫೈಝಾಬಾದ್‌ನಲ್ಲಿ ಅಕ್ರಮಿಸಲ್ಪಟ್ಟ ಮಸೀದಿಗಳ ಪುನರ್ ನಿರ್ಮಾಣದ ವೆಚ್ಚವನ್ನು ಸರಕಾರ ಭರಿಸಲಿದೆಯೆಂದು ಸಂಸತ್ತಿನಲ್ಲಿ ಘೋಷಿಸಿದ್ದರು. ನಂತರ 7 ಮಸೀದಿಗಳಿಗೆ 7 ಲಕ್ಷ ರೂ.ಗಳನ್ನು ಕೇಂದ್ರ ಸರಕಾರ ಒದಗಿಸಿತ್ತು. ಉಳಿದ ಕೆಲವು ಮಸೀದಿಗಳಿಗೆ ಕೇಂದ್ರ ಧನ ಸಹಾಯ ನೀಡದ ಕಾರಣ ಸ್ಥಳೀಯರು ಹಣ ಸಂಗ್ರಹಿಸಿ ಮಸೀದಿಗಳನ್ನು ಪುನರ್ ನಿರ್ಮಿಸಿದ್ದರು.

## ಹೆಚ್.ಡಬ್ಲ್ಯು.ಎಫ್.ನಿಂದ ಪ್ರತಿಭಾ ಪುರಸ್ಕಾರ

**ನವದೆಹಲಿ:** ಇಲ್ಲಿನ ಹ್ಯೂಮನ್ ವೆಲ್ಫೇರ್ ಫೌಂಡೇಶನ್ ಮತ್ತು ಕೇರಳದ ಪಿ.ಎಂ. ಫೌಂಡೇಶನ್ ಜಂಟಿಯಾಗಿ ನಾಲ್ಕು ರಾಜ್ಯಗಳ 2,000 ಪ್ರತಿಭಾವಂತ ಮುಸ್ಲಿಮ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಿದೆ. ಬಿಹಾರ (ಸೆ. 26), ಉತ್ತರ ಪ್ರದೇಶ (ಅ. 3), ಅಸ್ಸಾಮ್ (ಅ. 10) ಮತ್ತು ಪಶ್ಚಿಮ ಬಂಗಾಳ(ನ. 29)ಗಳಲ್ಲಿ ಈ ಕಾರ್ಯಕ್ರಮ ಜರುಗಲಿದೆ. ವಿದ್ಯಾರ್ಥಿಗಳಿಗೆ ಸನ್ಮಾನ ಪತ್ರ ಮತ್ತು ನಗದು ಬಹುಮಾನಗಳನ್ನು ನೀಡಲಾಗುವುದು.

ಮಾತ್ರವಲ್ಲ, ಈ ಕಾರ್ಯಕ್ರಮದಲ್ಲಿ ಕಳೆದ ಕೆಲವು ವರ್ಷಗಳಿಂದ ಉತ್ತಮ ನಿರ್ವಹಣೆ ತೋರುತ್ತಿರುವ ಮತ್ತು ಉತ್ತಮ ಫಲಿತಾಂಶಗಳನ್ನು ಪಡೆಯುತ್ತಿರುವ ಅಲ್ಪಸಂಖ್ಯಾತ ಶಾಲೆಗಳಿಗೂ ಅವಾರ್ಡ್ ನೀಡಲಿದೆ ಎಂದೂ ಫೌಂಡೇಶನ್ ತಿಳಿಸಿದೆ.

"ಮುಸ್ಲಿಮ್ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ಇನ್ನೂ ಹೆಚ್ಚಿನ ರಾಜ್ಯಗಳಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ದೇಶವನ್ನಿಟ್ಟಿದ್ದೇವೆ" ಎಂದು ಹೆಚ್.ಡಬ್ಲ್ಯು.ಎಫ್.ನ ಪ್ರಧಾನ ಕಾರ್ಯದರ್ಶಿಯವರಾದ ಪ್ರೊ| ಕೆ.ಎ. ಸಿದ್ದೀಕ್ ಹಸನ್ ಹೇಳಿದ್ದಾರೆ.

**ಮದ್ರಸ ಫಾತಿಮಾ ನಿಸ್ವಾನ್**

ಕೆನರಾ ಬ್ಯಾಂಕ್ ಹಿಂದೆ, ತೆಂಕ ಎರ್ಮಾಳು,
ಉಡುಪಿ ಜಿಲ್ಲೆ - 574 119, Ph: 574199

ಈ ವರ್ಷದ ಹೆಣ್ಣು ಮಕ್ಕಳ ಕ್ಲಾಸುಗಳು ಇದೇ ಬರುವ ತಿಂಗಳ ಅಕ್ಟೋಬರ್ 1ರಂದು ಪ್ರಾರಂಭವಾಗಲಿದ್ದು, ಪ್ರವೇಶಿಸಲಿಚ್ಛಿಸುವವರು ಮೇಲಿನ ವಿಳಾಸಕ್ಕೆ ಸಂಪರ್ಕಿಸಬಹುದು.

2556979, 9901732101

## ತೀರ್ಪು ಏನೇ ಆದರೂ.. (ಮುಖಪುಟದಿಂದ)

ಕಣ್ಣು ಮುಚ್ಚಿ ಉಸಿರು ಬಿಗಿಹಿಡಿದು ಆ ಪರಿಸ್ಥಿತಿಗಾಗಿ ಪ್ರಾರ್ಥಿಸುತ್ತಿಲ್ಲ. ನ್ಯಾಯಾಲಯದ ತೀರ್ಪನ್ನು ಮನ್ನಿಸುವುದಾಗಿ ಬಾಬರಿ ಮಸೀದಿ–ರಾಮಜನ್ಮ ಭೂಮಿ ದಾವೆಯ ಉಭಯ ಕಕ್ಷಿಗಳೂ ಒಪ್ಪಿವೆ. ದಾವೆಯಲ್ಲಿ ಸೋಲುವವರು ಕಾನೂನಿನ ಹಾದಿ ಹಿಡಿಯುವುದಾಗಿ ಸ್ಪಷ್ಟಪಡಿಸಿದ್ದಾರೆ. ಕೇಂದ್ರ ಸಚಿವ ಸಂಪುಟವು ಸೆಪ್ಟೆಂಬರ್ 16ರಂದು ಅಂಗೀಕರಿಸಿದ ಠರಾವಿನಲ್ಲಿ ತೀರ್ಪನ್ನು ಕಾನೂನು ಕ್ರಮವೆಂಬ ಸಕಾರಾತ್ಮಕ ದೃಷ್ಟಿಯಿಂದ ನೋಡಬೇಕೆಂದು ಜನತೆಯನ್ನು ವಿನಂತಿಸಿದೆ. ತೀರ್ಪಿನ ಬಳಿಕ ಶಾಂತಿ ಕಾಪಾಡಬೇಕು ಮತ್ತು ಭಾರತೀಯ ಸಂಸ್ಕೃತಿಯ ಮಹಾನ್ ಪರಂಪರೆ ಹಾಗೂ ಎಲ್ಲ ಧರ್ಮಗಳ ಗೌರವವನ್ನು ಸಂರಕ್ಷಿಸಬೇಕೆಂದೂ ವಿನಂತಿಸಿದೆ. ಈ ಕುರಿತು ಪ್ರಧಾನಿಯವರ ಮನವಿಯುಳ್ಳ ಜಾಹೀರಾತು ಈಗಾಗಲೇ ವಿವಿಧ ಬಾಷೆಗಳ ಮಾಧ್ಯಮಗಳಲ್ಲಿ ಪ್ರಕಟವಾಗಿವೆ.

ಯಾರೊಬ್ಬರೂ ಉದ್ರೇಕಕಾರಿಯಾಗಿ ವರ್ತಿಸಬಾರದೆಂದು ರಾಜ್ಯ ಸರಕಾರಗಳೂ ಜನತೆಯನ್ನು ಜಾಹೀರಾತುಗಳ ಮೂಲಕ ವಿನಂತಿಸಿವೆ.

ನಿಜವಾಗಿ, ತೀರ್ಪು ಏನೇ ಬಂದರೂ ಗೌರವಿಸುತ್ತಾ ಸರಿ ಕಾಣದಿದ್ದರೆ ಮೇಲ್ಮನವಿ ಸಲ್ಲಿಸುವುದು ಸಾಮಾನ್ಯ ವಾಡಿಕೆ. ಹಾಗೆಯೇ ಮಾಧ್ಯಮಗಳು; ನ್ಯಾಯಾಲಯದ ತೀರ್ಪು ಮತ್ತು ಸಂಬಂಧಿತ ಚರ್ಚೆ ಹಾಗೂ ವಾರ್ತೆಗಳ ಪ್ರಕಟನೆಯಲ್ಲಿಯೂ ಸಂಯಮ, ಎಚ್ಚರ ಮತ್ತು ಮಿತಿ ಪಾಲಿಸುವ ಅಗತ್ಯವಿದೆ.

ಕೇಂದ್ರ–ರಾಜ್ಯ ಸರಕಾರಗಳು ದೇಶದಾದ್ಯಂತ ಭದ್ರತಾ ವ್ಯವಸ್ಥೆಗಳನ್ನು ಪ್ರಬಲಗೊಳಿಸಿವೆ. ವಿವಾದಾಸ್ಪದ ಭೂಮಿಯಿರುವ ಅಯೋಧ್ಯೆ ಹಾಗೂ ಉತ್ತರ ಪ್ರದೇಶದಾದ್ಯಂತ ಅತಿ ಕಟ್ಟೆಚ್ಚರವನ್ನು ಘೋಷಿಸಲಾಗಿದೆ.

ಬಾಬರಿ ಮಸೀದಿಯನ್ನು 1558ರಲ್ಲಿ ನಿರ್ಮಿಸಲಾಗಿತ್ತು. 1857ರ ಸಿಪಾಯಿ ದಂಗೆಯ ತನಕ ಅಲ್ಲಿ ಹಿಂದು ಮತ್ತು ಮುಸ್ಲಿಮರು ಯಾವುದೇ ತಕರಾರಿಲ್ಲದೆ ಆರಾಧನೆ ನಡೆಸುತ್ತಿದ್ದರು. ಬಾಬರಿ ಮಸೀದಿಗೆ ಸೇರಿರುವ ಸ್ಥಳದಲ್ಲಿ ಮಂದಿರ ನಿರ್ಮಿಸಬೇಕೆಂದು 1885ರಲ್ಲಿ ಫೈಝಾಬಾದ್ ಉಪ ನ್ಯಾಯಾಧೀಶರಲ್ಲಿ ಮಹಂತ ರಘುಬೀರ್‌ದಾಸ್ ಪ್ರಥಮವಾಗಿ ದಾವೆ ದಾಖಲಿಸಿದರು. ಸ್ವಾತಂತ್ರ್ಯದ ಬಳಿಕ 1949 ಡಿಸೆಂಬರ್ 22ರಂದು ಅರ್ಧರಾತ್ರಿ ಅಕ್ರಮವಾಗಿ ಪ್ರವೇಶಿಸಿ ಶ್ರೀರಾಮ ವಿಗ್ರಹವನ್ನು ಮಸೀದಿಯೊಳಗೆ ಪ್ರತಿಷ್ಠಾಪಿಸಲಾದ ಬಳಿಕ ಸಮಸ್ಯೆಯು ಹಿಂದೂ–ಮುಸ್ಲಿಮ್ ಸಂಘರ್ಷವಾಗಿ ಭುಗಿಲೆದ್ದಿತು. 1950 ಜನವರಿ 16ರಂದು ಗೋಪಾಲ್ ಸಿಂಗ್ ವಿಶಾರದ್ ಸಲ್ಲಿಸಿದ ದಾವೆಯಿಂದ ಆರಂಭವಾದ ಕಾನೂನು ಹೋರಾಟವು ಈಗ ಹಿಂದೂ ಮುಸ್ಲಿಮ್ ಸಂಘಟನೆಗಳ ಅಭಿಮಾನದ ಭಾವುಕ ಪ್ರಶ್ನೆಯಾಗಿ ಮಾರ್ಪಟ್ಟಿದೆ. ಕೆಲವು ಶಕ್ತಿಗಳು ಈ ಸಮಸ್ಯೆಯನ್ನು ಎರಡು ಧರ್ಮಗಳು ಮತ್ತು ಅಮಾಯಕ ಧರ್ಮ ವಿಶ್ವಾಸಿಗಳ ಮಧ್ಯೆ ಶಾಶ್ವತ ವೈರ ವಿದ್ವೇಷದ ಸಂಘರ್ಷವಾಗಿ ಉಳಿಸಲು ಪ್ರಯತ್ನಿಸುತ್ತಿವೆ; ಅದರಿಂದ ಗರಿಷ್ಠ ಲಾಭಪಡೆದು ಅಧಿಕಾರ ಭದ್ರಪಡಿಸಲು ರಾಜಕೀಯ ಪಕ್ಷಗಳೂ ಸ್ಪರ್ಧಿಸುತ್ತಿವೆ.

1992ರ ಡಿಸೆಂಬರ್ 6ರಂದು ಬಿ.ಜೆ.ಪಿ. ಮತ್ತು ಸಂಘ ಪರಿವಾರ ಸೇರಿ ಕೆಡಹಿದ ಬಾಬರಿ ಮಸೀದಿಯು ವಾಸ್ತವದಲ್ಲಿ ಹಿಂದೂ ದೇವಾಲಯವಾಗಿತ್ತೇ ಅಥವಾ ಮುಸ್ಲಿಮರ ಮಸೀದಿಯಾಗಿತ್ತೇ ಎಂಬ ಅತ್ಯಂತ ಸಂಕೀರ್ಣ ಪ್ರಶ್ನೆಯನ್ನು ನ್ಯಾಯಾಲಯ ಬಗೆಹರಿಸಬೇಕಾಗಿದೆ. ಹಿಂದು ಮಂದಿರವನ್ನು ಕೆಡಹಿ ಮಸೀದಿ ನಿರ್ಮಿಸಲಾಯಿತೇ, ಮಸೀದಿಯೊಳಗೆ ವಿಗ್ರಹಗಳನ್ನು ಸ್ಥಾಪಿಸಲಾಯಿತೇ, ಶ್ರೀರಾಮ ಜನ್ಮ ಭೂಮಿಯು ಹಿಂದಿನಿಂದಲೇ ಹಿಂದುಗಳ ತೀರ್ಥ ಯಾತ್ರಾ ಸ್ಥಳವಾಗಿತ್ತೇ ಇತ್ಯಾದಿ ಪ್ರಶ್ನೆಗಳ ಬಗ್ಗೆಯೂ ತೀರ್ಪು ನೀಡಬೇಕಾಗಿದೆ. ರಾಮನ ಜನ್ಮಸ್ಥಳವನ್ನು ತೀರ್ಮಾನಿಸಬೇಕಾದದ್ದು ನ್ಯಾಯಾಲಯಗಳಲ್ಲವೆಂದು ಬಿಜೆಪಿ ಬಹಳ ಹಿಂದೆಯೇ ಹೇಳಿದೆ. ನ್ಯಾಯಾಲಯದ ತೀರ್ಪಿನ ದಿನ ಹಿಂದೂ ಧರ್ಮ ಸಂಸತ್ತಿನ ಸಭೆಯನ್ನು ಏರ್ಪಡಿಸಲಾಗಿದೆ.

1992ರಲ್ಲಿ ಕರಸೇವೆಯ ಹಿನ್ನೆಲೆಯಲ್ಲಿ ಬಾಬರಿ ಮಸೀದಿಗೆ ಭದ್ರತೆ ಒದಗಿಸುವಂತೆ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಮತ್ತು ರಾಜ್ಯ ಸರಕಾರ ಗಳಿಗೆ ಕಟ್ಟಾಜ್ಞೆ ನೀಡಿತ್ತು. ಅಂತೆಯೇ ಮಸೀದಿಗೆ ಹಾನಿಯಾಗುವುದಿಲ್ಲ. ಮಾತ್ರವಲ್ಲ, ಕರಸೇವೆಯನ್ನು ಯಾರು ಪ್ರಾಯೋಜಿಸಿದ್ದಾರೋ ಅವರು ಮಸೀದಿಯನ್ನು ಸಂರಕ್ಷಿಸುತ್ತಾರೆಂದೂ ಕೇಂದ್ರ–ರಾಜ್ಯ ಸರಕಾರಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಭರವಸೆ ನೀಡಿದ್ದುವು. ರಾಷ್ಟ್ರೀಯ ಭಾವೈಕ್ಯ ಮಂಡಳಿಯ ವಿಶೇಷ ಸಭೆಯೂ ಹಾಗೆಯೇ ಒತ್ತಾಯಿಸಿತ್ತು. ಇತ್ತೀಚೆಗೆ ಪ್ರಧಾನಿ ಮನಮೋಹನ ಸಿಂಗ್‌ರು ಬಿಡುಗಡೆಗೊಳಿಸಿದ ಸೋಮನಾಥ ಚಟರ್ಜಿಯವರ "ಓರ್ವ ಸಂಸದನ ದಿನಚರಿ" ಎಂಬ ತಮ್ಮ ಆತ್ಮ ಕಥೆಯಲ್ಲಿ ಅಂದಿನ ಘಟನೆಗಳನ್ನು ಚಟರ್ಜಿ ಬಹಿರಂಗಪಡಿಸಿದ್ದಾರೆ. ಮಸೀದಿ ಧ್ವಂಸದ ಸುದ್ದಿ ಕೇಳಿ ಪ್ರಧಾನಿ ನರಸಿಂಹ ರಾವ್‌ರನ್ನು ನಾನು ಫೋನ್‌ನಲ್ಲಿ ಸಂಪರ್ಕಿಸಿದೆ. ಪ್ರಧಾನಿ ವಿಶ್ರಾಂತಿಯಲ್ಲಿರುವರೆಂಬ ಉತ್ತರ ಲಭಿಸಿತು. ಅನಂತರ ಗೃಹ ಸಚಿವರಿಗೆ ಕರೆ ಮಾಡಿದಾಗ ಪರಿಸ್ಥಿತಿ ಹತೋಟಿಯಲ್ಲಿದೆಯೆಂದು ಅಂದಿನ ಉತ್ತರ ಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ತಿಳಿಸಿರುವರೆಂಬ ಪ್ರತಿಕ್ರಿಯೆ ಬಂತು. ಅನಂತರ ನಾಲ್ಕೈದು ತಾಸುಗಳ ಬಳಿಕ ಮಸೀದಿ ನೆಲಸಮವಾಯಿತೆಂಬ ಸುದ್ದಿ ಬಂತು ಎಂದು ಚಟರ್ಜಿ ಸ್ಮರಿಸಿದ್ದಾರೆ.

ಆದ್ದರಿಂದ ಕೇಂದ್ರ ಸಚಿವ ಸಂಪುಟದ ಠರಾವು, ಸರಕಾರಗಳ ಆದೇಶ, ಎಚ್ಚರಿಕೆಯ ಕರೆ ಇತ್ಯಾದಿಗಳಿಂದ ಕೋಮು ಸೌಹಾರ್ದ ಅಥವಾ ಶಾಂತಿ ಪಾಲನೆಯನ್ನು ಸಂಪೂರ್ಣವಾಗಿ ನಿರೀಕ್ಷಿಸುವಂತಿಲ್ಲ. ಶಾಂತ ಜೀವನ, ಸಹಬಾಳ್ವೆ ಮತ್ತು ದೇಶದ ಸುಭದ್ರತೆಯನ್ನು ಬಯಸುವ ಜನರು ಅದನ್ನು ಸ್ವಂತ ಕರ್ತವ್ಯ ಮತ್ತು ಹೊಣೆಗಾರಿಕೆಯೆಂದು ಭಾವಿಸಬೇಕು. ದೇಶವು ನಿಂತಿರುವ ಕವಲು ದಾರಿಯು ಇತಿಹಾಸವನ್ನು ಹಿಂದಕ್ಕೆ ಸಾಗಿಸುವುದಾಗಬಾರದು; ಪ್ರಜಾಸತ್ತೆ–ಜಾತ್ಯಾತೀತತೆ ಮತ್ತು ಅಭಿವೃದ್ಧಿಯನ್ನು ಸಮನ್ವಯಗೊಳಿಸಿ ಮುಂದೆ ಸಾಗಿಸಬೇಕು. ಧರ್ಮದ ಹೆಸರಲ್ಲಿ ಸ್ವಾರ್ಥ ಹಿತಾಸಕ್ತರು ಮುಗ್ಧ ಹೃದಯಗಳಿಗೆ ಮುಳ್ಳು ತಂತಿಗಳನ್ನು ನಾಟದಂತೆ ತಡೆಯಬೇಕು.

ಬಾಬರಿ ಮಸೀದಿಯ ಪತನದ ಬಳಿಕ ಎದ್ದ ಗಲಭೆಗೆ 2000ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ನೂರಾರು ಆರಾಧನಾಲಯಗಳು ಧ್ವಂಸಗೊಂಡಿವೆ. ಆ ಪತನ ಪರಸ್ಪರ ಅಪನಂಬಿಕೆ ಮತ್ತು ದ್ವೇಷದ ವಾತಾವರಣವನ್ನು ಹುಟ್ಟು ಹಾಕಿತು. ಆದ್ದರಿಂದ ಈ ಬಾರಿಯ ತೀರ್ಪು ಬೆಂಕಿ ಉಗುಳುವ ಜ್ವಾಲಾಮುಖಿಯಾಗಬಾರದು. ಇಂದು ಬಹುಸಂಖ್ಯಾತ ಸಮುದಾಯವು ದೇಶದ ಸಂವಿಧಾನವನ್ನು, ಧಾರ್ಮಿಕ ಸೌಹಾರ್ದವನ್ನು, ಗೌರವವನ್ನು ಉಳಿಸುವ, ಬೆಳೆಸುವ ಬಗ್ಗೆ ಮತ್ತಷ್ಟು ಜವಾಬ್ದಾರಿಕೆಯಿಂದ ನಡೆದುಕೊಳ್ಳುವ ಅಗತ್ಯವಿದೆ. ಅದೇ ರೀತಿ ಅಲ್ಪಸಂಖ್ಯಾತ ಸಮುದಾಯಗಳು ತಮ್ಮ ಅಂತರಂಗವನ್ನು ಶೋಧಿಸಿ ದ್ವೇಷ ಮತ್ತು ವಿಷವನ್ನು ಸ್ವತಃ ತೊರೆಯಲು ಮುಂದಾಗಬೇಕಾಗಿದೆ.

**Volume: 33, Issue: 29,** Printed & Published by **M. Sadullah** on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: **Abdul Kader Kukkila,** Chief Editor: **P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)